(Mr. SPEAKER)

institutions cannot be raised by way of an adjournment motion has been accepted in a number of rulings.

Motion to be admissible must have some relation to the conduct or default of Government and must be in the nature of criticism of Government and its actions. Matters which are not primarily the concern of Government cannot be the subject matter of an adjournment motion. There are a host of other rulings which have held that matters in which the Government has no administrative responsibility cannot be the subject of an adjournment motion.

In the light of the above, I am unable to give my consent now sought by the Members.

BUDGET ESTIMATES FOR 1967-68—DEMAND FOR GRANTS

Demand No. 27

SRI G. NARAYANA GOWDA (Minister for Social Welfare).—Sir, on the recommendation of the Governor, I beg to move :

> "That a sum not exceeding Rs. 2,98,65,000 be granted to the Government to defray the charges which will come in course of payment during the financial year for the period ending 31st day of March 1968 in respect of 'Miscellaneous; Social and Developmental Organisations'."

MR. SPEAKER.—Motion moved :*

> "That a sum not exceeding Rs. 2,98,65,000 be granted to the Government to defray the charges which will come in course of payment during the financial year for the period ending 31st day of March 1968 in respect of 'Miscellaneous, Social and Developmental Organisations'."

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—ಸನ್ಮಾನ್ಯ ಸಭಾಧ್ಯಕ್ಷರೇ, ಮೈಸೂರು ರಾಜ್ಯದ ಆಯವ್ಯಯ ಪಟ್ಟಿಯ 27ನೇ ಡಿಮ್ಯಾಂಡ್ ಮೇಲೆ ಇಂದು ಚರ್ಚೆ ಇದೆ. ಈ ಬೇಡಿಕೆ ಈ ದಿವಸ ನಮ್ಮ ಮುಂದೆ ಚರ್ಚೆಯಲ್ಲಿದೆ. ಯಾವ ಜನಾಂಗ ಬಡತನದ ಬೇಗೆಯಲ್ಲಿ ಬಳಲಿದೆಯೋ, ಯಾವ ಅನಕ್ಷರತೆಯ ಸಂಕೋಲೆಯಲ್ಲಿ ಬಿಗಿಯಲ್ಪಟ್ಟಿದೆಯೋ, ಯಾವ ಜನಾಂಗ ಶೈಕ್ಷಣಿಕ ಹಿತಾಸಕ್ತಿ ಪಡೆದಿಲ್ಲವೋ, ಯಾವ ಜನಾಂಗ ಆರ್ಥಿಕ ಪ್ರಗತಿಯಲ್ಲಿ ಮುಂದುವರೆದಿಲ್ಲವೋ, ಯಾವ ಜನಾಂಗ ಸಾಮಾಜಿಕ ಅನ್ಯಾಯಕ್ಕೆ ತಕ್ಕ ರಕ್ಷಣೆ ಪಡೆದಿಲ್ಲವೋ, ಮತ್ತು ಯಾವ ಜನಾಂಗ ಶೋಷಣೆಯಿಂದ ವಿಮುಕ್ತಿಯಾಗಿಲ್ಲವೋ ಅಂತಹ ಜನಾಂಗದ ಕಲ್ಯಾಣಕ್ಕಾಗಿ ರಚಿತವಾಗಿರುವ ಈ ಡಿಮ್ಯಾಂಡ್ ಈಗ ನಮ್ಮ ಮುಂದೆ ಚರ್ಚೆಗೆ ಬಂದಿದೆ. ಇದು ಎಲ್ಲಕ್ಕೂ ಮಿಗಿಲಾಗಿ ರಾಜ್ಯಾಂಗದ ಸಂವಿಧಾನದ 46ನೆಯ ವಿಧಿಗೆ ಅನುಗುಣವಾಗಿ ತತ್ವ ನಿರೂಪಣೆಯನ್ನು ಈ ಡಿಮ್ಯಾಂಡ್ ಪಡೆದಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತಸಾಧಿಸುವ ಬೇಡಿಕೆ ಇದಾಗಿದ್ದರೂ ಸರ್ಕಾರ ಹರಿಜನ ಮತ್ತು ಗಿರಿಜನ ಹಾಗೂ ಗುಡ್ಡನಾಡಿನ ಜನರ ಹಿತ ಸಾಧಿಸಲು ಪ್ರಗತಿಪರವಾದ ಯೋಜನೆ

---

* Moved upon the recommendation of the Governor.

ಯನ್ನೇನೂ ಈ ಡಿಮ್ಯಾಂಡ್ ಮೂಲಕ ಮಾಡಿಲ್ಲ. ಪರಿಶಿಷ್ಟ ಜನಾಂಗ ಇಂದು ರಾಜ್ಯದಲ್ಲಿ ಐದನೆಯ ಒಂದು ಭಾಗವಿದೆ. ಹರಿಜನ ಮತ್ತು ಗಿರಿಜನರ ಪರಿಸ್ಥಿತಿ ಪ್ರಗತಿಯಾಗದ ಹೊರತು ರಾಜ್ಯ ಪ್ರಗತಿಯಾಗುವುದಿಲ್ಲ. ಮಹಾತ್ಮ ಗಾಂಧಿಯವರು ಹೇಳಿದರು. ಅಸ್ಪೃಶ್ಯತೆ ಅಳಿಯದಿದ್ದರೆ ಗಳಿಸಿದ ಸ್ವಾತಂತ್ರ್ಯ ಉಳಿಯುವುದಿಲ್ಲವೆಂದು. ಅದಕ್ಕಾಗಿ ಎಷ್ಟೋ ಸಾರಿ ಮಹಾತ್ಮ ಗಾಂಧಿಯವರೇ ಉಪವಾಸ ಮಾಡಿದರು. ರಾಜ್ಯ ಸರ್ಕಾರ ಕಳೆದ 20 ವರ್ಷಗಳಿಂದಲೂ ಈ ಜನಾಂಗದವರ ಪ್ರಗತಿ ಬಗ್ಗೆ ಯಾವುದನ್ನೂ ಸಾಕಷ್ಟು ಕ್ರಮಬದ್ಧವಾಗಿ ಮಾಡಲಿಲ್ಲ. ಈ ಸರ್ಕಾರದವರು ಹರಿಜನ ಗಿರಿಜನರ ಬಗ್ಗೆ ಮಾಡಿರತಕ್ಕ ಅನ್ಯಾಯಗಳನ್ನು ಒಂದೊಂದರಂತೆ ಈ ಮಾನ್ಯ ಸಭೆಯ ಮುಂದೆ ಪ್ರತ್ಯಕ್ಷವಾಗಿ ನಿವೇದಿಸಲು ಇಚ್ಛೆಪಡುತ್ತೇನೆ. ಈ ಜನಾಂಗದ ಹಿತಸಾಧನೆಗೆ 20 ವರ್ಷಗಳಿಂದ ಈ ಸರ್ಕಾರ ಎಷ್ಟರಮಟ್ಟಿಗೆ ಲೋಪವನ್ನುಂಟು ಮಾಡಿದೆ. ಯಾವ ಯಾವ ಕಾನೂನುಗಳನ್ನು ಜಾರಿಗೆ ತಂದಿದ್ದಾರೆ, ಮತ್ತು ಜಾರಿಗೆ ತಂದ ಕಾನೂನುಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡಿವೆ ಎನ್ನತಕ್ಕ ಒಂದು ಅಂಶವನ್ನು ಮಾತ್ರ ಈ ಸಭೆಯ ಮುಂದೆ ನಾನು ಹೇಳುತ್ತೇನೆ. ಕಳೆದ 5 ವರ್ಷಗಳಲ್ಲಿ 3ನೇ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದು ಈ ಷೆಡ್ಯೂಲ್ಡ್ ಟ್ರೈಬ್ಸ್‌ಗೆ 55.00 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿತ್ತು. ಆದರೆ ಖರ್ಚು ಮಾಡಿದ್ದು ಕೇವಲ 31·71 ಲಕ್ಷ ಇನ್ನುಳಿದ 23·29 ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಇದಕ್ಕೆ ಕಾರಣಕರ್ತರು ಯಾರೆಂದರೆ ಸರ್ಕಾರ. ಅದೂ ಅಲ್ಲದೆ ಸರ್ಕಾರ ಆಗಾಗ್ಗೆ ಅಂಕಿ ಅಂಶಗಳನ್ನು ಸರಿಯಾಗಿ ಶೇಖರಿಸಿಲ್ಲ ಈ ಲ್ಯಾಪ್ಸ್‌ಗೆ ಮೂಲಕಾರಣರಾದಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿಲ್ಲ. ಅದೇ ರೀತಿಯಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 46 ಲಕ್ಷ ರೂಪಾಯಿಗಳನ್ನು ಡಿನೋಟಿಫೈಡ್ ಟ್ರೈಬ್ಸ್‌ಗೆ ನಿಗದಿಮಾಡಿದರು.

2-30 P.M.

ಆದರೆ ಆ ಬಾಬಿನಲ್ಲಿ 31.71 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. 15.79 ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ನೊಮ್ಯಾಡಿಕ್ ಕಮ್ಯುನಿಟಿಗೆ 36 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರೂ 19.38 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. 16.62 ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಷೆಡ್ಯೂಲ್‌ಕ್ಯಾಸ್ಟ್‌ನವರಿಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 275 ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿ ಕೇವಲ 200.26 ರೂಪಾಯಿಗಳನ್ನು ಖರ್ಚುಮಾಡಿ 74.74 ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಇದು ಇವರ ದಕ್ಷತೆಯ ಪ್ರದರ್ಶನವಲ್ಲವೇ ? ಹರಿಜನರ ಪ್ರಗತಿಯನ್ನು ಸಾಧಿಸಲು ರಾಜ್ಯಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಸರ್ಕಾರ ಅದಕ್ಷತೆಯಿಂದ ಕೂಡಿದೆ ಎಂದು ಹೇಳೋಣವೇ ? ಇತರೇ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ 28 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರೂ 18.92 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದಾರೆ. ಇಲ್ಲಿಯೂ 9.08 ಲಕ್ಷ ಲ್ಯಾಪ್ಸ್ ಮಾಡಿದ್ದಾರೆ. 3ನೇ ಪಂಚವಾರ್ಷಿಕ ಯೋಜನೆಯ ಸಮಾಜ ಕಲ್ಯಾಣ ಇಲಾಖೆಯ ನೈಜಚಿತ್ರ ಈ ರೀತಿ ಇದೆ. ಲಕ್ಷೋಪಲಕ್ಷ ರೂಪಾಯಿಗಳನ್ನು ಈ ರೀತಿ ಲ್ಯಾಪ್ಸ್ ಮಾಡಿರುವಾಗ ಈ ಕಾಂಗ್ರೆಸ್ ಸರ್ಕಾರದವರು ಹಿಂದುಳಿದಿರತಕ್ಕ ಹರಿಜನರ ಹಿತಸಾಧನೆಯನ್ನು ಮಾಡಿದ್ದೇವೆಂದು ನಮ್ಮ ಮುಂದೆ ಹೇಳಲು ಶಕ್ತರಾಗಿಲ್ಲ. ಇವರ ಆಡಳಿತದಲ್ಲಿ ದಕ್ಷತೆಯಿಲ್ಲ. ಬಾವಿಗಳಿಗೆ, ಮನೆಗಳಿಗೆ ಹಣವನ್ನು ಒದಗಿಸಿ, ಸುಮ್ಮನೆ ಕಳುಹಿಸಿದ್ದೇವೆ. ಹಣವನ್ನು ಖರ್ಚುಮಾಡುವುದು ಬೇಡಿ, ಲ್ಯಾಪ್ಸ್ ಮಾಡಿ ಎಂದು ಸೂಚನೆಗಳನ್ನೇನಾದರೂ ಅಧಿಕಾರಿಗಳಿಗೆ ಕೊಟ್ಟಿದ್ದೀರಾ ? ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷ ಸಹ 8.14 ಲಕ್ಷ ಲ್ಯಾಪ್ಸ್ ಮಾಡಿದ್ದೀರಿ. ಅಂತೂ, ಈ ಮೂರನೇ ಯೋಜನೆಯಲ್ಲಿ 1 ಕೋಟಿ 3ಃ ಲಕ್ಷ ಹಣವನ್ನು ಲ್ಯಾಪ್ಸ್ ಮಾಡಿಬಿಟ್ಟಿದ್ದೀರಿ. ಇದೇ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 443.140 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಾರೆ. ಈ ಹಣದಲ್ಲಿ ಈ ವರ್ಷಕ್ಕೆ 65 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದರು. ಇದರಲ್ಲಿಯೂ ಈ ವರ್ಷ ಸಾಕಷ್ಟು ಹಣವನ್ನು ಖರ್ಚುಮಾಡಿಲ್ಲ. ಈ ರೀತಿ ಇವರು ಖರ್ಚು ಮಾಡುವುದಕ್ಕೆ ಹೊರಟರೆ ಹರಿಜನ ಗಿರಿಜನರ ಪ್ರಗತಿ ಆಗುತ್ತದೆಯೇ ? ಇದನ್ನು ಜನತೆಯೂ ಕೂಡ ಯೋಚನೆ ಮಾಡಿದ್ದಾರೆ.

ಇನ್ನು ಹರಿಜನರ ಹಾಸ್ಟಲುಗಳ ವಿಚಾರದಲ್ಲಿ ಹೇಳುವುದಾದರೆ ಈ ಹಾಸ್ಟಲುಗಳಲ್ಲಿ ಬೇರೆ ಜನಾಂಗದವರಿಗಾಗಿ ಮೀಸಲಾಗಿಟ್ಟಿರತಕ್ಕ ಸೀಟುಗಳಲ್ಲಿ 1,200 ಸೀಟುಗಳು ಖಾಲಿ ಬಿದ್ದಿವೆ. ಸರ್ಕಾರದವರು ಆಗಿಂದಾಗ್ಗೆ ಹರಿಜನರ ಅಭಿವೃದ್ಧಿಯ ಸಂಬಂಧದಲ್ಲಿ ಮಾಡಿದಂತಹ ಕಾನೂನುಗಳನ್ನು ಕಾರ್ಯಗತ ಮಾಡುವುದಕ್ಕೆ ಯಾವ ಕಾನೂನನ್ನೂ ಜಾರಿಗೆ ತರುವುದಿಲ್ಲ. ಹೀಗಾದರೆ ಹರಿಜನ-ಗಿರಿಜನರ ಪ್ರಗತಿ ಕಾರ್ಯ ಸಾಧಿಸಲು ಕಾನೂನುಗಳನ್ನು ಮಾಡಿ ಪ್ರಯೋಜನವೇನು ?

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಅವರಿಂದ ಹರಿಜನರಿಗೆ ರಕ್ಷಣೆ ಕೊಡದೇ ಹೋದರೆ ಅವರ ಪ್ರಗತಿ ಹೇಗೆ ಸಾಧ್ಯ? ಸರ್ಕಾರದವರು ಉದಾರ ನೀತಿಯನ್ನು ಅನುಸರಿಸಿ "Allocation of welfare funds to backward classes from general development sector, Chapter VIII, Vol. I of III planನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದರು. 100ಕ್ಕೆ 18ರಂತೆ ಜನರಲ್ ಡೆವಲಪ್‌ಮೆಂಟ್ ಫಂಡಿನಿಂದ ಹರಿಜನರ ಕಲ್ಯಾಣಕ್ಕೋಸ್ಕರ ಖರ್ಚು ಮಾಡಬೇಕೆಂದು ಈ ಆರ್ಡರಿನಲ್ಲಿ ಸೂಚನೆ ಇದೆ. ಡೆಪ್ಯುಟಿ ಕಮೀಷನರು ಎಲ್ಲಾ ತಾಲ್ಲೂಕು ಬೋರ್ಡ್‌ಗಳಿಗೂ ಮತ್ತು ಎಲ್ಲಾ ಎನ್.ಇ.ಎಸ್. ಬ್ಲಾಕುಗಳಿಗೂ ಈ ಆರ್ಡರನ್ನು ಜಾರಿಗೆ ತರಲು ಸರ್ಕ್ಯುಲರನ್ನು ಕಳುಹಿಸಿದ್ದಾರೆ. ಆದರೆ ಪರಿಣಾಮ ಏನಾಗಿದೆ, 100ಕ್ಕೆ 18 ರೂಪಾಯಿಗಳಂತೆ ಆ ಹಣವನ್ನು ಖರ್ಚು ಮಾಡಿದ್ದಾರೆಯೇ? ಹರಿಜನರ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ಎನ್ನುವ ಬಗ್ಗೆ ಅಂಕಿಅಂಶಗಳನ್ನು ಶೇಖರಣೆ ಮಾಡಲಿಲ್ಲ. ಇಲಾಖೆಗಳಿಂದ ಸರ್ಕಾರದವರು ವರದಿಯನ್ನು ತರಿಸಿಕೊಂಡಿದ್ದಾರೆಯೇ? ಏನೂ ಇಲ್ಲ. 100ಕ್ಕೆ 18 ರೂಪಾಯಿಗಳಂತೆ ಜನರಲ್ ಡೆವಲಪ್‌ಮೆಂಟ್ ಫಂಡಿನಿಂದ ಹರಿಜನರ ಕಲ್ಯಾಣಕ್ಕೋಸ್ಕರ ಖರ್ಚು ಮಾಡಬೇಕೆಂದು ಸರ್ಕಾರದವರು ಏನೊಂದು ಆಜ್ಞೆಯನ್ನು ಹೊರಡಿಸಿದ್ದರೋ ಅದರಂತೆ ಖರ್ಚು ಮಾಡಿಲ್ಲ.

ಇನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಎಂಪ್ಲಾಯ್‌ಮೆಂಟ್ ಸೆಲ್ ಎಂದು ಮಾಡಿದ್ದಾರೆ. ಅವರ ಪ್ರಕಾರ 100ಕ್ಕೆ 18ರಂತೆ ಹರಿಜನ-ಗಿರಿಜನರಿಗೆ ಉದ್ಯೋಗಗಳನ್ನು ಪ್ರತಿಯೊಂದು ಇಲಾಖೆಯಲ್ಲೂ ಗೊತ್ತಾದ ಹಂಚಿಕೆ ಪ್ರಮಾಣದ ಪ್ರಕಾರ ಹರಿಜನ-ಗಿರಿಜನರಿಗೆ ಉದ್ಯೋಗಗಳು ದೊರೆಯುತ್ತಾ ಇವೆಯೇ? ಅದರಲ್ಲಿ ಪ್ರಗತಿಯಾಗಿವೆಯೇ? ಆ ಬಗ್ಗೆ ಎಷ್ಟರಮಟ್ಟಿನ ಪ್ರಗತಿ ಆಗಿದೆ ಎನ್ನುವ ವಿಚಾರದಲ್ಲಿ ಆ ಸೆಲ್ ಏನಾದರೂ ಸರ್ಕಾರಕ್ಕೆ ವರದಿ ಮಾಡಿವೆಯೇ? ಅದಕ್ಕೋಸ್ಕರವಾಗಿ ನಾನು ಸಲಹೆ ಮಾಡುವುದೇನೆಂದರೆ ಒಂದು ಬಜೆಟ್ಟರಿ ವಾಚಿಂಗ್ ಸೆಲ್ ಮಾಡಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿ ಮಾಡಿರತಕ್ಕ 443.140 ಲಕ್ಷ ರೂಪಾಯಿಗಳು ಈ ಇಲಾಖೆಯಲ್ಲಿ ಸರಿಯಾಗಿ ಖರ್ಚು ಮಾಡುತ್ತಿದೆಯೇ? ಇಲ್ಲವೇ ಎಂಬುದನ್ನು ನೋಡಿ ಈ ಸೆಲ್ ಕಾಯಬೇಕು, ಈಗ ಒದಗಿಸಿರತಕ್ಕ 443.140 ಲಕ್ಷ ರೂಪಾಯಿಗಳನ್ನು ಪೂರ್ತಿ ಖರ್ಚು ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಈ ರೀತಿ ಹೆಚ್ಚು ಹೆಚ್ಚು ಹಣವನ್ನು ಲ್ಯಾಪ್ಸ್ ಮಾಡದಿದ್ದರೆ ಹರಿಜನ ಮತ್ತು ಗಿರಿಜನರ ಪ್ರಗತಿ ಸಾಧಿಸಲು ಸಾಧ್ಯವಿಲ್ಲ.

ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ಲಕ್ಷೋಪಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಆ ಹಣವನ್ನು ಜನಗಳ ಪ್ರಗತಿಗಾಗಿ ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಯಲ್ಲಿ ಕಾಮಗಾರಿ ಕೆಲಸಕಾರ್ಯವನ್ನು ಮಾಡುವುದಕ್ಕೆ ಕಂಟ್ರಾಕ್ಟರುಗಳಿದ್ದಾರೆ. ಕ್ಲಾಸ್ I, ಕ್ಲಾಸ್ II, ಕ್ಲಾಸ್ III, ಕ್ಲಾಸ್ IV ಎಂದು ವಿವಿಧ ದರ್ಜೆ ಕಂಟ್ರಾಕ್ಟರುಗಳನ್ನು ನಿಗದಿ ಮಾಡಿದ್ದಾರೆ. ಈ ಕಂಟ್ರಾಕ್ಟ್ ಕೆಲಸವನ್ನು ಸಣ್ಣ ಹರಿಜನಗಿರಿಜನರು, ಹಕ್ಕಿಪಿಕ್ಕರು, ಬುರಡೆ ದಾಸರು, ಕೊರಚ ಕೊರಮರು, ಒಡ್ಡರು, ಮಾಡಿಸುತ್ತೇವೆಂದು ಮುಂದೆ ಬಂದರೆ ಅವರಿಗೆ ಸಾಲ್ವೆನ್ಸಿ ಸರ್ಟಿಫಿಕೇಟ್ ಪಡೆಯಬೇಕೆಂಬ ನಿಯಮವನ್ನು ಹಾಕಿದ್ದಾರೆ. ಸುಮಾರು 32 ಲೇಬರ್ ಕಾಂಟ್ರಾಕ್ಟ್ ಸೊಸೈಟಿಗಳನ್ನು ಸ್ಥಾಪನೆ ಮಾಡಬೇಕೆಂದು ಕೇಂದ್ರ ಸರ್ಕಾರ 92 ಸಾವಿರ ರೂಪಾಯಿಗಳನ್ನು ಒದಗಿಸಿತ್ತು. ಅದನ್ನೂ ಸಹ ಸರ್ಕಾರದವರು ಲ್ಯಾಪ್ಸ್ ಮಾಡಿದ್ದಾರೆ. ಆಮೇಲೆ ಕೇಂದ್ರ ಸರ್ಕಾರದ ಆಜ್ಞೆಯ ಮೂಲಕ ಟೆಂಡರ್ ಕರೆಯದೆ 25 ಸಾವಿರ ರೂಪಾಯಿಗಳವರೆಗೂ ಲೇಬರ್ ಕಾಂಟ್ರಾಕ್ಟ್ ಸೊಸೈಟಿಗಳ ಮೂಲಕ ಪಬ್ಲಿಕ್ ವರ್ಕ್ಸ್ ಇಲಾಖೆಯು ಕೆಲಸ ಕೊಡಬಹುದು ಎಂದು ಸೂಚನೆ ಇತ್ತು. ಆದರೆ ಇತ್ತೀಚೆಗೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಆ ನಿಯಮವನ್ನು ಬದಲಾವಣೆ ಮಾಡಿ 25 ಸಾವಿರ ರೂಪಾಯಿಗಳವರೆಗೂ ಲೇಬರ್ ಕಾಂಟ್ರಾಕ್ಟ್ ಸೊಸೈಟಿಗಳಿಗೆ ಕೆಲಸ ಒದಗಿಸುವ ಬದಲಾಗಿ ಈಗ 10 ಸಾವಿರ ರೂಪಾಯಿಗಳವರೆಗೆ ಮಾತ್ರ ಮಾಡಬಹುದು ಎಂದು ಒಂದು ಆಜ್ಞೆಯನ್ನು ತಿದ್ದುಪಡಿ ಮಾಡಿದ್ದಾರೆ. ಇದರಿಂದ ಹರಿಜನರಿಗೆ ತೊಂದರೆಯಾಗಿದೆ. ಬಡವರು ಕಂಟ್ರಾಕ್ಟ್ ಮಾಡಲು ಸಾಧ್ಯವಿಲ್ಲ.

ಆಮೇಲೆ 7-2-1963ರಲ್ಲಿ "Instructions sent by Central Government to state on the resolutions of the Central Harijan's Advisory Board" ಪ್ರಕಾರ ಕೋ-ಆಪರೇಟೀವ್ ಸೆಕ್ಟಾರಿನಲ್ಲಿ ವಿಶೇಷ ರೀತಿ ಹಿಂದುಳಿದ ವರ್ಗದವರಿಗೆ ಪ್ರತ್ಯೇಕ ಸೊಸೈಟಿಗಳನ್ನು ಸ್ಥಾಪನೆ ಮಾಡಬೇಕೆಂದು ಸೂಚನೆ ಇದೆ. ಲಕ್ಷೋಪಲಕ್ಷ ರೂಪಾಯಿಗಳನ್ನು ಈ ಬಗ್ಗೆ ಖರ್ಚು ಮಾಡಬೇಕೆಂದು ಕೇಂದ್ರ ಸರ್ಕಾರದವರ ಆದೇಶ ಇದೆ. ಫಾರೆಸ್ಟ್ ಮತ್ತು ಸಿರಿಕಲ್ಚರ್ ಇಲಾಖೆ

ಗಳಲ್ಲಿಯೂ ಹರಿಜನರು ಮತ್ತು ಗಿರಿಜನರಿಗೆ ಪ್ರಾಶಸ್ತ್ಯ ಕೊಡಬೇಕೆಂದಿದೆ. ಇವರೆವಿಗೂ ಕೊಟ್ಟಿಲ್ಲ. ನಿರ್ದಿಷ್ಟವಾಗಿ ಎಲ್ಲಾ ಇಲಾಖೆಯಲ್ಲಿ 18 ಪರ್ಸೆಂಟ್ ಕೆಲಸಗಳನ್ನು ಹರಿಜನರು ಮತ್ತು ಗಿರಿಜನರಿಗೆ ಕೊಡಬೇಕೆಂದಿದೆ. ಆ ನಿಯಮದಂತೆ ಸರ್ಕಾರದವರು ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಇದು ರಾಜ್ಯಾಂಗಬದ್ಧವಾದ ವಿಷಯ.

ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ Rehabilitation of landless agricultural laboursಗಾಗಿ ಕಾಲನಿ ಮಾಡುವುದಕ್ಕಾಗಿ Go. No. A.F. 193 AMS 61/20-12-61 ಪ್ರಕಾರ ಒಂದು ಯೋಜನೆಯನ್ನು ತಯಾರು ಮಾಡಿದರು. ಅದಕ್ಕೆ 6,00,372 ರೂಪಾಯಿಗಳನ್ನು ಒದಗಿಸಿದರು. ಅದಕ್ಕೆ ಬೇಕಾದ 525 ಎಕರೆ ಜಮೀನನ್ನು ಮೈಸೂರು ಮತ್ತು ಶಿವಮೊಗ್ಗಾ ಜಿಲ್ಲೆಗಳಲ್ಲಿ ಒದಗಿಸಲಿಲ್ಲ. ಹರಿಜನರ ವ್ಯವಸಾಯ ಕೂಲಿಗಳ ಕಾಲೋನಿ ಕಟ್ಟಬೇಕೆಂದು ಯೋಜನೆಯನ್ನು ತಯಾರಿಸಿದರೇ ವಿನಾ ಆ ದುಡ್ಡು ಏನಾಯಿತು ? 525 ಎಕರೆ ಜಮೀನು ಸಿಕ್ಕಿತೇ ? ಆ ಜಮೀನನ್ನು ಫಾರೆಸ್ಟ್ ಇಲಾಖೆಯವರು ಮತ್ತು ರೆವಿನ್ಯೂ ಇಲಾಖೆಯವರು ಮತ್ತು ಎಕ್ಸೈಜ್ ಇಲಾಖೆಯವರು ಕೊಟ್ಟಿರಲಿಲ್ಲವೇ ! ಹರಿಜನರ ವ್ಯವಸಾಯ ಕೂಲಿಗಳ ಕಾಲೋನಿ ರಚಿಸಲು ಒದಗಿಸಿದ್ದಂತಹ 1,20,07,444 ಹಣವನ್ನು ಖರ್ಚುಮಾಡದೆ ಕೂಲಿಗಳು ಸದಾ ಸಂಕಷ್ಟದಲ್ಲಿರುವಂತೆ ಮಾಡಿದ ಈ ಸರ್ಕಾರವನ್ನು "ದ್ರೋಹಿ ಸರ್ಕಾರ" ಎಂದು ಕರೆಯೋಣವೇ ? ಗಾಂಧಿಭಕ್ತರು ಎಂದು ಹೇಳಿಕೊಂಡು, ರಾಜ್ಯಾಂಗವನ್ನು ಕೈಯಲ್ಲಿ ಹಿಡಿದುಕೊಂಡು ಈ ರಾಜ್ಯವನ್ನು ಆಳುವುದಕ್ಕೆ ಹೊರಟಿರ ತಕ್ಕ ನೀವು ಈ ಸ್ಥಾನದಲ್ಲಿ ಇರುವುದಕ್ಕೆ ಅರ್ಹರೇ ಎಂದು ನಾನು ಕೇಳುತ್ತೇನೆ. ಇದನ್ನು ತಾವು ವಿಮರ್ಶೆಮಾಡಿ ಉತ್ತರ ಹೇಳಬೇಕು.

ಇನ್ನು G.O. No. R.D.F. 73T.S.W 62/10-1-63ರ ಪ್ರಕಾರ ನೀರಾವರಿ ಬಾವಿ ಗಳನ್ನು ತೋಡತಕ್ಕ ಯೋಜನೆಯಲ್ಲಿ ಹರಿಜನರು ಮತ್ತು ಗಿರಿಜನರಿಗೆ ಪ್ರಾಶಸ್ತ್ಯವನ್ನು ಕೊಡಬೇಕು ಮತ್ತು ಅವರಿಗೆ ಅದರಲ್ಲಿ 18 ಪರ್ಸೆಂಟ್ ರಿಜರ್ವ್ ಆಗಿ ಇಡಬೇಕೆಂದಿದೆ. ಆದರೆ 3ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸರ್ಕಾರದ ಆಜ್ಞೆಯ ಪ್ರಕಾರ ಹರಿಜನರಿಗೆ ಈ ಆರ್ಡರಿನಲ್ಲಿ ನಮೂದಿ ಸಿರುವಂತೆ ಗೊತ್ತಾದ ಪ್ರಮಾಣದಲ್ಲಿ ಪ್ರಾಶಸ್ತ್ಯ ಸಿಕ್ಕಿಲ್ಲ ಎಂದು ನಾನು ಹೇಳುತ್ತೇನೆ. ಈ ಸರ್ಕಾರದಲ್ಲಿ ಹರಿಜನರಿಗೆ ರಕ್ಷಣೆಯಿಲ್ಲ. ಇದರಿಂದ ಏನಾಗುತ್ತದೆ ಎಂದು ಉದಾಸೀನ ಮಾಡಿ ದರೆ ಒಂದು ದಿವಸ ಹರಿಜನರು ಗಿರಿಜನರು ದೇಶದಲ್ಲಿ ದೊಡ್ಡ ಚಳವಳಿ ನಡೆಸತಕ್ಕಂಥ ಕಾಲ ಬರುತ್ತದೆ. ಹರಿಜನ ಗಿರಿಜನರ ಮೇಲೆ ನಮಗೆ ಕನಿಕರ ಇದೆ, ಅವರಿಗೆ ನಾವು ಅನುಕೂಲ ಮಾಡಿಕೊಡುತ್ತೇವೆ ಎಂದು ಅನೇಕ ಕಡೆ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಇನ್ನೊಂದು ಕಡೆ ನೀವು ಮಾಡುತ್ತಾ ಇರುವುದು ಏನು ? ಅದೇನೆಂದರೆ, ಹರಿಜನ ಗಿರಿಜನರಿಗೆ ಕೊಟ್ಟಿರತಕ್ಕಂಥ ಹಣ ಲ್ಯಾಪ್ಸ್ ಮಾಡುತ್ತಿದ್ದೀರಿ ಅದು ತುಂಬಾ ಅನ್ಯಾಯ. ಕಾನೂನನ್ನು ಸರಿಯಾಗಿ ಜಾರಿಗೆ ತರುತ್ತಿಲ್ಲ. ಅಧಿಕಾರಿಗಳ ಮೇಲೆ ಹತೋಟಿ ಇಲ್ಲದೆ ಆಡಳಿತ ನಡೆಸುತ್ತಿದ್ದೀರಿ. ಮತ್ತೊಂದು ಅಂಶ Proceedings of the Sub-committee of the Cabinet—Food Production dated 16th April 1963—Item No. 6 G.O. issued on 31st July 1963—decision that concession with regard to supply of pumpsets to be extended to Thoties and Talawaries on hire purchase. ಇಲ್ಲಿ ಈ ಉದಾಹರಣೆ ಕೊಡುತ್ತೇನೆ. ಸರಕಾರಿ ಆರ್ಡರ್ ಪ್ರಕಾರ ತೋಟಿ ತಳವಾರರಿಗೆ ಕೊಟ್ಟಿರತಕ್ಕಂಥ ಈ ಆರ್ಡರು ಆರ್ಡರಾಗಿಯೇ ಉಳಿದಿದೆ. ಈ ಆರ್ಡರಿನಲ್ಲಿ ಇರುವ ಪ್ರಕಾರ ಯಾರಿಗೂ ಪ್ರಯೋಜನವಾಗಿಲ್ಲ. ನೀವು ವಾರಕ್ಕೆ ಎರಡು ಸಲ ಕ್ಯಾಬಿನೆಟ್ ಮೀಟಿಂಗ್ ಮಾಡಿದರೆ ಏನು ಪ್ರಯೋಜನ ? ರಾಜಕೀಯ ಭಾಷಣ ಮಾಡಿ ದರೆ ಏನು ಪ್ರಯೋಜನ ! ವಿರೋಧ ಪಕ್ಷದಲ್ಲಿ ಈಗ ಹರಿಜನ ಗಿರಿಜನರು 11 ಜನ ಸದಸ್ಯರು ಇದ್ದಾರೆ. 21 ಜನ ಸದಸ್ಯರು ಆಡಳಿತ ಪಕ್ಷದಲ್ಲಿ ಇದ್ದಾರೆ. ಇದೇ ರೀತಿ ಉದಾಸೀನ ಮಾಡಿದರೆ 1972ರಲ್ಲಿ ಬರುವ ಮಹಾ ಚುನಾವಣೆಯಲ್ಲಿ 40 ಲಕ್ಷ ಹರಿಜನ ಗಿರಿಜನರು ನಿಮ್ಮ ಮೇಲೆ ಹೋರಾಟ ನಡೆಸಿ ಎಲ್ಲ ಪ್ರತಿನಿಧಿಗಳು ವಿರೋಧಪಕ್ಷಕ್ಕೆ ಬರುತ್ತಾರೆ. ಆದುದರಿಂದ ಈಗಲೇ ನೀವು ಎಚ್ಚೆತ್ತು ಹರಿಜನ ಮತ್ತು ಗಿರಿಜನರ ಆರ್ಥಿಕ ಪ್ರಗತಿಗಾಗಿ ಸಾಮಾಜಿಕ ಪ್ರಗತಿಗಾಗಿ ನೈತಿಕ ಪ್ರಗತಿಗಾಗಿ, ವಿದ್ಯಾ ಭ್ಯಾಸದ ಪ್ರಗತಿಗಾಗಿ, ಅವರ ಕಲ್ಯಾಣ ಸಾಧಿಸುವುದಕ್ಕಾಗಿ ಸರ್ವಪ್ರಯತ್ನ ಮಾಡಬೇಕೆಂದು ಹೇಳು ತ್ತೇನೆ.

ಇನ್ನು ಅಪಾಯಿಂಟಮೆಂಟ್ಸ್ ಬಗ್ಗೆ ಒಂದು ಮಾತು ಹೇಳುತ್ತೇನೆ. Appointment in Government—GAD (S.1) 121 SSR 62 of 2nd August 1963 "Last come first go" till the prescribed ratio of 15 per cent S C. 3 per cent S.T. respectively attained ಹಿಂದುಳಿದವರಾದ ಇವರಿಗೆ ರಕ್ಷಣೆ ಕೊಡಬೇಕು, ನೂರಕ್ಕೆ 18 ಸ್ಥಾನ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಇವರಿಗೆ ಕೊಡಬೇಕೆಂಬ ರೂಲ್ಸ್ ಮಾಡಿದ್ದೀರಿ. ಅಂಕಿ ಅಂಶಗಳ ಸಂಗ್ರಹಣೆಗಾಗಿ ಬೀರಪ್ಪ ಕಮಿಟಿ ನೇಮಕ ಮಾಡಿದಿರಿ. ಅವರ ವರದಿ ತರಿಸಿಕೊಂಡಿದ್ದೀರಿ. ಅದರಲ್ಲಿ ಈ ರೀತಿ ಇದೆ.

BEERAPPA COMMITTEE REPORT.

Class		I	II	III	IV	Average
S.C.	...	2 %	4 %	7 %	12 %	8 %
S.T.	...	0 %	0 %	0·5 %	1·5 %	05 %
B.C.	...	97 %	98 %	93 %	83 %	92 %

ಈಗ 15 ಪರ್ಸೆಂಟ್‌ವರೆಗೆ ಹುದ್ದೆ ಏರಿಲ್ಲ. ಈ ಬೀರಪ್ಪ ಕಮಿಟಿಯ 1-1-1961ರ ವರದಿ ಪ್ರಕಾರ 94,266 ಹುದ್ದೆಗಳು ಇವೆ. ನಿಮ್ನ ವರ್ಗ ಮತ್ತು ನಿಮ್ನ ಪಂಗಡದವರು 6,647 ಹಾಲಿ ಖಾಲಿ ಇದ್ದ ಹಾಗ 7,699 ಮೂರು ವರ್ಷಗಳನಂತರ 16,660 ಹುದ್ದೆ ನಿರೀಕ್ಷೆ. ಅಂತೂ ಈಗ 24,359 ಹುದ್ದೆಗಳಿವೆ. ಈ ಹುದ್ದೆಗಳನ್ನು ಭರ್ತಿ ಮಾಡಿದ್ದೀರಾ? 1-1-1965ರ ಹಿಂದಿನ ಲೋಕಲ್ ಕ್ಯಾಂಡಿಡೇಟ್‌ಗಳನ್ನು ರೆಗ್ಯುಲರೈಜ್ ಮಾಡಿದ್ದೀರಾ? ಡೈರೆಕ್ಟ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಹರಿಜನ ಗಿರಿಜನರಿಗೆ ಕ್ರಮವಾಗಿ 15 ಪರ್ಸೆಂಟ್ 3 ಪರ್ಸೆಂಟ್ ಕೊಡಬೇಕಾದ ನೀತಿ ಎಲ್ಲಿ ಹೋಯಿತು? ಸರಕಾರ ಇಂದು ತನ್ನ ನಿಬಂಧನೆಗೆ ವಿರೋಧವಾಗಿ ನಡೆಯುತ್ತಿಲ್ಲವೇ? ಕಾನೂನಿಗೆ ವಿರೋಧವಾಗಿ ರಾಜ್ಯಾಂಗಕ್ಕೆ ವಿರೋಧವಾಗಿ ನಡೆದಂತೆ ಆಗುತ್ತದಲ್ಲವೇ? ಇದರಿಂದ ಈ ಸರಕಾರ ಶಿಕ್ಷೆಗೆ ಅರ್ಹವಾಗುತ್ತದೆ ಅಲ್ಲವೇ? ಇದನ್ನು ಸರಕಾರ ಈಗಲಾದರೂ ಯೋಚನೆ ಮಾಡಬೇಕು.

ಈ ವರ್ಷ ಬಜೆಟ್ಟಿನಲ್ಲಿ ಬೇಡಿಕೆಗಳ ಮೂಲಕ ಮುಂದಿಟ್ಟಿರುವ ಪ್ರಕಾರ 177·01 ಲಕ್ಷ ರೂಪಾಯಿ ಖರ್ಚು ಮಾಡುತ್ತೀರಿ. ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಷ್ಟು ಹಣ ಹಂಚುತ್ತೀರಿ. 2 ಕೋಟಿ ರೂಪಾಯಿ ಸಮಾಜ ಕಲ್ಯಾಣ ಇಲಾಖೆಗೆ ಇಟ್ಟುಕೊಂಡಿದ್ದೀರಿ. ಇಷ್ಟು ಕಡಮೆ ಹಣ ಖರ್ಚು ಮಾಡತಕ್ಕಂಥಾದ್ದು ಸರಿ ಇಲ್ಲ. ಇದರಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ಈ ಇತರ ಬೇಡಿಕೆಗಳಿಂದ ಹೆಚ್ಚು ಹಣ ಈ ಬಗ್ಗೆ ಒದಗಿಸಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ನಿಜವಾದ ಸಮಾಜ ಕಲ್ಯಾಣ ಆಗಿದೆಯೇ? ಈ ಇಲಾಖೆ ಮೂಲಕ ಹಿಂದುಳಿದ ವರ್ಗದವರ ಪ್ರಗತಿ ಸಾಧನೆಯಾಗಿಲ್ಲ. ಅವರ ನೈತಿಕ ಮಟ್ಟ ಯಾವ ರೀತಿಯಲ್ಲಿ ಇದೆ ಎಂಬ ಚಿತ್ರವನ್ನು ಇಂದು ನಾವೆಲ್ಲರೂ ಕಾಣಬಹುದು. ಅನೇಕ ಜನ ಆಫೀಸರುಗಳನ್ನು ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಟ್ಟುಕೊಂಡಿದ್ದೀರಿ. ನಾಲ್ಕು ಜನ ಅಸಿಸ್ಟೆಂಟ್ ಡೈರೆಕ್ಟರ್ಸ್ ಇದ್ದಾರೆ. ಹೆಡ್ ಕ್ಲಾರ್ಕ್ ಆಗಿದ್ದವರನ್ನು ಆಫೀಸರ್ ಆಗಿ ಕೆಲವರನ್ನು ಮಾಡಿದ್ದೀರಿ. ಅನೇಕ ಆಫೀಸರುಗಳು ಇದ್ದರೂ ಕೆಲಸ ಏನೂ ಆಗುತ್ತಿಲ್ಲ. ಈಗ ಇಷ್ಟು ಸಿಬ್ಬಂದಿ ಬೇಕೇ? ಇಷ್ಟು ಹಣ ಖರ್ಚು ಮಾಡಬೇಕೇ? ಇದನ್ನು ಸಹ ಸರಕಾರ ಯೋಚನೆ ಮಾಡಬೇಕು? ನಾನು ಹೇಳುವುದು ಏನೆಂದರೆ, ಕ್ಲಾಸ್ ಎರಡು ಆಫೀಸರ್‌ಗಳ ಹುದ್ದೆಗಳನ್ನು ಕೂಡಲೇ ರದ್ದು ಮಾಡಬೇಕು. ಯಾಕಂದರೆ, ಈ ಹುದ್ದೆಯಿಂದ ಏನೂ ಪ್ರಯೋಜನವಿಲ್ಲ. ನಾಲ್ಕು ಜನ ಅಸಿಸ್ಟೆಂಟ್ ಡೈರೆಕ್ಟರ್ಸ್‌ಗಳು ಈ ಎಲ್ಲಾ ಕೆಲಸ ನೋಡಿಕೊಳ್ಳುತ್ತಾರೆ.

ಇನ್ನೊಂದು ಉದಾಹರಣೆ ಕೊಡುತ್ತೇನೆ. Multipurpose Co-operative Rehabilitation project" ಸ್ಕೀಂ ಎಂದು ಮಾಡಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಜಾರಿಗೆ ತಂದಿದ್ದಾರೆ. 20 ಸಂಸಾರದ ಒಂದು ಯೂನಿಟ್ ಎಂದು ಮಾಡಿದ್ದಾರೆ. ಇವರ ಪ್ರಗತಿಗಾಗಿ 1,42,800 ರೂಪಾಯಿ ಖರ್ಚು ಮಾಡುತ್ತಾರೆ. 1965-66ರಲ್ಲಿ 17 ಲಕ್ಷ ರೂಪಾಯಿಗಳನ್ನು ಈ ಸಾಮೂಹಿಕ ಸಹಕಾರ ಸಂಘಗಳ ಹೆಸರಿನಲ್ಲಿ ಡ್ರಾ ಮಾಡಿ. ಬ್ಯಾಂಕಿನಲ್ಲಿ ಬಡ್ಡಿಗೆ ಇಟ್ಟು ಈ ಹಣವನ್ನು ಕೊಳೆಸುತ್ತಿದ್ದಾರೆ. ಖರ್ಚು ಮಾಡಿದ್ದು ಎಷ್ಟು ಅಂದರೆ 1,70,000 ರೂಪಾಯಿ ಮಾತ್ರ ಐದು ವರ್ಷದಲ್ಲಿ ಇಷ್ಟು ಕಡಿಮೆ ಹಣ ಖರ್ಚು ಮಾಡಿದ್ದೀರಿ. ಹರಿಜನ ಗಿರಿಜನರ ಪ್ರಗತಿ ಏನು ಸಾಧಿಸಿದ್ದೀರಿ? ಇದರಲ್ಲಿ 77,750 ರೂಪಾಯಿ ಸಾಲ ಮತ್ತು ಸಬ್‌ಸೀಡಿ 59,800 ರೂಪಾಯಿ ಕೊಟ್ಟಿದೆ. ಇಲ್ಲಿ ಸಿಬ್ಬಂದಿ ಖರ್ಚು ಎಷ್ಟು ಆಗಿದೆ ಯೋಚನೆ ಮಾಡಬೇಕು. ಒಬ್ಬ ಸೀನಿಯರ್ ಕೋ-ಆಪರೇಟಿವ್ ಫಾರ್ಮಿಂಗ್ ಇನ್‌ಸ್ಪೆಕ್ಟರ್, ಒಬ್ಬ ಫೀಲ್ಡ್‌ಮನ್ ಒಬ್ಬ ಅಕೌಂಟೆಂಟ್ ಇವರೆಲ್ಲಾ ಕೆಲಸ ಮಾಡುತ್ತಾರೆ. ಪ್ರತಿ ತಿಂಗಳೂ ಸಿಬ್ಬಂದಿಗೆ 500 ರೂಪಾಯಿ ಪ್ರಕಾರ ಎಷ್ಟು ಹಣ

ಈವರೆವಿಗೂ ಖರ್ಚಾಗಿದೆ ನೋಡಬೇಕು. ಅಧಿಕಾರಿಗಳಿಗೆ ಕೆಲಸವಿಲ್ಲದೆ. ಸಂಬಳ ಕೊಟ್ಟಿದ್ದರಿಂದ ಹಣ ಖರ್ಚಾಗಿದೆ. ಸಂಘದವರು ಸಾಲವಾಗಿ ಹೊತ್ತಿರುವ ಹಣದಲ್ಲಿ ಈ ಸಂಬಳ ಕೊಡಬೇಕಾಗುತ್ತದೆ. ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಹರೆಕೊಪ್ಪ ಸಾಮೂಹಿಕ ವ್ಯವಸಾಯ ಸೊಸೈಟಿ ಎಂದು ಮಾಡಿದ್ದೀರಿ. ಒಂದೂವರೆ ವರ್ಷದಿಂದ ಅಲ್ಲಿ ಒಂದು ಎಕರೆ ಜಮೀನು ಉತ್ತಿದ್ದೀರಾ? ಒಂದು ಎಕರೆಯಲ್ಲಿಯಾದರೂ ಉತ್ಪನ್ನ ತೆಗೆದಿದ್ದೀರಾ? ಇದರ ಬಗ್ಗೆ ರಿಪೋರ್ಟು ತರಿಸಿದ್ದೀರಾ? ಸಿಬ್ಬಂದಿ ವರ್ಗಕ್ಕೆ ಅನಾವಶ್ಯಕವಾಗಿ ತಿಂಗಳಿಗೆ 500 ರೂಪಾಯಿ ಸಂಬಳ ಕೊಟ್ಟಿದ್ದೀರಿ. ಉತ್ಪತ್ತಿ ಎಷ್ಟು ಹೇಳಬಲ್ಲಿರಾ? ಇಲ್ಲಿ ಉತ್ಪತ್ತಿಯಿಲ್ಲ, ಪ್ರಗತಿಯಿಲ್ಲ. ಅಸಿಸ್ಟೆಂಟ್ ಕಮಿಷನರ್ ದರ್ಜೆಯ ಒಬ್ಬ ರೆವಿನ್ಯೂ ಆಫೀಸರ್, ಪ್ರೊಜೆಕ್ಟ್ ಆಫೀಸರ್ ನೇಮಿಸಿಕೊಂಡು ಒಂದೂವರೆ ವರ್ಷದಿಂದ ಸಂಬಳ ಕೊಟ್ಟಿದ್ದೀರಿ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿದ್ದಾರೆಯೇ? ಲಕ್ಷೋಪಲಕ್ಷ ರೂಪಾಯಿ ಬ್ಯಾಂಕಿನಲ್ಲಿ ಕೊಳೆಯುತ್ತಿದೆ ಮತ್ತು ಕೇವಲ ಸಿಬ್ಬಂದಿ ವರ್ಗಕ್ಕೆ ಅನಾವಶ್ಯಕವಾಗಿ ಹಣ ಕೊಡತಕ್ಕಂಥಾದ್ದರಿಂದ ಹರಿಜನ ಗಿರಿಜನರ ಪ್ರಗತಿಯಾಗದೆ ಅಲ್ಲಿ ಅವರ ಪ್ರಗತಿ ಅಧೋಗತಿಯಾಗಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಇನ್ನು ಕ್ರಾಶ್ ಪ್ರೋಗ್ರಾಂ ಅಂತಾ ಒಂದು ಮಾಡಿದ್ದೀರಿ. ಈ ಕ್ರಾಶ್ ಪ್ರೋಗ್ರಾಂನಲ್ಲಿ ಅನಿಮಲ್ ಹಸ್ಬಂಡರಿ, ಡೈರಿ, ಪೌಲ್ಟ್ರೀ, ಫಾಡರ್ ಡೆವಲಪ್‌ಮೆಂಟ್ ಎಂದು ಅನೇಕ ವಿಷಯಗಳಿವೆ. ಬೆಂಗಳೂರು ನಗರದ ಸುತ್ತುಮುತ್ತು 60 ಮೈಲಿ ತ್ರಿಜ್ಯದೊಳಗೆ ಮಿಲ್ಕ್ ಸೊಸೈಟಿಗಳನ್ನು ಮಾಡಿಸಿದ್ದೀರಿ. ಇದಕ್ಕೆ ಲಕ್ಷೋಪಲಕ್ಷ ರೂಪಾಯಿ ಸಾಲವಾಗಿ ಕೊಟ್ಟಿದ್ದೀರಿ. ಡೈರಿ ಡೆವಲಪ್ಮೆಂಟ್, ಫಾಡರ್ ಡೆವಲಪ್‌ಮೆಂಟ್ ಆಗಬೇಕೆಂದು ಈ ಹಣ ಕೊಡುತ್ತಿದ್ದರೂ ಕೂಡ ಹರಿಜನ ಗಿರಿಜನರಿಗೆ ಇದರಲ್ಲಿ ಒಂದು ಪರ್ಸೆಂಟ್ ಹಣ ಕೂಡ ಸಾಲ ದೊರಕಿಲ್ಲ. ಇದರಿಂದ ಹರಿಜನ ಗಿರಿಜನರ ಉದ್ಧಾರವಾಗಿಲ್ಲ. ಆದರೆ ಇಂದು ಹರಿಜನರು ಗಿರಿಜನರು ತಮ್ಮ ಹಕ್ಕು ಬಾಧ್ಯತೆಗಳ ಸಾಧನೆಗಾಗಿ ಏನು ಮಾಡಬೇಕು? ಅವರಿಗೆ ಅರಿವಾಗಿದೆ, ವಿವೇಕ ಬಂದಿದೆ. ಚೈತನ್ಯ ಉಂಟಾಗಿದೆ. ಅವರು ಇದುವರೆಗೆ ಕತ್ತಲೆಯಲ್ಲಿ ಮುಳುಗಿದ್ದರು, ಆದರೆ ಈಗ ಬೆಳಕು ಕಂಡು ಎಚ್ಚೆತ್ತಿದ್ದಾರೆ ಚಳುವಳಿ ಮಾಡಲಿದ್ದಾರೆ ಈಗಲಾದರೂ ನೀವು ಸರ್ವತೋಮುಖ ಉದ್ಧಾರಕ್ಕಾಗಿ ನಿಮ್ಮ ನೀತಿ ಬದಲಾಯಿಸಬೇಕು. ನೂರಕ್ಕೆ 18 ಪರ್ಸೆಂಟಿನಂತೆ ಕಾನೂನು ಪ್ರಕಾರ ಸರ್ಕಾರಿ ಹುದ್ದೆಗಳನ್ನು ಕೊಟ್ಟು ಅವರ ಪ್ರಗತಿ ಸಾಧಿಸಿ ಅವರಿಗೆ ರಕ್ಷಣೆ ಮಾಡಬೇಕು ಇಲ್ಲದೆ ಹೋದರೆ ಅವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ. ರಚನಾತ್ಮಕ ಚಳವಳಿ ಮಾಡಲು ಅವರು ಸಿದ್ಧರಾಗಿದ್ದಾರೆ ಎಂದು ಎಚ್ಚರಿಕೆ ಕೊಡುತ್ತೇನೆ. ಇಂದು ನೀವು ಪಾನನಿರೋಧವನ್ನು ತೆಗೆದುಬಿಟ್ಟಿರಿ. ಶ್ರೀಮತಿ ಯಶೋಧರಮ್ಮನವರು ಮಂತ್ರಿ ಸ್ಥಾನಕ್ಕೆ ಇದಕ್ಕಾಗಿ ರಾಜೀನಾಮೆಯನ್ನು ಕೊಟ್ಟರು! ಹರಿಜನರ ಉದ್ಧಾರ ಮಾಡುತ್ತೇವೆಂದು ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೊಲೆಯರ, ಮಾದಿಗರ ಮನೆಗಳ ಮುಂದೆ ಹೆಂಡದ ಅಂಗಡಿಗಳನ್ನು ಸ್ಥಾಪನೆ ಮಾಡುತ್ತಾರೆ. ಮಹಾತ್ಮಾ ಗಾಂಧಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ 1935ರಲ್ಲಿ ಬರೆದರು. ಬರೆದಿರುವುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. "If I became a dictator of India, the first order of mine would be complete prohibition throughout India." ನೀವು ಕಾಂಗ್ರೆಸ್ ಭಕ್ತರು, ಕಾಂಗ್ರೆಸ್ ತತ್ವವನ್ನನುಸರಿಸುವವರು, ಗಾಂಧಿ ಭಕ್ತರಾಗಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದವರು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುತ್ತೇವೆ, ಪ್ರೊಹಿಬಿಷನ್ ಜಾರಿಗೆ ತರುತ್ತೇವೆ ಎಂದು ಹೇಳಿದವರು ನಾಲ್ಕು ಕೋಟಿ ರೂಪಾಯಿಗಳನ್ನು ಯಾವುದೋ ಕೆಟ್ಟದಾರಿಯಲ್ಲಿ ಉತ್ಪತ್ತಿ ಮಾಡಿಕೊಂಡು ನಿಮ್ಮ ಬೊಕ್ಕಸವನ್ನು ಭರ್ತಿಮಾಡಿಕೊಳ್ಳುವುದಕ್ಕೆ ಹೊರಟಿದ್ದೀರಿ, 40 ಲಕ್ಷ ಹರಿಜನ ಗಿರಿಜನರನ್ನು ಹಾಳು ಮಾಡತಕ್ಕ ಒಂದು ಹೊಸ ನೀತಿಯನ್ನು ರದ್ದು ಮಾಡದಿದ್ದರೆ 25 ಸಾವಿರ ತೋಟಿ ತಳವಾರರ ಸೈನ್ಯವಾಗುತ್ತದೆ. ಈ ಸೈನ್ಯ 1947ರಲ್ಲಿ ಯಾವ ರೀತಿ ಸೇಂದಿ ಅಂಗಡಿಗಳನ್ನು ನಾವು ನೀವು ಪಿಕೆಟ್ ಮಾಡಲಾಯಿತೋ ಅದೇ ರೀತಿ ಪಿಕೆಟಿಂಗನ್ನು ನೀವು ಜಾರಿಗೆ ತರತಕ್ಕ ಸೇಂದಿ ಅಂಗಡಿಗಳ ಮುಂದೆ ನಾವು ನಡೆಸುತ್ತೇವೆ. ಇದು ನಮ್ಮ ಹಕ್ಕು ಬಾಧ್ಯತೆ. ನಮ್ಮನ್ನು ಹಾಳು ಮಾಡತಕ್ಕ ಈ ನೀತಿಯನ್ನು ಏನು ತಂದಿದ್ದೀರಿ ಅದನ್ನು ಮತ್ತೆ ಪರಿಶೀಲನೆ ಮಾಡಬೇಕು. ಇಂದು ನೀವು ಇದನ್ನು ಜಾರಿಗೆ ತಂದು ನಿಮ್ಮ ಆತ್ಮವಂಚನೆ ಮಾಡಿಕೊಂಡಿದ್ದೀರಿ ಕಾಂಗ್ರೆಸ್ ಚುನಾವಣೆ ಘೋಷಣೆಯಲ್ಲಿ ಹೇಳಿಕೊಂಡಿರುವುದನ್ನು ನೋಡಿದರೆ ಹರಿಜನ ಗಿರಿಜನರಿಗೆ ಇಂದು ಈ ಬಗ್ಗೆ ಅನ್ಯಾಯ ಮಾಡುತ್ತಿದ್ದೀರಿ. ಇಂದು ಬ್ರಾಂದಿ, ಬೀರು ಫ್ಯಾಷನ್ ಆಫ್ ದಿ ಡೇ ಆಗಿದೆ ಇರುವ ಎಲ್ಲಾ ಬಾರುಗಳಲ್ಲಿ ವಿಸ್ಕಿ ಬ್ರಾಂದಿ ಮುಂತಾದುವನ್ನು ಮಾರುವುದರ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿ ಅವರಿಂದ ವಸೂಲ್ಮಾಡಿ. ಹಳ್ಳಿಗಾಡಿನಲ್ಲಿ ಹರಿಜನ ಗಿರಿಜನರ ಮನೆಗಳ ಮುಂದೆ ಹೆಂಡದ ಅಂಗಡಿಗಳನ್ನು ಇಟ್ಟು ಅವರು ಕೂಲಿಯಿಂದ ಸಂಪಾದನೆ ಮಾಡತಕ್ಕ ನಾಲ್ಕಾಣೆ, ಒಂದು ರೂಪಾಯಿ, ಎರಡು ರೂಪಾಯಿಗಳನ್ನು ಅವರ ಮನೆ ಮುಂದೆ ಇರುವ ಹೆಂಡದ ಅಂಗಡಿಗಳಿಗೆ ಕೊಟ್ಟು ಅವರು ಹಾಳಾಗುವುದಕ್ಕೆ ಅವಕಾಶ ಕೊಡಬೇಡಿ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಅಸ್ಪೃಶ್ಯತಾ ನಿವಾರಣಾ ವಿಚಾರದಲ್ಲಿ ಪೋಲೀಸ್ ಇಲಾಖೆಯವರು ನ್ಯಾಯವಾಗಿ ಕೆಲಸ ಮಾಡಿದ್ದಾರೆಯೇ ? ಪ್ರಗತಿಪರವಾದ ವರದಿಯನ್ನು ಒಪ್ಪಿಸಿದ್ದಾರೆಯೆ ? ವಾರ ವಾರಕ್ಕೆ ವರದಿಯನ್ನು ಕೊಡಬೇಕೆಂದು ಕಾನೂನು ಇತ್ತು, ಹರಿಜನರ ಬಗ್ಗೆ ಪ್ರಕಟಣೆ ಇತ್ತು, ಪಬ್ಲಿಸಿಟಿ ಇತ್ತು, ಇಂಟರ್‌ಕ್ಯಾಸ್ಟ್ ಡಿನ್ನರ್ ಇತ್ತು, ಇಂಟರ್‌ಕ್ಯಾಸ್ಟ್ ಮ್ಯಾರೇಜ್‌ಗೆ ಉತ್ತೇಜನ ಇತ್ತು. ಇವೆಲ್ಲವನ್ನೂ ತೆಗೆದುಹಾಕಿದಿರಿ. ಇವುಗಳಿಂದ ಏನೂ ಪ್ರಯೋಜನವಿಲ್ಲ ಎಂದು ತೆಗೆದುಹಾಕಿದಿರಿ. ಹರಿಜನರು ಸವರ್ಣೀಗಳು ಸಂಪರ್ಕ ಹೊಂದಿ, ಒಂದು ಕಡೆ ಕಲೆತು ಅವರವರ ಮನೋಭಾವಗಳನ್ನು ನಿರ್ಧಾರ ಮಾಡಿಕೊಳ್ಳುವುದಕ್ಕೆ ಈ ಯೋಜನೆಯಲ್ಲಿ ಅವಕಾಶವಿತ್ತು. ಇಂಥ ಸ್ಕೀಮುಗಳನ್ನೆಲ್ಲಾ ತೆಗೆದುಹಾಕಿದಿರಿ. ಈಗ ಪಬ್ಲಿಸಿಟಿ ಅಂದ ಚೆಂದವಾಗಿ ಇಂಗ್ಲೀಷಿನಲ್ಲಿ ಬರುತ್ತಿದೆ. ಇದರಿಂದ ಹರಿಜನರಿಗೆ ಪ್ರಯೋಜನವಿಲ್ಲ, ನಮ್ಮ ಡೈರೆಕ್ಟರವರು ಅವರ ಸ್ಕೀಂಗಳನ್ನು ಇಂಗ್ಲೀಷಿನಲ್ಲಿ ಪ್ರಕಟಿ ಕೊಡುತ್ತಾರೆ. ಆದರೆ ಹಳ್ಳಿಯಲ್ಲಿರುವ ಒಬ್ಬ ಹರಿಜನ ಏನು ಮಾಡುವುದು, ಯಾವರೀತಿ ಅರಿತು ಕೊಳ್ಳುವುದು ? ಪ್ರಕಟಣೆಗಳನ್ನು ಪತ್ರಿಕೆಗಳಿಗೆ ಕೊಟ್ಟು, ಪ್ರಚಾರ ಮೂಲಕ ಅವರಿಗೆ ಉತ್ತೇಜನ ಕೊಡಿ. ಅನೇಕ ಹರಿಜನ ಗಿರಿಜನ ಪತ್ರಿಕೋದ್ಯೋಗಿಗಳು ಹರಿಜನರ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ಟೀಕೆ ಟಿಪ್ಪಣಿಗಳ ಮೂಲಕ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟು ಪತ್ರಿಕೆಗಳನ್ನು ಪ್ರಕಟಿಸಿ, ಹಂಚಿ ಸಹಾಯ ಮಾಡುತ್ತಿದ್ದರು. ಅಂಥ ಪತ್ರಿಕೆಗಳಿಗೆ ಕೊಡುತ್ತಿದ್ದ ಉತ್ತೇಜನವನ್ನು ರದ್ದು ಮಾಡಿದಿರಿ. ಇಂದು ಸರ್ಕಾರದ ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಲ್ಲ. ಇದರಿಂದ ಅವಿದ್ಯಾವಂತ ಹರಿಜನರಿಗೆ ತೊಂದರೆಯಾಗಿದೆ. ಇದನ್ನು ಸರಿಪಡಿಸಬೇಕು. ಪ್ರಚಾರ ಪ್ರಕಟಣೆ ಹಾಗೂ ಸಮ್ಮೇಳನ ಇವುಗಳಿಗೆ ಅವಕಾಶ ಕೊಡಬೇಕು.

ಹರಿಜನ ಗಿರಿಜನರಿಗಾಗಿ ಸ್ಥಾಪಿಸಿರುವ 360 ಹಾಸ್ಟಲುಗಳಲ್ಲಿ 1,200 ಸೀಟುಗಳು ಖಾಲಿ ಇವೆ. ನೀವು ಅವುಗಳನ್ನು ತಕ್ಷಣ ಭರ್ತಿ ಮಾಡಬೇಕು. ಈ ದಿವಸ ಅನೇಕ ಜನ ಹರಿಜನರ ಗಿರಿಜನರ ಮಕ್ಕಳು ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದೆ ಇದ್ದಾರೆ. ಅವರಿಗೆ ಸರಿಯಾದ ಸಹಕಾರ, ಸಹಾಯ ವಿಲ್ಲದೆ ವಿದ್ಯಾವಂತರಾಗದೆ ಅಲೆದಾಡುತ್ತಾ ಇದ್ದಾರೆ. ಅವರೆಲ್ಲರಿಗೂ ಸಹಾಯ ನೀವು ಮಾಡಬೇಕು, 40 ಲಕ್ಷ ಹರಿಜನ ಗಿರಿಜನರಿರುವ ಈ ದೇಶದಲ್ಲಿ ಐದು ಲಕ್ಷ ಸಂಸಾರಗಳಿವೆ. ಬಡವರಿಗೆ ಮಕ್ಕಳು ಹೆಚ್ಚು. ಇವರಲ್ಲಿ ಒಂದೂವರೆ ಲಕ್ಷ ಇರಕಕ್ಕ ಹರಿಜನ ಮಕ್ಕಳಿಗೆ ವಿದ್ಯಾಭ್ಯಾಸ ದೊರೆಯಬೇಕು. 10 ವರ್ಷಗಳಲ್ಲಿ ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕು ಎಂದು ರಾಜ್ಯಾಂಗದಲ್ಲಿ ನಿರೂ ಪಣೆ ಮಾಡಿದೆ. ಆದರೆ ಅದನ್ನು ಜಾರಿಗೆ ತರಲಿಲ್ಲ. ಹರಿಜನ ಮಕ್ಕಳಿಗೆ ಹೆಚ್ಚು ಸೀಟುಗಳನ್ನು ಒದಗಿಸುವುದಕ್ಕಾಗಿ ಈಗಿರುವ ಎಲ್ಲಾ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟಲುಗಳಿಗೆ ಗ್ರಾಂಟ್ ಇನ್ ಎಡ್ ಸ್ಕೀಂ ಪ್ರಕಾರ ನಡೆಯುವ ಹಾಸ್ಟಲುಗಳಂತೆ ಪರಿಗಣಿಸಿ ಹಣವನ್ನು 33 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ವಿದ್ಯಾ ಇಲಾಖೆ ಬಡ್ಜೆಟ್‌ನಿಂದ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಪುನಃ ದೊರೆಯುವಂತೆ ಮಾಡಿ, ಹೆಚ್ಚಿನ ಅವಕಾಶವನ್ನು ನಾಲ್ಕನೆಯ ಯೋಜನೆಯಲ್ಲಿ ಹರಿಜನ ಗಿರಿಜನರ ಹಾಸ್ಟಲುಗಳಿಗೆ ಕಲ್ಪಿಸಿಕೊಡಬೇಕೆಂದು ಅತಿ ವಿನಯದಿಂದ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ರಾಜ್ಯದಲ್ಲಿರುವ 40 ಲಕ್ಷ ಹರಿಜನ ಗಿರಿಜನರಲ್ಲಿ 20 ಲಕ್ಷ ಮಹಿಳೆಯರಿದ್ದಾರೆ. ಇವರುಗಳ ಕಲ್ಯಾಣಕ್ಕೆ ಏನು ಮಾಡಿದ್ದೀರಿ ? ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಸ್ತ್ರೀಯರ ಮತ್ತು ಮಕ್ಕಳ ಕಲ್ಯಾಣ ಕೇಂದ್ರಗಳನ್ನು ತೆರೆದಿದ್ದೀರಿ. ಅವುಗಳ ಆಡಳಿತ ಸರಿಯಾಗಿ ನಡೆಯುತ್ತಿಲ್ಲ. ಹೆಣ್ಣು ಮಕ್ಕಳಿಗೆ ಹಾಸ್ಟಲುಗಳನ್ನು ಹೆಚ್ಚಾಗಿ ತೆರೆದಿಲ್ಲ ಮತ್ತು ಹೆಣ್ಣು ಮಕ್ಕಳಿಗೆ ಹೆಚ್ಚಿನ ವಿದ್ಯಾ ಭ್ಯಾಸವನ್ನು ಕೊಡಲು ಉತ್ತೇಜನವಿಲ್ಲ. "If a women is educated the whole family will be educated; if a man is educated, an individual is educated," ಈ ಅಂಶವನ್ನು ಅರಿತು ಈಗ ಈ ರಾಜ್ಯದಲ್ಲಿ ತಾವು ಒಂದು ತತ್ವವನ್ನು ಅನುಸರಿಸಿ ಪ್ರತಿ ಜಿಲ್ಲೆ ಯಲ್ಲಿಯೂ ಹರಿಜನ ಹೆಣ್ಣುಮಕ್ಕಳ ಹಾಸ್ಟಲುಗಳನ್ನು ಹೆಚ್ಚು ಹೆಚ್ಚಾಗಿ ತೆರೆಯಬೇಕು ಮತ್ತು ಕೇಂದ್ರವಾದ ಬೆಂಗಳೂರಿನಲ್ಲಿ ಸಹ ಅನೇಕ ಹೆಣ್ಣುಮಕ್ಕಳ ಹಾಸ್ಟಲುಗಳನ್ನು ತೆರೆಯಬೇಕು. ಈಗ ಬೆಂಗಳೂರಿನಲ್ಲಿ ಸರ್ಕಾರದಿಂದ ಒಂದು ಹಾಸ್ಟಲು ನಡೆಯುತ್ತಿದೆ, ಖಾಸಗಿಯಾಗಿ ಒಂದು ನಡೆಯು ತ್ತಿದೆ. ಮಾನ್ಯ ಮಂತ್ರಿಗಳು ಹೋಗಿ ಅಲ್ಲಿ ನಡೆಯತಕ್ಕ ಪ್ರತಿದಿನದ ಚಟುವಟಿಕೆಗಳನ್ನು ನೋಡಿದರೆ ಅವರಿಗೇ ಎಷ್ಟರಮಟ್ಟಿಗೆ ಅದು ಪ್ರಗತಿ ಹೊಂದಿದೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಎ. ಕೃಷ್ಣಪ್ಪನವರು ನಮ್ಮ ಜನಾಂಗದ ಪಿತಾಮಹರು ಇದ್ದಹಾಗೆ ಇದ್ದಾರೆ. ಅವರು ಮಾಡಿರುವ ಪ್ರಗತಿಯ ಸಾಧನೆಯನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ. ಐದು ವರ್ಷಗಳ

ಹಿಂದೆ ಅವರಿಗೆ ಒಂದು ವಿದ್ಯಾರ್ಥಿ ನಿಲಯ ಕಟ್ಟಲು ಸ್ಥಳವನ್ನು ಟ್ರಸ್ಟ್‌ಬೋರ್ಡ್ ಕೊಟ್ಟಿದೆ. ಆ ಸ್ಥಳಕ್ಕೆ ಮಾನ್ಯ ಮುಖ್ಯ ಮಂತ್ರಿಯವರನ್ನು ಶ್ರೀ ಕೃಷ್ಣಪ್ಪನವರು ಕರೆದುಕೊಂಡು ಹೋಗಿದ್ದಾರೆ. ವಿಸಿಟರ್ಸ್ ಬುಕ್‌ನಲ್ಲಿ ಎಲ್ಲ ವಿಧವಾದ ಸಹಾಯವನ್ನೂ ಕೂಡಲೆ ಕೊಡುತ್ತೇನೆ ಎಂದು ಅವರು ಬರೆದಿದ್ದಾರೆ. ಅವರ ದುರಾದೃಷ್ಟವೋ, ಅಥವಾ ಆ ಜನಾಂಗದ ದುರಾದೃಷ್ಟವೋ ಯಾವ ಸಹಾಯವೂ ದೊರಕಿಲ್ಲ. ಬೆಂಗಳೂರು ಟ್ರಸ್ಟ್‌ಬೋರ್ಡಿನವರು 20 ಸಾವಿರ ರೂಪಾಯಿ ಬೆಲೆ ಬಾಳುವ ಸೈಟನ್ನು ಕೊಟ್ಟಿದ್ದಾರೆ. ಇನ್ನೂ ಅಲ್ಲಿ ಕಟ್ಟಡವನ್ನು ಕಟ್ಟಲು ಅವಕಾಶವಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಸರ್ಕಾರವೂ ಕೂಡಲೇ ಪರಿಶೀಲನೆ ಮಾಡಿ ಯೋಗ್ಯವಾದ ಹಾಸ್ಟಲ್ ಕಟ್ಟಡವನ್ನು ಕಟ್ಟುವುದಕ್ಕೆ ಹಣ ಮಂಜೂರು ಮಾಡಬೇಕು ಎಂದು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ''Representation of Scheduled Castes and Scheduled Tribes in all Committees, Boards and Corporations'' ಸರ್ಕಾರ P and D 14 SAB 59 ತಾರೀಖು 7-9-1959 ರಲ್ಲಿ ಒಂದು ಆರ್ಡರನ್ನು ಜಾರಿಗೆ ತಂದರು. ಈಗ ಎಷ್ಟು ಕಮಿಟಿಗಳಿವೆ, ಎಷ್ಟು ಬೋರ್ಡುಗಳಿವೆ, ಎಷ್ಟು ಕಾರ್ಪೊರೇಷನ್‌ಗಳಿವೆ, ಇವುಗಳಲ್ಲಿ ಒಬ್ಬ ಪ್ರತಿನಿಧಿಯನ್ನಾದರೂ ಹರಿಜನರನ್ನು ಹಾಕಿದ್ದೀರಾ ? ನಮ್ಮನ್ನು ಹಾಕಬೇಡಿ. ಕಾಂಗ್ರೆಸ್ ಹರಿಜನರನ್ನೇ ಹಾಕಿ. ಬೆಂಗಳೂರು ಸಿಟಿ ಟ್ರಸ್ಟ್‌ಬೋರ್ಡಿನಲ್ಲಿ ಏನು ಮಾಡಿದಿರಿ ? ಮಾನ್ಯ ಮಂತ್ರಿಗಳನ್ನು ಹೋಗಿ ಕೇಳಿದ್ದಕ್ಕೆ ಬರೀ ಹರಿಜನರಿಂದರೇ ಪ್ರಗತಿಯಾಗುತ್ತಿದೆಯೇ ! ಬೇರೆಯವರಿಂದ ಪ್ರಗತಿ ಆಗುವುದಿಲ್ಲವೇ ! ಎಂದು ಹೇಳಿದರು. ಗಂಗಮ್ಮನ ಕೇರಿಯಲ್ಲಿದ್ದ ಹರಿಜನರನ್ನು ಟೌನ್‌ಹಾಲ್ ಮತ್ತು ರವೀಂದ್ರ ಕಲಾಕ್ಷೇತ್ರವನ್ನು ಕಟ್ಟುವುದಕ್ಕೆ ಓಡಿಸಿ, ಸಂಪಿಗೇಹಳ್ಳಿ ಲೇಔಟ್‌ನಲ್ಲಿ ಅವರಿಗೆ ಸ್ಥಳ ಕೊಡುವುದಾಗಿ ಕಾರ್ಪೊರೇಷನ್‌ನವರೂ ಮತ್ತು ಸರ್ಕಾರದವರೂ ಅವರಿಗೆ ಲಿಖಿತ ಮೂಲಕ ಆಶ್ವಾಸನೆ ಕೊಟ್ಟರು. ಆದರೆ ಸಂಪಿಗೇಹಳ್ಳಿ ಲೇಔಟ್‌ನಲ್ಲಿ ಯಾರಿಗೆ ಸೈಟುಗಳನ್ನು ಕೊಟ್ಟರು ? ಹರಿಜನರಿಗೆ ಕೊಟ್ಟಿದ್ದಾರೆಯೇ ? 2,3 ಜನರಿಗೆ ಸೈಟುಗಳನ್ನು ಕೊಡುತ್ತೇವೆಂದು ಬರಹ ಮೂಲಕ ತಿಳಿಸಿದ್ದ ಪ್ರಕಾರ ಕೊಡದೆ ಕೇವಲ 120 ಜನಗಳಿಗೆ ಮಾತ್ರ ಕೊಟ್ಟಿದ್ದಾರೆ. ಉಳಿದವರು ಎಲ್ಲಾ ಬೀದಿ ಭಿಕಾರಿಗಳಾಗಿದ್ದಾರೆ. ಅವರು ಇದ್ದ ಸೈಟಿನ ಬೆಲೆ ಈಗ ಟೌನ್‌ಹಾಲ್ ಬಳಿ ಲಕ್ಷೋಪಲಕ್ಷ ರೂಪಾಯಿಗಳಾಗುತ್ತದೆ. ಇಂಥ ಬೆಲೆಯುಳ್ಳ ಆಸ್ತಿಯನ್ನು ಕಳೆದುಕೊಂಡು ಆ ಜನ ಬೀದಿ ಭಿಕಾರಿಗಳಾಗಿದ್ದಾರೆ. ಟ್ರಸ್ಟ್‌ಬೋರ್ಡಿನಲ್ಲಿ ನಮ್ಮನ್ನು ರಕ್ಷಣೆ ಮಾಡುವ ಜನರು ಇದ್ದಿದ್ದರೆ ಈ ರೀತಿಯಾಗಿ ಆಗುತ್ತಿರಲಿಲ್ಲ. ಆದುದರಿಂದ ಅಲ್ಲಿ ಹರಿಜನರಿಗೆ ಪ್ರಾತಿನಿಧ್ಯ ಕೊಡುವುದು ಸೂಕ್ತ ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಗೋಪಾಲಸ್ವಾಮಿ ಅಯ್ಯರ್ ಕಾಲೋನಿ 1940ನೆ ಇಸವಿಯಲ್ಲಿ ಸ್ಥಾಪನೆಯಾಯಿತು. ಸುತ್ತಮುತ್ತಲೂ ಕಾರ್ಪೊರೇಷನ್ ಪ್ರದೇಶವಾಯಿತು. ಆದರೆ 5.2 ಎಕರೆ ಪ್ರದೇಶದಲ್ಲಿರುವ ಹರಿಜನರಿಗೆ ಯಾವ ರಕ್ಷಣೆಯೂ ಇಲ್ಲ, ಯಾವ ವಿಧವಾದ ಅನುಕೂಲತೆಯೂ ಇಲ್ಲ. ಅವರು ಕಟ್ಟಿರುವ ಮನೆಗಳ ಹಕ್ಕು ಇನ್ನೂ ಕೊಟ್ಟಿಲ್ಲ.

ಆಂಜನೇಯ ಬ್ಲಾಕ್‌ನಲ್ಲಿರುವ ಮತ್ತು ಬೆಂಗಳೂರಿನ 33 ಸ್ಲಂ ಏರಿಯಾದಲ್ಲಿರುವ ಹರಿಜನರು, ಗಿರಿಜನರು ಮತ್ತು ಸ್ಕಾವೆಂಜರ್‌ಗಳು ಇಂದು ಬೀದಿ ಭಿಕಾರಿಗಳಾಗಿದ್ದಾರೆ. ಅವರಿಗೆ ರಕ್ಷಣೆ ಇಲ್ಲ. ಹಲವು ಅಂತಸ್ತುಗಳುಳ್ಳ ಮನೆಗಳನ್ನು ಲಕ್ಷಾಂತರ ರೂಪಾಯಿ ಖರ್ಚುಮಾಡಿ ಕಟ್ಟಿಸಿ ಅವುಗಳನ್ನು ಸ್ಕಾವೆಂಜರುಗಳಿಗೆ ಕೊಟ್ಟಿದ್ದಾರೆ. ಇಂಥ ಅನೇಕ ಯೋಜನೆಗಳನ್ನೂ ಮಾಡಿದ್ದೀರಿ, ವಸತಿ ಒದಗಿಸದೆ ಈಗ ಲೋಪಗಳನ್ನು ಮಾಡಿದ್ದೀರಿ. ಅದನ್ನೆಲ್ಲಾ ನೀವು ಈಗ ತಿದ್ದಿಕೊಳ್ಳಬೇಕು.

ಹರಿಜನರು ಮತ್ತು ಗಿರಿಜನರು ಸೆಕ್ರೆಟೇರಿಯಟ್ಟಿನೊಳಗೆ ಬರಬಾರದು ಎನ್ನುವ ಆದೇಶವನ್ನು ಈ ಸರ್ಕಾರ ಕೊಟ್ಟಿದ್ದಾರೆ. ಅಸ್ಪೃಶ್ಯರು ಬಾಗಿಲಿನಿಂದ ಆ ಕಡೆಗೆ ಹೊರಗೆ ಇರಬೇಕು, ಒಳಗೆ ಬಂದರೆ ನಿಮ್ಮನ್ನು ನಾವು ಸೇರಿಸುವುದಿಲ್ಲ ಎಂದೇ ? ಆದೇಶ ಪರೋಕ್ಷವಾಗಿ ಅರ್ಥಕೊಡುತ್ತದೆ. ಮೈಸೂರು ಸರ್ಕಾರದ ಆರ್ಡರ್ ನಂಬರ್ ಜಿ.ಎ.ಡಿ. 13400 ಎಂ. 62-63 ತಾರೀಖು 12-12-63 ಪ್ರಕಾರ ಹರಿಜನರಿಗಿದ್ದ ಕೆಲವು ರಿಯಾಯಿತಿಗಳನ್ನು ಈ ಸರ್ಕಾರದವರು ತೆಗೆದುಹಾಕಿದ್ದಾರೆ.

ರಾಜಮಹಾರಾಜರುಗಳ ಕಾಲದಿಂದಲೂ ಈ ಮೈಸೂರು ರಾಜ್ಯದಲ್ಲಿ ಸರ್ಕಾರ ಹೇರಳವಾಗಿ ಹರಿಜನರಿಗೆ ಎಲ್ಲ ವಿಧದಲ್ಲಿಯೂ ಅನುಕೂಲ ಮಾಡುತ್ತಿತ್ತು. ಈಗ ಒಂದು ಅರ್ಜಿ ಬರೆದರೆ ಅದಕ್ಕೆ ಎರಡು ರೂಪಾಯಿ ಸ್ಟಾಂಪ್ ಹಚ್ಚಬೇಕೆಂದು ಇದೆ. ಎಲ್ಲರೂ ಅದರಂತೆ ನಡೆಯಬೇಕು. ಹರಿಜನ ಗಿರಿಜನರೂ ಸ್ಟ್ಯಾಂಪ್ ಹಚ್ಚಿ ಅರ್ಜಿ ಕೊಡಬೇಕು. ನಾಲ್ಕಾಣೆ ಕೂಲಿ ಮಾಡತಕ್ಕ ಕೂಲಿಕಾರ, ಎಂಟಾಣೆ, ಒಂದು ರೂಪಾಯಿ ಸಂಪಾದನೆ ಮಾಡುವವ ಎಲ್ಲಿ ಎರಡು ರೂಪಾಯಿ ಸ್ಟ್ಯಾಂಪ್ ಹಚ್ಚಿ ನಮ್ಮ ಮಾನ್ಯ ಮಂತ್ರಿಗಳಿಗೆ ಅರ್ಜಿ ಕೊಟ್ಟರೆ ಮಾತ್ರ ಅರ್ಜಿಗಳನ್ನು ಅಂಗೀಕಾರ ಮಾಡುವುದು. ಇಲ್ಲದಿದ್ದರೆ ಮಾಡುವುದಿಲ್ಲ ಎನ್ನತಕ್ಕ ಆರ್ಡರ್ ಮಾಡಿದ್ದಾರೆ. ಅದು ಕೂಡಲೆ ರದ್ದಾಗಬೇಕು. ಹರಿಜನರ ಹಿತ ಸಾಧಿಸಲು ಸ್ಟ್ಯಾಂಪು ಹರಿಜನರಿಂದ ಪಡೆಯಬೇಡಿ ಎಂದು ನನ್ನ ಪ್ರಾರ್ಥನೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

3-00 P.M.

ಹರಿಜನರು ಅರ್ಜಿಗಳಿಗೆ ಸ್ಟಾಂಪು ಹಚ್ಚಬೇಕು ಇದರಿಂದ ಹರಿಜನರಿಗೆ ಬಹಳ ತೊಂದರೆಯಾಗಿದೆ. ಅದನ್ನು ಸರಿಪಡಿಸಬೇಕು ಇಲ್ಲದಿದ್ದರೆ ಬೇರೆ ರೀತಿ ಅವರಿಗೆ ರಕ್ಷಣೆ ಕೊಡಬೇಕು. ಸ್ಟಾಂಪು ಇಲ್ಲದೇ ಅರ್ಜಿ ಕೊಡತಕ್ಕ ನೀತಿಯನ್ನು ಜಾರಿಗೆ ತರಬೇಕು. ಮಹಾತ್ಮಾಗಾಂಧೀಜಿಯವರ ಆದರ್ಶತತ್ವವನ್ನು ನಿಜವಾಗಿ ಜಾರಿಗೆ ತರುವುದಾದರೆ ಮಹಾತ್ಮಾ ಗಾಂಧಿಯವರು ಯಾವ ಒಂದು ಘನ ಉದ್ದೇಶಕ್ಕೆ ಪೂನಾ ಪ್ಯಾಕ್ಟ್ ಮಾಡಿದರೋ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದಾದರೆ, ಹಿಂದೂ ಧರ್ಮದಲ್ಲಿ ಹರಿಜನರನ್ನು ಉಳಿಸಿಕೊಳ್ಳಲು ಇಚ್ಛೆಪಡುವುದಾದರೆ ಇವರಿಗೆ ಸರ್ವದೃಷ್ಟಿಯಲ್ಲೂ ರಕ್ಷಣೆ ಮಾಡುವ ನೀತಿಯನ್ನು ಜಾರಿಗೆ ತರಬೇಕು. ಇಲ್ಲದೇ ಹೋದರೆ ಮತಾಂತರ ಹೊಂದುತ್ತಾರೆ. ಈ ಸಂದರ್ಭದಲ್ಲಿ ಟೌನ್‌ಹಾಲ್‌ನಲ್ಲಿ ನಡೆದಂಥ ಒಂದು ಘಟನೆಯನ್ನು ಹೇಳುತ್ತೇನೆ. ಟೌನ್‌ಹಾಲ್‌ನಲ್ಲಿ ಟಚ್‌ಬಲ್ ಷೆಡ್ಯೂಲ್ ಕ್ಯಾಸ್ಟ್ ಮತ್ತು ಅನ್‌ಟಚ್‌ಬಲ್ ಷೆಡ್ಯೂಲ್ ಕ್ಯಾಸ್ಟ್ ರೀತಿ ಭೇದ ಭಾವ ಮಾಡಿದರು. ಷೆಡ್ಯೂಲ್ ಕ್ಯಾಸ್ಟ್ ಎಲ್ಲೇ ಇರಲಿ, ಷೆಡ್ಯೂಲ್ ಟ್ರೈಬ್ಸ್ ಎಲ್ಲೇ ಇರಲಿ ಕೊರಚರು, ಕೊರಮರು, ಒಡ್ಡರು ಎಲ್ಲರೂ ಹಿಂದುಳಿದವರು. ಅವರಿಗೆ ಸಹಾಯ ಹರಿಜನರಂತೆ ಮಾಡಬೇಕು. ಆದರೆ ಸರ್ಕಾರ ಒಂದು ರೀತಿಯಲ್ಲಿ ಟಚ್‌ಬಲ್ ಷೆಡ್ಯೂಲ್ ಕ್ಯಾಸ್ಟ್, ಅನ್‌ಟಚಬಲ್ ಷೆಡ್ಯೂಲ್ ಕ್ಯಾಸ್ಟ್ ಎಂದು ಅವರಲ್ಲಿ ಭೇದ ಕಲ್ಪಿಸುತ್ತಿದ್ದೀರಿ. ಸರ್ಕಾರದವರೇ ಅವರನ್ನು ಎತ್ತಿಕಟ್ಟಿ ನಮ್ಮ ನಮ್ಮಲ್ಲಿ ಕಿತ್ತಾಟಕ್ಕೆ ಅವಕಾಶ ಕಲ್ಪಿಸುವ ಮಾರ್ಗವನ್ನು ಮಾಡಬಾರದು. ಅವರು ಯಾರೇ ಆಗಲಿ ಎಕನಾಮಿಕಲ್ ಆಗಿ ಬ್ಯಾಕ್‌ವರ್ಡ್ ಆಗಿದ್ದರೆ ಅಂತಹವರಿಗೆ ರಾಜ್ಯಾಂಗದ ನಿಯಮಾವಳಿ ಪ್ರಕಾರ ಸಹಾಯ ಕೊಡಬೇಕು. ತಾವು ವಿಶೇಷ ಸೇಫ್ ಗಾರ್ಡ್ಸ್‌ಗಳನ್ನು ಫಂಡಮೆಂಟಲ್ ರೈಟ್ಸ್‌ಗಳನ್ನು ಮತ್ತು ಸ್ಪೆಷಲ್ ಪ್ರಿವಿಲೇಜಸ್‌ಗಳನ್ನು ಜಾರಿಗೆ ತಂದು ಹರಿಜನ ಮತ್ತು ಗಿರಿಜನರ ಕಲ್ಯಾಣ ಮಾಡಬೇಕು. ಇದಕ್ಕಿಂತ ಹೆಚ್ಚಿಗೆ ಹೆಣ್ಣು ಮಕ್ಕಳ ಅಭಿವೃದ್ಧಿಗೆ ಕೆಲಸ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಳೆದ 5 ವರ್ಷಗಳಿಂದಲೂ ಮುಸ್ಲಿಂ ಡೈರೆಕ್ಟರವರು ಇದ್ದಾರೆ. ಅವರಿಗೆ ಕನ್ನಡ ಸರಿಯಾಗಿ ಬರುವುದಿಲ್ಲ. ಕನ್ನಡ ಸರಿಯಾಗಿ ಬರತಕ್ಕವರನ್ನು ಸಾಮಾನ್ಯ ಮನುಷ್ಯರ ಜೊತೆಯಲ್ಲಿ ಮಿಳಿತವಾಗಿರತಕ್ಕವರನ್ನು ಜನರ ಕಷ್ಟವನ್ನು ಅರಿತುಕೊಳ್ಳತಕ್ಕವರನ್ನು ಅಲ್ಲಿಗೆ ನೇಮಿಸಬೇಕು. ಬೆಂಗಳೂರಿನಲ್ಲಿರುವ ಒಂದು ಟೈಲರಿಂಗ್ ಯೂನಿಟ್‌ನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಅಲ್ಲಿ ಇರುವವರು ಅಕೌಂಟೆಂಟ್ ಮುಸ್ಲಿಂ, ಆರ್ಗನೈಸರ್ ಮುಸ್ಲಿಂ, ಟ್ರೈನಿಂಗ್ ಪಡೆಯುವವರು ಮುಸ್ಲಿಮರು. ಏತಕ್ಕೆ ಹೀಗೆ ಮಾಡಿದ್ದಾರೆ ನಾವು ಅರಿಯೆವು. ಮುಸ್ಲಿಮರಿಗೆ ಸಹಾಯ ಕೊಡಬಾರದು ಎಂದು ಹೇಳುತ್ತಾ ಇಲ್ಲ. ಆದರೆ ಹರಿಜನರ ಹೆಸರಿನಲ್ಲಿ ಬೇರೆಯವರು ಪ್ರಯೋಜನ ಹೊಂದುವ ಅವಕಾಶ ಮಾಡಿಕೊಡಬೇಡಿ ಎಂದು ತಮಗೆ ಹೇಳುತ್ತೇನೆ. ಎಲ್ಲರ ಕಲ್ಯಾಣಕ್ಕಾಗಿ ದುಡಿಯತಕ್ಕ, ನೀವು ಸುಖೀ ರಾಜ್ಯ ಸ್ಥಾಪನೆ ಮಾಡತಕ್ಕಂಥ ಕಾಂಗ್ರೆಸ್ಸಿನ ಸರ್ಕಾರ ರಾಮರಾಜ್ಯ ಸ್ಥಾಪನೆ ಮಾಡಬೇಕಾದರೆ ಹರಿಜನೋದ್ಧಾರ ಮೊದಲು ಆಗಬೇಕು. 30 ಕೋಟಿ ರೂಪಾಯಿಗಳನ್ನು ಒದಗಿಸಬೇಕಾದ ಕಡೆ ಕೇವಲ 2 ಕೋಟಿ ರೂಪಾಯಿಗಳನ್ನು ಒದಗಿಸಿ ಅಗ್ರಿಕಲ್ಚರಲ್ ಮಿನಿಸ್ಟರ್ ಆಗಿದ್ದವರನ್ನು ತೆಗೆದುಕೊಂಡು ಬಂದು ಎರಡು ದಿವಸಕ್ಕೆ ಒಂದು ಅಥವಾ ಎರಡು ಫೈಲು ಬರುವ ಒಂದು ಈ ಪೋರ್ಟ್ ಫೋಲಿಯೋ ಕೊಟ್ಟು ಅವರನ್ನು ಇಲ್ಲಿ ನಾಮಕಾವಸ್ತೆಗೆ ಕೂರಿಸಿದ್ದೀರಿ. ಅವರನ್ನು ಪುನಃ ಅಗ್ರಿಕಲ್ಚರಲ್ ಮಿನಿಸ್ಟರ್ ಮಾಡಿ ಶ್ರೀಮಾನ್ ರಾಚಯ್ಯನವರಿಗೋ ಅಥವಾ ಇನ್ನು ಯಾರಿಗೋ ಈ ಇಲಾಖೆ ಕೊಟ್ಟರೆ ಸಾಕಷ್ಟು ಕೆಲಸ ಮಾಡಲು ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಅಧ್ಯಕ್ಷರು ಸಾಕು ಎಂದು ಹೇಳುತ್ತಾರೆ. ಇಷ್ಟು ಮಾತುಗಳನ್ನು ಹೇಳಿ, ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ಮಾಡಿದ ರಚನಾತ್ಮಕ ಸಲಹೆಗಳನ್ನೂ ವಿವಿಧ ಟೀಕೆಗಳನ್ನೂ ಸರ್ಕಾರ ಗಮನದಲ್ಲಿಟ್ಟುಕೊಂಡು ಅವೆಲ್ಲವನ್ನು ಕಾರ್ಯಗತ ಮಾಡಬೇಕು ಎಂದು ಹೇಳಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿ ಇದು ಹರಿಜನಗಿರಿಜನರ ಪ್ರಗತಿ ಸಾಧಿಸಲು ಯೋಗ್ಯವಾದ ಡಿಮ್ಯಾಂಡ್ ಅಲ್ಲ ಎಂದು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಸ್ವಾಮಿ, ಈ ದಿವಸ ನಮ್ಮ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳು ಇಟ್ಟಿರತಕ್ಕಂಥ ಬಡ್ಜೆಟ್ಟನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕು ಎಂದು ಪ್ರಯತ್ನಪಡುತ್ತಾ ಇದ್ದೇನೆ. 1949ನೆ ಇಸವಿಯಿಂದ ಈ ಒಂದು ಸಂಬಂಧದಲ್ಲಿ ಭಾಗವಹಿಸಿ ಕೆಲಸ ಮಾಡತಕ್ಕ ಅವಕಾಶ ದೊರಕಿ ಇವೊತ್ತಿನವರೆಗೂ ಒದಗಿ, ರೂರಲ್ ಡೆವಲಪ್‌ಮೆಂಟ್ ಕಮಿಟಿಗಳನ್ನು ಸರ್ಕಾರದವರು ನೇಮಕ ಮಾಡಿದ್ದರೋ ಅದಕ್ಕೆ ಧೇರ್ಮನ್ ಆಗಿ ಕೆಲಸ ಮಾಡುವುದಕ್ಕೆ ಶುರು ಮಾಡಿದವನು, ಸ್ವಲ್ಪ ಹೆಚ್ಚು ಕಡಿಮೆ ಈಗ ತಾಲ್ಲೂಕ್ ಬೋರ್ಡ್

ಪ್ರಸಿಡೆಂಟ್ ಆಗಿ ಆ ಕೆಲಸದಲ್ಲಿ ಆಗಿನಿಂದ ಭಾಗವಹಿಸುತ್ತಿದ್ದೇನೆ. ಇದರಲ್ಲಿ ಅನೇಕ ಎಡರುತೊಡರುಗಳು ಇವೆ. ಅದನ್ನು ಸಂಪೂರ್ಣವಾಗಿ ಸರ್ಕಾರ ಅರಿತುಕೊಳ್ಳಬೇಕಾದುದು ನಿಜ. ಆದರೂ ಕೂಡ ಅನೇಕ ಕಾರ್ಯಕ್ರಮಗಳನ್ನು ಬೇಕಾದಷ್ಟು ಸಲ ಬದಲಾಯಿಸಿ ಕ್ರಮ ಕೈಗೊಳ್ಳುತ್ತಾ ಬಂದಿದ್ದಾರೆ. ಅಲ್ಲಿ ಅಷ್ಟು ಸಹಕಾರ ಸರ್ಕಾರದವರಿಗೆ ದೊರೆಯುತ್ತಾ ಇಲ್ಲ. ಮಾನ್ಯ ಸ್ನೇಹಿತರು ಮಾತನಾಡುವಾಗ ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಸಲಹೆಗಳನ್ನು ಕೊಡಬೇಕಾಗಿತ್ತು ಎಂದು ನನಗೆ ಅನಿಸುತ್ತದೆ. ಅವರು ಹೇಳಿದರು, ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಾರಾಯಣ ಗೌಡರಿಗೆ ವ್ಯವಸಾಯ ಖಾತೆ ಕೊಟ್ಟು ಶ್ರೀಮಾನ್ ರಾಚಯ್ಯನವರಿಗೆ ಈ ಖಾತೆಯನ್ನು ಕೊಟ್ಟಿದ್ದರೆ ಚೆನ್ನಾಗಿತ್ತು ಎಂದು. ಈ ಮನೋಭಾವದಿಂದಲೇ ಈ ಕೆಲಸ ಕಾರ್ಯಗಳಿಗೆ ಬಹಳ ತೊಂದರೆಯಾಗಿದೆ ಎಂದು ನನ್ನ ಅನುಭವದಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ತೊಂದರೆಗಳನ್ನು ನಾವೇ ನಿವಾರಿಸಿಕೊಳ್ಳಬೇಕು ಎನ್ನುವ ಮನೋಭಾವ ಬೆಳೆದು ಹೀಗೆ ಎಲ್ಲಿ ತೆಗೆದುಕೊಂಡರೂ ಕೂಡ ಅವರುಗಳನ್ನೇ ಹಾಕುವುದು ಜಾಸ್ತಿಯಾಗಿದೆ. ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್, ತಾಲ್ಲೂಕ್ ಲೆವೆಲ್ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರ್ ನೋಡಿ ಎಲ್ಲಾ ಅವರುಗಳನ್ನೇ ಹಾಕಿದ್ದಾರೆ. ಸಂತೋಷ. ಅವರು ಇರಬಾರದು ಎಂದು ಹೇಳುವುದಿಲ್ಲ. ಆ ಇಲಾಖೆಯಲ್ಲಿ ಪ್ರತ್ಯೇಕ ಅವರನ್ನೇ ಹಾಕಬೇಕು ಎನ್ನುವ ನೀತಿಯನ್ನು ಸರ್ಕಾರ ಬದಲಾಯಿಸಿದ ಹೊರತು ಅದು ಚೆನ್ನಾಗಿ ಅಭಿವೃದ್ಧಿ ಆಗುವುದಿಲ್ಲ ಎಂದು 1949ನೇ ಇಸವಿಯಿಂದಲೂ ಕೂಡ ನನ್ನ ಅನುಭವಕ್ಕೆ ಬಂದಿವೆ. ಸರ್ಕಾರದವರು ಮೊದಲು ಆಲೋಚನೆ ಮಾಡಬೇಕು. ಸಾಕಾದಷ್ಟು ಇದನ್ನು ಬದಲಾವಣೆ ಮಾಡಬೇಕು. ಅವರನ್ನು ರಕ್ಷಿಸುವುದಕ್ಕೆ ಅವಕಾಶ ಮಾಡಿ. ಅವರ ಕಷ್ಟಸುಖಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು. ಸ್ಟೇಟ್ ಲೆವಲ್‌ನಲ್ಲಿ ಸೋಷಿಯಲ್ ವೆಲ್‌ಫೇರ್ ಕಮಿಟಿ ಇವೆ. ಅಲ್ಲೂ ಇದೇ ರೀತಿ ಇವೆ. ಇನ್ನು ಷೆಡ್ಯೂಲ್ ಕಮಿಟಿ ಇದೆ. ಅಲ್ಲೂ ಇದೇ ರೀತಿಯಾಗಿ ಇದೆ. ಎಲ್ಲಾ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್‌ನಿಂದಲೇ ಬಂದವರು ಇರುತ್ತಾರೆ. ಇತರರಿಗೂ, ಅವರಿಗೂ ಇರುವ ತೊಂದರೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇವರಂತೆ ಬೇರೆಯವರೂ ಇರಬೇಕು. ಹೀಗೆ ಇಲ್ಲದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿ ಇಲಾಖೆಯಲ್ಲಿ ಮಾರ್ಪಾಟು ಮಾಡಬೇಕಾದುದು ಬಹಳ ಅಗತ್ಯ ಎಂದು ನಾನು ಭಾವಿಸಿದ್ದೇನೆ. ಮನೆಗಳನ್ನು ಕಟ್ಟತಕ್ಕಂಥ ವಿಷಯದಲ್ಲಿ ತಾಲ್ಲೂಕ್ ಬೋರ್ಡುಗಳು ಸ್ಥಾಪಿತವಾದ ಪ್ರಾರಂಭದಲ್ಲಿ ಒಂದು ಹೊಸ ಕಾನೂನು ತಂದರು. $1\frac{1}{2}$ ಸಾವಿರ ರೂಪಾಯಿನವರೆಗೆ ಅವರಿಗೆ ಸಾಲ ಕೊಡುವುದು, ಅದಕ್ಕೆ ಒಂದು ಸೊಸೈಟಿ ಮಾಡುವುದು. ಸೊಸೈಟಿ ಮಾಡಬೇಕಾದರೆ ಅವರ ಹತ್ತಿರ 10 ರೂಪಾಯಿ ತಗೆದುಕೊಳ್ಳುವುದು ಬಹಳ ಕಷ್ಟ ಇದೆ. ಮಾನ್ಯ ಸ್ನೇಹಿತರು ಹೇಳಿದ ಹಾಗೆ 4 ಆಣೆ, 8 ಆಣೆ ಸಂಪಾದಿಸಿ ಜೀವನ ಮಾಡುವುದು ಕಷ್ಟವಾಗಿರುವಾಗ ಅವರಿಂದ 10 ರೂಪಾಯಿ ತೆಗೆದುಕೊಂಡು ಸೊಸೈಟಿ ಮಾಡಬೇಕು ಎಂದರೆ ಬಹಳ ತೊಂದರೆ ಇದೆ. ತಾಲ್ಲೂಕ್ ಬೋರ್ಡ್‌ನವರು ಕಷ್ಟಪಟ್ಟು ಕೆಲವು ಕಡೆ ಸೊಸೈಟಿಗಳನ್ನು ರಿಜಿಸ್ಟರ್ ಮಾಡುತ್ತಾ ಇದ್ದಾರೆ. ಕೆಲವು ಕಡೆ ಕೆಲಸ ಮಾಡುತ್ತಾ ಇವೆ. ಈ ರೀತಿ ಇರುವಾಗ $1\frac{1}{2}$ ಸಾವಿರ ರೂಪಾಯಿ ಸಾಲ ಕೊಟ್ಟು ಅದನ್ನು ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಸರ್ಕಾರ ಆಲೋಚನೆ ಮಾಡಬೇಕು. ಹಿಂದೆ ಅನೇಕ ರೀತಿಯಲ್ಲಿ ಮನೆಕಟ್ಟಲು 200 ರೂಪಾಯಿನಿಂದ ಪ್ರಾರಂಭವಾಗಿ ಮಲೆನಾಡು ಕಡೆ 400 ರೂಪಾಯಿ ಕೊಡಬೇಕು ಎಂದು ಕೊಟ್ಟಂಥ ಕಾಲದಲ್ಲಿ ಮನೆಗಳನ್ನು ಕಟ್ಟಿಕೊಟ್ಟರೆ ಅದನ್ನು ಪ್ರತಿ ವರ್ಷ ರಿಪೇರಿ ಮಾಡಿಕೊಳ್ಳಲು ಒಂದು ಹೆಂಚು ಹೋದರೂ ಅದನ್ನು ಹಾಕಿಕೊಳ್ಳಲು ತೊಂದರೆ ಆಗಿ ಅನೇಕ ಮನೆಗಳು ಬಿದ್ದುಹೋದವು. ಸೈಟುಗಳನ್ನು ಕೊಟ್ಟು ಕಾಲೋನಿ ಮಾಡಿ ಮನೆಗಳನ್ನು ಕಟ್ಟಿಕೊಟ್ಟಾಗ ಆ ಮನೆಗಳನ್ನು ಬಿಟ್ಟು ಹೋಗಿ ಅಂತಹ ಮನೆಗಳು ಎಷ್ಟೋ ಬಿದ್ದುಹೋಗಿವೆ. ಏನೋ ಬಂದು ಕೂಗಿತು ಅಂತ ಬಿಟ್ಟು ಹೋಗಿ ಬಿಡುತ್ತಾರೆ. ಮನೆಗಳಿಗೆ ಸಾಲ ಕೊಟ್ಟು ನಾಳೆ ಆ ಸಾಲ ವಸೂಲು ಆಗಿಲ್ಲ ಎಂದು ವಸೂಲಿ ಕಾರ್ಯಕ್ರಮವನ್ನು ತೆಗೆದುಕೊಂಡರೆ ಒಂದು ಇಲಾಖೆಯನ್ನು ಪ್ರತ್ಯೇಕವಾಗಿ ಮಾಡಬೇಕಾಗುತ್ತದೆ. ಹೀಗೆ ಅನಾವಶ್ಯಕವಾಗಿ ದುಡ್ಡು ವ್ಯಯ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ತಾಲ್ಲೂಕು ಬೋರ್ಡಿನವರು ನೇರವಾಗಿ ಕೆಲಸ ಮಾಡತಕ್ಕ ಅಧಿಕಾರವನ್ನು ಹೊಂದಿದ್ದು ಅಲ್ಲಿ ಅವರ ಪ್ರತಿನಿಧಿಗಳು ಇದ್ದು ಅವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಫ್ರೀ ಆಗಿ ಗ್ರ್ಯಾಂಟುಗಳನ್ನು ಕೊಟ್ಟು 1,500 ರೂಪಾಯಿಗಳ ಬದಲಾಗಿ 750 ರೂಪಾಯಿಗಳಷ್ಟಾದರೂ ಕೊಟ್ಟು ಮನೆಗಳನ್ನು ಕಟ್ಟಿಸಿಕೊಡತಕ್ಕ ಜವಾಬ್ದಾರಿ ತಾಲ್ಲೂಕು ಬೋರ್ಡಿಗೆ ವಹಿಸಬೇಕು. ನಾಟಾಗಳನ್ನು ತರಿಸಿಕೊಡುವುದು ಕೈಲ ಹಣ ಕೊಡುವುದು ಇದೆ ಇದು ಸರಿಯಲ್ಲ. ಟಿಂಬರನ್ನು ಟೆಂಡರು ಕರೆದು ಸರಬರಾಯಿ ಮಾಡುವ ವಿಧಾನ ಸರಿಯಲ್ಲ, ಹಾಗೆ ತರಿಸಿದರೆ ಸರಿಯಾದ ಟಿಂಬರನ್ನು ಒದಗಿಸದೆ ಅವು ಬಾಳಿಕೆ ಬರದೆ ಮುರಿದು ತುಂಡಾಗುವುದುಂಟು. ಆದುದರಿಂದ ಈ ಪದ್ಧತಿಯನ್ನು ಬದಲಾವಣೆಮಾಡಬೇಕು. ಈ ನೀತಿಯಲ್ಲಿ ಅತಿ ಜಾಗ್ರತೆ ಮಾರ್ಪಾಡುಮಾಡ

(ಶ್ರೀ ಕೆ. ಎನ್. ವೀರಪ್ಪಗೌಡ)

ಬೇಕು. ತಾಲ್ಲೋಕು ಬೋರ್ಡಿಗೆ ಹಣ ಕೊಡಬೇಕು ಮತ್ತು ನಾಟಾಗಳನ್ನು ಉಚಿತವಾಗಿ ಕೊಡಬೇಕು, ಈ ರೀತಿ ಏರ್ಪಾಡುಮಾಡಬೇಕು. ಇಲ್ಲದಿದ್ದರೆ ಡಿಪೋದಲ್ಲಿ ಕೊಂಡರೆ ಯಾವ ಜಾತಿಯ ನಾಟ ಎಂಬುದು ಸರಿಯಾಗಿ ಗೊತ್ತಾಗುವುದಿಲ್ಲ, ಮಲೆನಾಡಿನಲ್ಲಿ ಒಳ್ಳೆಯ ನಾಟಾ ಉಪಯೋಗಿಸಿ ಮನೆ ಕಟ್ಟದಿದ್ದರೆ ಮಳೆಗಾಲದಲ್ಲಿ ಅದು ತಡೆಯುವುದಿಲ್ಲ. ಆದುದರಿಂದ ಸರಿಯಾದ ನಾಟಾ ಒದಗಿಸಲು ಬೇರೆ ಏರ್ಪಾಡನ್ನು ಬೇಗ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಈಗ ಹಾಸ್ಟಲುಗಳನ್ನು ಪ್ರಾರಂಭಿಸಿದ್ದಾರೆ, ಒಂದು ತಾಲ್ಲೂಕಿನಲ್ಲಿ ಗಂಡುಮಕ್ಕಳ ಹಾಸ್ಟಲನ್ನು ಇನ್ನೊಂದು ತಾಲ್ಲೂಕಿನಲ್ಲಿ ಹೆಣ್ಣುಮಕ್ಕಳ ಹಾಸ್ಟಲನ್ನು ಪ್ರಾರಂಭಿಸುತ್ತಿದ್ದಾರೆ. ಆದರೆ ಹೆಣ್ಣುಮಕ್ಕಳನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಕಳಿಸುವುದಕ್ಕೆ ಸಾಧ್ಯವಿಲ್ಲ, ಅವರು ಹೋಗುವುದಿಲ್ಲ. ಬರೀ ಹೆಣ್ಣುಮಕ್ಕಳಿಗೇ ಬೇರೆ ಹಾಸ್ಟಲ್ ಎಂದು ಮಾಡುವುದು ಸರಿಯಾಗಿರುವುದಿಲ್ಲ, ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು—ಇಬ್ಬರಿಗೂ ಕೂಡ ಒಂದೇ ಕಡೆ ಅವಕಾಶವಿರುವ ಏರ್ಪಾಡುಮಾಡಬೇಕು. ಹಾಗೆ ಮಾಡಿದರೆ ಅವರ ಅಭಿವೃದ್ಧಿಗೆ ಅವಕಾಶವಾಗುತ್ತದೆ, ಹುಡುಗರು ಜೊತೆಯಲ್ಲಿ ಸೇರಿ ಆಟಪಾಟಗಳನ್ನಾಡಲು ಅವಕಾಶಮಾಡಬೇಕು, ಹಾಗೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೆ 4 ನೆಯ ತರಗತಿ ಮುಗಿದಮೇಲೆ ಹಾಸ್ಟಲಿಗೆ ಸೇರಬೇಕೆಂಬ ನಿಯಮವಿದೆ, ಇದರಿಂದ ಕಷ್ಟವಾಗಿದೆ. ಸಾಮಾನ್ಯವಾಗಿ ಆರೇಳು ವರ್ಷಗಳವರೆಗೂ ಯಾರೂ ಶಾಲೆಗೆ ಮಕ್ಕಳನ್ನು ಕಳಿಸುವುದಿಲ್ಲ, ಹಾಗಾದರೆ 4 ನೇ ತರಗತಿ ಮುಗಿಯುವವರೆಗೆ ಹುಡುಗರಿಗೆ 10 ವರ್ಷವಾಗುತ್ತದೆ. ಅಷ್ಟರಲ್ಲಿ ಹುಡುಗರಿಗೆ ಚಿಕ್ಕ ವಯಸ್ಸಿನಲ್ಲೇ ಕೆಲಸಕಾರ್ಯ ಕಲಿಸಿರುತ್ತಾರೆ, ಅವರನ್ನು ಶಾಲೆಗೆ ಕಳಿಸಿದರೆ ಜೀವನಕ್ಕೆ ತೊಂದರೆಯಾಗುವುದೆಂದು ಕೆಲವರು ಕಳಿಸುವುದಿಲ್ಲ. ಚಿಕ್ಕಂದಿನಲ್ಲೇ ಹುಡುಗರು ಒಳ್ಳೆಯ ವಾತಾವರಣದಲ್ಲಿ ಬೆಳೆಯಲು ಅವಕಾಶಮಾಡಬೇಕು. ಆದುದರಿಂದ ಒಂದನೆಯ ತರಗತಿಯಿಂದಲೇ ಮಕ್ಕಳಿಗೆ ಹಾಸ್ಟೆಲಿನಲ್ಲಿ ಸೇರಲು ಅವಕಾಶ ಕಲ್ಪಿಸಬೇಕು. ವಿಮೆನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಸೆಂಟರುಗಳಲ್ಲಿ 3 ರಿಂದ 5 ವರ್ಷಗಳೊಳಗಿರುವ ಹುಡುಗರು ಸೇರಲು ಅವಕಾಶವಿದೆ, ಅಲ್ಲಿ ಆಟಪಾಟಗಳಿಗೆ ಮಾತ್ರ ಅವಕಾಶವಿದ್ದರೂ, ಓದುವುದಕ್ಕೆ ಅವಕಾಶವಿಲ್ಲದಿದ್ದರೂ ಹುಡುಗರು ಜೊತೆಯಲ್ಲಿ ಸೇರಿ ಕಲಿಯಲು ಒಳ್ಳೆಯ ವಾತಾವರಣವಿರುತ್ತದೆ. ಆದುದರಿಂದ ಅದೇ ರೀತಿಯಲ್ಲಿ ಅವಕಾಶವಾಗುವಂತೆ ಹಾಸ್ಟಲುಗಳಲ್ಲಿ ಹುಡುಗರು ಒಂದನೆ ತರಗತಿಯಿಂದಲೇ ಸೇರಲು ಅವಕಾಶಮಾಡಬೇಕು. ಹೀಗೆ ಮಾಡಿ ಹುಡುಗರು ಸೋಷಿಯಲ್ಲಾಗಿ ಒಬ್ಬರೊಡನೆ ಒಬ್ಬರು ಕಲೆತು ಮುಂದುವರೆಯುವುದಕ್ಕೆ ಅವಕಾಶಮಾಡಬೇಕು. ಶೃಂಗೇರಿಯಲ್ಲಿ ಹೆಣ್ಣು ಮಕ್ಕಳಿಗೂ ಮತ್ತು ಕೊಪ್ಪದಲ್ಲಿ ಗಂಡು ಹುಡುಗರಿಗೂ ಹಾಸ್ಟಲು ಇದೆ. ಹೀಗೆ ಬೇರೆ ಬೇರೆ ಇರುವುದು ಸರಿಯಲ್ಲ. ಹೀಗಾಗಿ ಬಹಳ ದೂರವಿದ್ದು ಎಷ್ಟೋ ವಿದ್ಯಾರ್ಥಿಗಳು ಹಾಸ್ಟಲಿಗೆ ಸೇರಲು ಅವಕಾಶವಾಗಿಲ್ಲ. ಆಮೇಲೆ ಅವರ ಕಡೆಯವರೇ ಅಡಿಗೆಯವರು ಮುಂತಾದವರಿರಬೇಕು ಎಂದು ಹೇಳಿದರೆ ಕಷ್ಟವಾಗುತ್ತದೆ. ಹಾಗಿದ್ದರೆ ಇತರರು ಸೇರುವುದಿಲ್ಲವೆಂದು ಹೇಳುತ್ತಾರೆ. ಈ ಕಷ್ಟವಿದೆ. ಇದನ್ನು ತಪ್ಪಿಸಿ ಮೊದಲೇ ಮಕ್ಕಳು ಒಟ್ಟಿಗೆ ಬೆಳೆಯುವುದಕ್ಕೆ ಅವಕಾಶಮಾಡಬೇಕು. ನಂತರ ಬೇರೆಯವರಿದ್ದರೂ ಚಿಂತೆಯಿಲ್ಲ ಎಂಬ ಮನೋಭಾವ ಬೆಳೆಯಬೇಕು. ಒಂದೇ ಸಲ ಎಲ್ಲಾ ಬಿಗಿ ಮಾಡಿದರೆ ಕಷ್ಟವಾಗುತ್ತದೆ. ನಾವು ಒಂದು ಹಾಸ್ಟಲನ್ನು ನಡೆಸುತ್ತಿದ್ದೇವೆ, ಅಲ್ಲಿ ಹುಡುಗರನ್ನು ಸೇರಿಸಲು ಕೆಲವರು ಹಿಂದುಮುಂದು ನೋಡುತ್ತಾರೆ, ಅಡಿಗೆಯವರು ಯಾರು ಎಂದು ವಿಚಾರ ಮಾಡುತ್ತಾರೆ, ಈಗ ಅವರ ಪೈಕಿಯವರೇ ಅಡಿಗೆ ಮಾಡುತ್ತಿರುವುದರಿಂದ ಕೇವಲ 12 ಹುಡುಗರು ಮಾತ್ರ ಸೇರಿ ಸಂಖ್ಯೆ ಕಡಮೆಯಾಗಿದೆ. ಆದುದರಿಂದ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಟ್ರೈಬ್ಸ್‌ನವರೇ ಅಧಿಕಾರಿಗಳು ಇರಬೇಕು ಎಂದಿರುವುದನ್ನು ಮೊದಲು ಬದಲಾವಣೆ ಮಾಡಬೇಕು. ಹಾಗೆ ಮಾಡಿದರೆ ಬಹಳ ಉಪಯೋಗವಾಗುತ್ತದೆ ಎಂದು ಸೂಚಿಸುತ್ತೇನೆ.

ಇನ್ನು ದರಖಾಸ್ತು ವಿಚಾರದಲ್ಲಿ ಬಹಳ ತೊಂದರೆಯಾಗುತ್ತಿದೆ, ಆ ಸಂಬಂಧದಲ್ಲಿ ರೆವೆನ್ಯೂ ಮಂತ್ರಿಗಳಿಗೆ ಒಂದು ಪಟ್ಟಿಮಾಡಿ ಕಳಿಸಿದ್ದೇನೆ. ತಾಸಿಲ್ದಾರರು ಸರಿಯಾಗಿ ಗಮನಕೊಡುತ್ತಿಲ್ಲ, ಎಷ್ಟು ಹೇಳಿದರೂ 4 ಗುಂಟೆ ಜಮೀನು ಸಹ ಕೊಡುತ್ತಿಲ್ಲ. ಈ ರೀತಿ ಮಾಡಬಾರದು. ನಾನು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟಾಗಿ ಪಟ್ಟಿ ಕಳಿಸಿದರೂ ಕ್ರಮ ತೆಗೆದುಕೊಂಡಿಲ್ಲ. ಇದರಲ್ಲಿ ಸ್ವಲ್ಪ ಸರ್ಕಾರದ ತಪ್ಪಿದೆ. ಉಗ್ರಕ್ರಮಕ್ಕೆ ಅವಕಾಶ ಇರಬೇಕು ಇದಕ್ಕೆ ಸರಿಯಾದ ಗಮನಕೊಡದಿದ್ದರೆ 2 ರೂಪಾಯಿಗಳ ಸ್ಟ್ಯಾಂಪು ಹಚ್ಚಿ ಸೆಕ್ರೆಟೇರಿಯಟ್ಟಿಗೆ ಬಂದು ಅರ್ಜಿ ಕೊಡಲು ಅನೇಕರಿಗೆ ಸಾಧ್ಯವಿಲ್ಲ. ರೆವೆನ್ಯೂ ಇಲಾಖೆಯಲ್ಲಿ ಅವರಿಗೆ ಪ್ರಾಶಸ್ತ್ಯ ಕೊಡಬೇಕು, ರಿಯಾಯಿತಿ ಕೊಡಬೇಕು. ಇದಕ್ಕೆ ಬೇಕಾದರೆ ಸಾಮಾನ್ಯವಾಗಿ ದರಖಾಸ್ತು ನಿಯಮಗಳನ್ನು ಸ್ವಲ್ಪ ಸಡಿಲಿಸಬೇಕು.

ಇದೆಲ್ಲಾ ಒಟ್ಟು ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರಿಗೆ ಹೋಗಿ ತಾಲ್ಲೂಕು ಆಫೀಸಿಗೆ ಬರಬೇಕೆಂದು ಹೇಳುವುದು ಸರಿಯಲ್ಲ. ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರಿಗೆ ಏಕೆ ಹಾಕಬೇಕು ? ರೆಗ್ಯುಲರ್ ರೆವೆನ್ಯೂ ಇನ್‌ಸ್ಪೆಕ್ಟರ ಮೂಲಕವೇ ಬಂದರೆ ಸಾಕು, ಆಗ ಅನುಕೂಲವಾಗುತ್ತದೆ. ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರು ಅವರ ಜಾತಿಯವರೇ ಇರುವಾಗ ಅವರಿಂದ ವರದಿ ಬರಬೇಕೆಂದು ಹೇಳುತ್ತಾರೆ. ಅವರು ಅನೇಕ ಸಲ ದರಖಾಸ್ತು ಹಾಕಿದಾಗ ಬಡಪಾಯಿಗಳಿಂದ ಹಣ ಕೇಳುವುದುಂಟು. ಡಿಸ್ಟ್ರಿಕ್ಟ್ ವೆಲ್‌ಫೇರ್ ಆಫೀಸರು ಚಿಕ್ಕಮಗಳೂರಿಗೆ ಹೋಗುವುದಕ್ಕೆ ಆಶ್ರಮ ಸ್ಕೂಲ್ ಉಪಾಧ್ಯಾಯರಿಂದ ಬಸ್ಸು ಛಾರ್ಜು ಕೇಳಿದ್ದಾರೆ, ಇದು ನಾಚಿಕೆಗೇಡು, ಇದನ್ನು ಕೇಳಿ ವ್ಯಥೆಯಾಗಿದೆ. ಹೀಗಿರುವುದರಿಂದ ಇಲಾಖೆಯಲ್ಲಿ ಸ್ವಲ್ಪ ಬದಲಾವಣೆಯಾಗುವುದಕ್ಕೆ ಅನೇಕ ಕಾರಣಗಳಿವೆ. ದರಖಾಸ್ತು ವಿಷಯದಲ್ಲಿ ಒಂದು ದೊಡ್ಡ ತೊಂದರೆಯೊಂದಿದೆ, ಒಂದೆರಡು ಎಕರೆ ಜಮೀನು ಕೊಡಬೇಕಾದರೂ ಫಾರೆಸ್ಟ್ ಇಲಾಖೆಯವರು ಬಂದು ಬೆಲೆ ಕಟ್ಟಬೇಕು, ಅವರು ಹರಾಜು ಮೂಲಕ ಮಾಲ್ಕಿ ತೆಗೆಸಬೇಕು, ಇದರಿಂದ ತೊಂದರೆಯಾಗಿದೆ. ಹರಾಜು ನೋಟಿಫಿಕೇಷನ್ ಆಗಿ ಬಿಡ್ ಮಾಡಿಲ್ಲ ಎಂದು ನಾಲ್ಕಾರು ವರ್ಷಗಳಾದರೂ ಜಮೀನು ದೊರೆಯುವುದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಆದುದರಿಂದ ಉಚಿತವಾಗಿ ನಿಮ್ಮ ವರ್ಗದವರಿಗೆ ಕೊಡಬೇಕು, ಜಮೀನು ಅಭಿವೃದ್ಧಿ ಮಾಡಿಕೊಳ್ಳಲು ಉಪಯೋಗಿಸಿಕೊಳ್ಳಲಿ, ಚಿಂತೆ ಇಲ್ಲ. ಹಣ ಕಟ್ಟಿ ಎಂದು ಹೇಳುವುದು, ಫಾರೆಸ್ಟ್ ಇಲಾಖೆ ಸ್ಥಳಕ್ಕೆ ಹೋಗಿ ಬೆಲೆ ಕಟ್ಟಿ ಮಾಲ್ಕಿ ತೆಗೆಸಿದಮೇಲೆ ಕೊಡುತ್ತೇವೆಂದು ಹೇಳುವುದು ಮುಂತಾದುವುಗಳಿಂದ ತೊಂದರೆಯಾಗುತ್ತದೆ. ವರ್ಷದ ಕೊನೆಯಲ್ಲಿ ಹಣ ಖರ್ಚು ತೋರಿಸುವುದಕ್ಕೆ ಡ್ರಾ ಮಾಡುವುದು. ಇದು ತಪ್ಪಬೇಕು. ಒಂದು ವೇಳೆ ಒದಗಿಸಿದ ಹಣ ಖರ್ಚಾಗದಿದ್ದರೆ ಖಜಾನೆಯಲ್ಲಿರುತ್ತದೆ, ಬರುವ ವರ್ಷ ಹೆಚ್ಚು ಉಪಯೋಗವಾಡಬಹುದು.

ಅಮೇಲೆ ಪಾನ ನಿರೋಧದ ಕಾನೂನಿನ ವಿಷಯ. ಪೂರ್ಣವಾಗಿ ದೇಶದಲ್ಲಿ ನಮ್ಮವರು ಮಾತ್ರ ಕುಡಿಯುತ್ತಾರೆಂಬ ಭಾವನೆ ಇರುವ ಹಾಗೆ ಕಾಣುತ್ತದೆ, ನಮ್ಮಲ್ಲಿ ನಿಮ್ಮ ವರ್ಗದವರು ಕಡಮೆಯಿದ್ದರೂ ಸಂಖ್ಯೆ ಪ್ರಕಾರ ನಮ್ಮಲ್ಲೇ ಕುಡಿಯುವವರು ಹೆಚ್ಚಾಗಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಹೆಚ್ಚು ಉತ್ಪತ್ತಿಯಿಲ್ಲ, ಅದರಿಂದ ಕಡಿಮೆಗೆ ಸಿಕ್ಕುವ ಫ್ರೆಂಚ್ ಪಾಲಿಷ್ ತಂದು ಕುಡಿಯುತ್ತಾರೆ, ಅದು ದೊಡ್ಡ ದೊಡ್ಡ ಡ್ರಂಮುಗಳಲ್ಲಿ ಬರುತ್ತದೆ. ಇದನ್ನು ಕುಡಿದು ಕೆಲಸ ಮಾಡುವುದಕ್ಕೆ ಶಕ್ತಿಯಿಲ್ಲದೆ ಜನರು ಹಾಳಾಗುತ್ತಿದ್ದಾರೆ, ನಮ್ಮಲ್ಲಿ ಬಹಳ ದೃಢಕಾಯರಿದ್ದರೂ ಬಲವೆಲ್ಲಾ ಇದರಿಂದ ಕಡಮೆಯಾಗುತ್ತಿದೆ. ಬೇಕಾದರೆ ಯಾರನ್ನಾದರೂ ಕಳಿಸಿ, ತೋರಿಸುತ್ತೇನೆ. ಇದಕ್ಕೆ ಅವಕಾಶವಿರಬಾರದು. ಕುಡಿಯುವುದನ್ನು ನಿಲ್ಲಿಸಬೇಕು, ಎಂದು ನಾವು ಚಳುವಳಿ ಮಾಡಿ 1942 ರಲ್ಲಿ ನಮ್ಮ ಊರಿನಲ್ಲಿ ಅಂಗಡಿ ಹರಾಜಾದರೂ ಕಂಟ್ರಾಕ್ಟರು ಕೆಲಸ ಮಾಡದ ಹಾಗೆ ಮಾಡಿದೆವು. ಶರಾಬು ಅಂಗಡಿಗಳಿಗೆ ನುಗ್ಗಿ ಬಾಟ್ಲ್‌ಗಳನ್ನು ಒಡೆದು ಹಾಕಿದ್ದೇವೆ. ಆಗ ಅನೇಕ ಜನ ಕುಡಿಯುವುದಿಲ್ಲವೆಂದು ಭಾಷೆ ಕೊಟ್ಟವರು, ಇವತ್ತು ಅವರೆಲ್ಲಾ ಕುಡಿಯುವದು ಬಿಟ್ಟಿದ್ದಾರೆ. ಒಟ್ಟಿನಲ್ಲಿ ಇದರಲ್ಲಿ ಪ್ರಚಾರ ಮತ್ತು ಅನೇಕ ಬದಲಾವಣೆಗಳಾಗತಕ್ಕದ್ದು ಅಗತ್ಯ ಮತ್ತು ಸರ್ಕಾರದವರು ಕಡಿಮೆ ಬೆಲೆಯ ಸೇಂದಿ ವಗೈರೆ ಜಾರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ಇಷ್ಟು ಹಣವನ್ನು ಒದಗಿಸಿರುವುದು ಸಂತೋಷ. ಅದನ್ನು ಇನ್ನೂ ಜಾಸ್ತಿ ಮಾಡುವುದೂ ಒಳ್ಳೆಯದು ಎಂದು ಹೇಳಿ, ಕಾಲಾವಕಾಶ ಸ್ವಲ್ಪ ಜಾಸ್ತಿ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ). —ಮಾನ್ಯ ಸಭಾಧ್ಯಕ್ಷರೇ, ಈ ಡಿಮ್ಯಾಂಡ್ ನಂ. 27ಕ್ಕೆ ಸಂಬಂಧಪಟ್ಟ ಎರಡು ಕೋಟಿ, 98 ಲಕ್ಷದ 65 ಸಾವಿರ ರೂಪಾಯಿಯ ಬೇಡಿಕೆಯನ್ನು ಮಾನ್ಯ ಸಚಿವರು ಇಲ್ಲಿ ಮಂಡಿಸಿದ್ದಾರೆ. ಈ ಬಗ್ಗೆ ಇದನ್ನು ವಿರೋಧ ಮಾಡುತ್ತಾ ಒಂದೆರಡು ಮಾತುಗಳನ್ನು ಆಡುತ್ತೇನೆ. ನಮ್ಮ ದೇಶದಲ್ಲಿ ಹಿಂದುಳಿದ ಜನಾಂಗ ಮುಂದುವರಿಯಬೇಕೆನ್ನುವ ಕೂಗು ಬಹಳ ಹಿಂದಿನಿಂದಲೂ, ಅಂದರೆ ಮಹಾತ್ಮ ಗಾಂಧಿಜಿಯವರ ಕಾಲದಿಂದಲೂ ಪ್ರಾರಂಭವಾಗಿದೆ. ಆದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣರವರು ಈಗಾಗಲೇ ತಿಳಿಸಿದ್ದಾರೆ. ಮಹಾತ್ಮ ಗಾಂಧಿಜಿಯವರು ಬಹಳ ವಿಶ್ವಾಸದಿಂದ, ಪ್ರೇಮದಿಂದ, ಮತ್ತು ಆತ್ಮೀಯತೆಯಿಂದ ಹಿಂದುಳಿದ ಜನಾಂಗದವರಾದ ಹರಿಜನರನ್ನು ಅವರ ಕುಲದ ಹೆಸರು ಕೂಡ ಬದಲಾಯಿಸಿ, ಮುಂದುವರಿಸಬೇಕೆಂದು ಒಂದು ಹೋರಾಟವನ್ನು ಅವರು ಜೀವಂತರಾಗಿದ್ದ ಅವಧಿಯಲ್ಲಿ ಪ್ರಾರಂಭಮಾಡಿದರು ಮತ್ತು ಮುಂದುವರಿಸಿದರು. ತಮಗೆ ಗೊತ್ತಿದೆ, ದೇಶದಲ್ಲಿ ಹರಿಜನರ ಪರಿಸ್ಥಿತಿ ಅವರಲ್ಲೂ ಹಿಂದುಳಿದ ಜನರ ಪರಿಸ್ಥಿತಿ ಯಾವ ಮಟ್ಟದಲ್ಲಿ ಇದೆ ಎಂದು. ಇವರನ್ನು ಮುಂದುವರಿದ ಜನಾಂಗಗಳಿಗೆ ಹೋಲಿಸಿ ನೋಡಿದಾಗ, ಆರ್ಥಿಕ ಮಟ್ಟದಲ್ಲಿ, ವಿದ್ಯಾ ಮಟ್ಟದಲ್ಲಿ, ಅಥವಾ ಇನ್ನಿತರ ಯಾವ ಮಟ್ಟದಲ್ಲೂ ನೋಡಿದರೆ ಪ್ರತಿಯೊಬ್ಬರಿಗೂ ಕನಿಕರ ಬರುತ್ತದೆ. ಅದೇ ರೀತಿ

(ಶ್ರೀ ಎಸ್. ಬಂಗಾರಪ್ಪ)

ಎಲ್ಲರೂ ಕನಿಕರ ತೋರಿಸುತ್ತಿದ್ದಾರೆ. ಆದರೆ ಸರ್ಕಾರದವರು ಸ್ವಾತಂತ್ರ್ಯ ಬಂದಾಗಿನಿಂದಲೂ ಸಹ ಹೇಳುತ್ತಿದ್ದಾರೆ, ಹರಿಜನರನ್ನು ಮುಂದೆ ತರುತ್ತೇವೆ, ಅವರಿಗೆ ವಸತಿ ಸೌಕರ್ಯ ಕಲ್ಪಿಸುತ್ತೇವೆ, ಜಮೀನು ಕೊಡುತ್ತೇವೆ, ಅವರಿಗೆ ವಿದ್ಯೆ ಕೊಡುತ್ತೇವೆ, ಇತ್ಯಾದಿಗಳನ್ನು ಹೇಳುತ್ತಿದ್ದಾರೆ. ಈಗಾಗಲೆ ಅನೇಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಈ ಹಣದಲ್ಲಿ ಏನು ಪ್ರಗತಿಯಾಗಿದೆ ಎಂದು ಯಾರಾದರೂ ಒಬ್ಬ ಮಾನ್ಯ ಸದಸ್ಯರು ನೋಡುವುದಾದರೆ, ಆ ಪ್ರಗತಿ ಯಾವ ಮಟ್ಟದಲ್ಲಿ ಆಗಬೇಕಾಗಿತ್ತೋ ಅದು ಆಗಲಿಲ್ಲ. ಇವತ್ತಿನ ದಿವಸ ನಮ್ಮ ಸಮಾಜದಲ್ಲಿ ಕ್ರಿಶ್ಚಿಯನ್ ಜನಾಂಗದವರು ಅವರನ್ನು ತಮ್ಮ ಜನಾಂಗಕ್ಕೆ ಸೇರಿಸಬೇಕೆಂದು ಪ್ರಯತ್ನ ಮಾಡಿದಾಗ, ಹಿಂದುಗಳು ಅವರನ್ನು ಕ್ರಿಶ್ಚಿಯನರ ಪಂಗಡಕ್ಕೆ ಸೇರಿಸುತ್ತಿದ್ದಾರೆಂದು ಕೂಗೆಬ್ಬಿಸಿದರೂ, ಇವತ್ತಿನ ದಿವಸ ಅವರನ್ನು ಉಳಿಸಿಕೊಳ್ಳಲು ಏನು ಪ್ರಯತ್ನ ಮಾಡುತ್ತಿದ್ದೇವೆಂದರೆ—ಅವರು ನಮ್ಮ ಸಮಾಜದಲ್ಲಿ ಹಿಂದೆ ಯಾವ ಸ್ಥಾನವನ್ನು ಇಟ್ಟುಕೊಂಡಿದ್ದರೋ, ಅದೇ ಸ್ಥಾನವನ್ನು ಕೊಟ್ಟು ಅದನ್ನು ಉಳಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಸರ್ಕಾರದವರು ಒಂದು Removal of untouchability Act ಮಾಡಿದ್ದಾರೆ. ಅದರ ಪ್ರಕಾರ ತೆಗೆದುಕೊಂಡಿರತಕ್ಕ ಕ್ರಮಗಳೇನು ? ಅವರ ಕ್ರಮ ಬರೇ ಪುಸ್ತಕದ ಬದನೆಕಾಯಿ ಆಗಿ ಉಳಿದಿದೆ. ಉದಾಹರಣೆಗೆ ನನ್ನ ಕ್ಷೇತ್ರವಾದ ಸೊರಬದಲ್ಲಿ ಆನವಟ್ಟಿ, ಜಡೆಹೋಬಳಿಯಲ್ಲಿರುವ ಹರಿಜನರಿಗೆ ವಸತಿ ಸೌಕರ್ಯವಿಲ್ಲ, ಜಮೀನಿಲ್ಲ, ವಿದ್ಯೆ ಇಲ್ಲ, ಯಾವುದೂ ಇಲ್ಲ. ಅಲ್ಲಿ ತೋಟಿ, ತಳವಾರ, ಸಿದ್ಧ, ಬೋವಿ ಎಲ್ಲರೂ ಇದ್ದಾರೆ. ಇವರನ್ನು ಮೇಲೆ ತರುವುದಕ್ಕೆ ಯಾವ ಪರಿಣಾಮಕರವಾದ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನನ್ನ ಕ್ಷೇತ್ರದಲ್ಲಿ ಬೇಕಾದಷ್ಟು ಬಂಜರು ಭೂಮಿಗಳಿವೆ, ಅವುಗಳನ್ನು ಈ ಹರಿಜನರಿಗೆ ಒದಗಿಸಿಕೊಡಲು ಸರ್ಕಾರದವರು ಏರ್ಪಾಡು ಮಾಡಬೇಕು. ಅದರಲ್ಲೂ ಶ್ರೀಮಾನ್ ರಾಚಯ್ಯನವರು ಹೆಚ್ಚಾಗಿ ಯೋಚನೆ ಮಾಡಬೇಕು. ಫಾರೆಸ್ಟು ಎಲ್ಲಾ ರೆವಿನ್ಯೂ ಇಲಾಖೆಯವರ ಕೈಯಲ್ಲಿ ಇವೆ. ಅವರ ಇಲಾಖೆಯಲ್ಲಿ ಬಂಜರು ಭೂಮಿ ಇದೆ. ಅನವಟ್ಟಿ ಜಡೆಹೋಬಳಿಯಲ್ಲಿ ಸಾವಿರಾರು ಎಕರೆ ಇಂಥ ಭೂಮಿಗಳಿವೆ. ಇದನ್ನು ಹರಿಜನರಿಗೆ ಉಚಿತವಾಗಿ ಏಕೆ ಮಂಜೂರು ಮಾಡಬಾರದು ? ಮತ್ತು ಇವತ್ತಿನವರೆಗೆ ಏಕೆ ಮಾಡಿಲ್ಲವೆಂದು ಕೇಳುತ್ತೇನೆ. ಇಷ್ಟೇ ಅಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಹರಿಜನರಿಗೆ ಮನೆಗಳನ್ನು ಕಟ್ಟಲಿಕ್ಕೆ ಸಾಲಗಳನ್ನು ಕೊಡುತ್ತಿದ್ದಾರೆ. ಇದರಲ್ಲೂ ಬೇಕಾದಷ್ಟು ಲೋಪದೋಷಗಳಿವೆ. ಇದರಲ್ಲಿ ಅವರವರ ಮನೆಗಳನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ತಾಲ್ಲೂಕು ಬೋರ್ಡಿನವರು ಕೊಡುವ ಹೆಚ್ಚಿನ ಸೌಲಭ್ಯಗಳನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಹೀಗಿದ್ದರೆ ಹರಿಜನರಿಗೆ ಮನೆಗಳನ್ನು ಕಟ್ಟುವುದಕ್ಕೆ ಸಾಲಗಳನ್ನು ಕೊಡುವವರು ಯಾರು ? ಕೊಡತಕ್ಕ ಇಲಾಖೆ ಯಾವುದು ? ನನಗೆ ಗೊತ್ತಿರುವ ಹಾಗೆ ಇದನ್ನು ಯಾವ ಇಲಾಖೆಯೂ ಮಾಡುತ್ತಾ ಇಲ್ಲ. ಆದ್ದರಿಂದ ಎರಡು ವಿಷಯಗಳನ್ನು ಸರ್ಕಾರದವರು ಯೋಚನೆ ಮಾಡಬೇಕು. ಒಂದು ಹರಿಜನ ಮತ್ತು ಹರಿಜನರ ಮಟ್ಟದಲ್ಲಿರತಕ್ಕ ಜನರಿಗೆ ಸರ್ಕಾರದವರು ಸ್ವಾತಂತ್ರ್ಯ ಬಂದನಂತರ ಮನೆಗಳನ್ನು ಕಟ್ಟಿಸುವುದು ಬೇಡವೆ, ಅದಕ್ಕೋಸ್ಕರ ಈ ಇಲಾಖೆ ಬೇಕಾಗಿಲ್ಲವೇ ? ಅದನ್ನು ಒಪ್ಪೋಣವೇ? ಅಥವಾ ಈ ಸಾಲ ಕೊಡುವುದು ಬೇಡ, ಈ ಹರಿಜನರು ಮೊದಲಿನ ಹಾಗೆ ಇದ್ದಾರೆ, ಹಾಗೇ ಇರಲಿ ಎಂಬುದು ಸರ್ಕಾರದ ಅಭಿಪ್ರಾಯವೇ ಎಂಬುದನ್ನು ಯೋಚನೆ ಮಾಡಬೇಕು. ಹಿಂದುಳಿದ ಜನಾಂಗವನ್ನು ಹಿಂದೆ ಯಾವ ಮಟ್ಟದಲ್ಲಿ ಇಟ್ಟಿದ್ದರು, ಅದೇ ಮಟ್ಟದಲ್ಲಿ ಇಟ್ಟಿದ್ದೇ ಆದರೆ, ಮುಂದೆ ಅದು ಬಹಳ ಕಠಿಣವಾಗಿ, ವಿಷಮ ಪರಿಸ್ಥಿತಿಗೆ ಬರಬಹುದು. ಗಾಂಧೀಜಿಯವರ ಗುರಿ ಸಾಧನೆಗೋಸ್ಕರ ಈ ವಿಷಯದಲ್ಲಿ ಒಂದು ಚಳವಳಿ ಮಾಡುವುದಕ್ಕೂ ಪರಿಪೂರ್ತ ಕಾರಣಗಳಿವೆ. ಆದ್ದರಿಂದ ಸರ್ಕಾರದವರು ಕೂಡಲೆ, ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ವಿದ್ಯಾಭ್ಯಾಸ ಕೊಡುವುದಕ್ಕೆ, ಜಮೀನುಗಳನ್ನು ಕೊಡುವುದಕ್ಕೆ, ಎಲ್ಲಾ ಯೋಗ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆ. ಇವತ್ತು ಮಲೆನಾಡಿನಲ್ಲಿ ಬೇಕಾದಷ್ಟು ನಾಟಾಗಳು ಇವೆ, ಟಿಂಬರ್ ಇವೆ. ಇದರಿಂದ ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ಪರ್ಮಿಟ್ ಕೊಡಿ, ಹೆಂಚುಗಳನ್ನು ಕೊಡಿ, ಹಾಗೂ ಇನ್ನಿತರ ಸೌಲಭ್ಯಗಳನ್ನು ಕೊಡಿ ಮತ್ತು ಇದರಿಂದ ಅವರು ಮಲೆನಾಡಿನಲ್ಲಿ ಸಿಗುತ್ತಿರುವ ನಾಟವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ನಮ್ಮ ತಾಲ್ಲೂಕು ಡೆವೆಲಪ್‌ಮೆಂಟ್ ಬೋರ್ಡು ಮೂಲಕ ಹರಿಜನರಿಗೆ ಎತ್ತುಗಳನ್ನು ಉಚಿತವಾಗಿ ಕೊಡುವುದಕ್ಕೆ ಮಂಜೂರು ಮಾಡಿದ್ದಾರೆ. ಇಲ್ಲಿ ಎಷ್ಟೋ ಎತ್ತುಗಳನ್ನು ಕೊಡುವ ಸಮಾರಂಭಗಳು ನಡೆದಿವೆ. ಶಿಕಾರಿಪುರದಲ್ಲೂ ಕೂಡ ನಡೆದಿವೆ. ಶಿಕಾರಿಪುರದಲ್ಲಿ, ಒಬ್ಬರು ಎತ್ತಿಗೆ ಅರ್ಜಿ ಹಾಕಿದಾಗ, ಅವರು ಹರಿಜನ ಎಂದು ಒಂದು ಸರ್ಟಿಫಿಕೇಟು ಕೊಡಬೇಕಾಗುತ್ತದೆ. ಸಂಬಂಧಪಟ್ಟ ತಾಲ್ಲೂಕು ಬೋರ್ಡು ಅಧಿಕಾರಿಗಳು, ಇಲ್ಲವೇ ಆ ಕ್ಷೇತ್ರದ ಎಂ.ಎಲ್.ಎ.ಗಳು ಕೊಡಬೇಕಾಗುತ್ತದೆ. ಇಲ್ಲಿ ಒಬ್ಬ ಹರಿಜನ

ಅಲ್ಲದಿರತಕ್ಕವನು ಒಬ್ಬ ಕಾಂಗ್ರೆಸ್ ಮುಖಂಡರ ಸರ್ಟಿಫಿಕೇಟು ಪಡೆದು ಅರ್ಜಿ ಹಾಕಿದನು, ಅಲ್ಲಿಯ ಸೋಶಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್ ಹಿಡಿದುಬಿಟ್ಟು ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ತಿಳಿಸಿದರೂ ಇದುವರೆಗೆ ಏನೂ ಕ್ರಮ ಅವರು ತೆಗೆದುಕೊಂಡಿಲ್ಲ. ಈ ಸರ್ಟಿಫಿಕೇಟು ಅಧಿಕಾರಿಗಳ ಕೈಯಲ್ಲಿ ಇದೆ. ಇದು ನನ್ನ ಗಮನಕ್ಕೆ ಬಂದಿರುವುದರಿಂದ ಇಲ್ಲಿ ಇದನ್ನು ಹೇಳುತ್ತಿದ್ದೇನೆ. ಇದರಿಂದ ಹರಿಜನರಲ್ಲದ ಜನರು, ಹರಿಜನರಿಗೆ ಸಿಗುತ್ತಿದ್ದ ಸೌಲಭ್ಯಗಳನ್ನು ಪಡೆಯಲು ಪ್ರಯತ್ನ ಮಾಡುತ್ತಾರೆ ಮತ್ತು ಅದಕ್ಕೆ ಸರ್ಕಾರಿ ಪಕ್ಷದ ಜನ ಎಷ್ಟುಮಟ್ಟಿಗೆ ಕೈಹಾಕುತ್ತಿದ್ದಾರೆ ಎಂಬ ವಿಷಯವನ್ನು ಯೋಚನೆ ಮಾಡಬೇಕು.

3-30 P.M.

ಇನ್ನು ವಿದ್ಯಾಭ್ಯಾಸದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಸರ್ಕಾರದ ನಿಯಮವಿದೆ. ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ಮತ್ತು ಮೆಡಿಕಲ್ ಕಾಲೇಜ್‌ಗಳಲ್ಲಿ ಈ ಜಾತಿಯವರಿಗೆ ಇಷ್ಟು ಭಾಗಗಳನ್ನು ಕೊಡಬೇಕೆಂದು ಸರ್ಕಾರದ ನಿಯಮ ಮೊದಲಿನಿಂದಲೂ ಇದ್ದರೂ, ಈಗ ಮೆರಿಟ್ ಮೇಲೆ ಹೆಚ್ಚು ಸೀಟ್‌ಗಳನ್ನು ಕೊಡುತ್ತಿದ್ದಾರೆ. ಇದರಿಂದ ಹಳ್ಳಿಗಳಲ್ಲಿರುವ ಹರಿಜನರು ಮತ್ತು ಗಿರಿಜನರು ಈ ಜಾತಿಗೆ ಸಂಬಂಧಪಟ್ಟ ಇತರ ಜಾತಿಗಳವರಿಗೆ ಅವಕಾಶವೇ ಇಲ್ಲ. ಅವರಿಗೆ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಸರ್ಕಾರದವರು ಏರ್ಪಡಿಸಿಲ್ಲ. ಇದರಿಂದ ಅವರು ಹೆಚ್ಚು ಅಂಕಗಳನ್ನು ತೆಗೆಯುವುದಕ್ಕಾಗುತ್ತಿಲ್ಲ. ಇವತ್ತು ಪಟ್ಟಣಗಳಲ್ಲಿರುವವರಿಗೆ ಏನು ಒಂದು ಸೌಲಭ್ಯಗಳನ್ನು ಕೊಡುತ್ತೀರೋ, ಅದರಂತೆ ಹಳ್ಳಿಗಳಲ್ಲಿರುವ ಇವರಿಗೂ ಒದಗಿಸಿದರೆ, 100ಕ್ಕೆ 80 ಅಂಕಗಳನ್ನು ತೆಗೆಯುತ್ತಾರೆ. ಒಂದು ಕಡೆ ಈ ಜಾತಿಯವರಿಗೆ ಸೀಟ್‌ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ, ಮತ್ತೊಂದು ಕಡೆ ಇವರಿಗೆ ಸರಿಯಾದ ವಿದ್ಯಾ ಸೌಕರ್ಯವನ್ನು ಕೊಡದಿರುವುದರಿಂದ ಇವರು ಇಂಜನಿಯರಿಂಗ್ ಕಾಲೇಜುಗಳಿಗೆ, ಮೆಡಿಕಲ್ ಕಾಲೇಜುಗಳಿಗೆ ಮತ್ತು ಇತರ ತಾಂತ್ರಿಕ ಕಾಲೇಜುಗಳಿಗೆ ಹೆಚ್ಚಾಗಿ ಸೇರಲು ಅವಕಾಶವಾಗುತ್ತಿಲ್ಲ. ಇದಕ್ಕೆಲ್ಲಾ ಸರ್ಕಾರದ ನೀತಿಯೇ ಕಾರಣವಾಗಿದೆ. ಹಿಂದುಳಿದ ಜನಾಂಗ ಮುಂದುವರೆಯಬೇಕಾದರೆ ಇನ್ನು ಮುಂದೆ ಇವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಇಷ್ಟು ಹೇಳಿ ಸಭಾಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಸುಮಾರು ಎರಡು ಕೋಟಿ 98 ಲಕ್ಷ 65 ಸಾವಿರ ರೂಪಾಯಿಗಳು ಅಂದರೆ 3 ಕೋಟಿ ರೂಪಾಯಿಗಳಿಗೆ ಹತ್ತಿರವಿದೆಯೆಂದು ಹೇಳಬಹುದು. ಇದು ಈ ದಿವಸ ನಮ್ಮ ಮುಂದೆ ಪರಿಶೀಲನೆಗೆ ಇದೆ. ಹಾಗೂ ಇದರ ಬಗ್ಗೆ ಈಗಾಗಲೇ ಅನೇಕ ಅಭಿಪ್ರಾಯಗಳನ್ನು ಈ ಸಭೆಯ ಮುಂದೆ ವಿರೋಧ ಪಕ್ಷದ ನಮ್ಮ ಸ್ನೇಹಿತರು ಮತ್ತು ಕಾಂಗ್ರೆಸ್ ಪಕ್ಷದ ನಮ್ಮ ಸ್ನೇಹಿತರು ಇಟ್ಟಿದ್ದಾರೆ. ಈ ಸಮಾಜ ಕಲ್ಯಾಣ ಉದ್ದೇಶ ರಾಜ್ಯಾಂಗ ರಚನೆಯ ಕಾಲದಲ್ಲಿ ಏನು ಇತ್ತು, ಆ ಉದ್ದೇಶದ ಮತ್ತು ಅದಕ್ಕೆ ಸಂಬಂಧಪಟ್ಟ ಗುರಿಯ ಸಾಧ್ಯತೆಯ ಬಗ್ಗೆ ರಾಜ್ಯಾಂಗ ಹಾಗೂ ಆಗಿದ್ದ ಸರ್ಕಾರಗಳು ಏನು ಈ ಸೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಇವುಗಳ ಉದ್ಧಾರದ ಬಗ್ಗೆ ಒಂದು ಷೆಡ್ಯೂಲ್ ಇಟ್ಟುಕೊಂಡಿದ್ದರು, ಅದು ತಪ್ಪಿಹೋಗಿದೆ. ಎಷ್ಟು ಬೇಗನೆ ಇದನ್ನು ಯಾವ ಸ್ಥಿತಿಗೆ ತರಬೇಕೆಂಬ ಉದ್ದೇಶವಿತ್ತೋ ಅಂತಹ ಒಂದು ಪ್ರಗತಿ ಸಾಧ್ಯವಾಗಲಿಲ್ಲವೆನ್ನುವುದನ್ನು ಪ್ರಾಯಶಃ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೂ ಈಗ ಅನೇಕ ಬದಲಾವಣೆಗಳಾಗಿವೆ; ಹಾಗೂ ನಮ್ಮ ವರ್ಗದ ಮತ್ತು ಇತರ ಪರಿಶಿಷ್ಟ ಜಾತಿಗಳ ಪರಿಸ್ಥಿತಿ ರಾಜ್ಯಾಂಗ ರಚನೆ ಕಾಲದಲ್ಲಿ ಏನಿತ್ತೋ ಅದೇ ರೀತಿ ಈಗಿಲ್ಲ. ಬೇಕಾದಷ್ಟು ಮಾರ್ಪಾಟಾಗಿದೆ. ಆದರೆ ಸಮಾಜ ಕಲ್ಯಾಣದ ಬಗ್ಗೆ ದಿವಸ ದಿವಸಕ್ಕೆ ಹೆಚ್ಚಿನ ಆಸಕ್ತಿಯ ಬದಲು ಹೋಗುತ್ತಾ ಹೋಗುತ್ತಾ ಉದಾಸೀನ ಭಾವನೆ ಜಾಸ್ತಿಯಾಗುತ್ತಿದೆಯೇನೋ ಎನ್ನುವುದಕ್ಕೆ ಅನೇಕ ಕಾರಣಗಳಿವೆ. ಪ್ರಾಯಶಃ ಸರ್ಕಾರದವರೂ ಕೂಡ ಈ ಸಮಾಜ ಕಲ್ಯಾಣ ಶಾಖೆ ಬಹಳ ಲಘುವಾದ ಶಾಖೆಯೆಂದು ಭಾವನೆ ಇಟ್ಟುಕೊಂಡಿರುವಂತೆ ಕಾಣುತ್ತದೆ. ಆದರೆ ಇದರಲ್ಲಿ ಅಡಕವಾಗಿರುವ ಗುರುತರವಾದ ಜವಾಬ್ದಾರಿಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡರೆ ಈ ಬಗ್ಗೆ ಒಟ್ಟಿನಲ್ಲಿ ಕೊಡುತ್ತಿರುವ ಗಮನ ಸಾಲದೆಂದು ನನ್ನ ಅಭಿಪ್ರಾಯ. ಇವತ್ತು ಯಾರು ಸಮಾಜದಲ್ಲಿ ಬಲಹೀನ ಸ್ಥಿತಿಯಲ್ಲಿ ಇದ್ದಾರೆ, ಯಾರು ಇವತ್ತು ಬೇರೆಯವರೊಡನೆ ಪೈಪೋಟಿ ಮಾಡಿ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದಾರೆ ಅಂಥವರಿಗೆ ರಕ್ಷಣೆ ಕೊಡಬೇಕೆನ್ನುವುದು ಸರ್ಕಾರದ ಒಂದು ಉದ್ದೇಶ. ಆದರೆ ಇಂದು ಅಲ್ಲ, ನಾಳೆ ಅಂದರೆ ಅವರ ಮಕ್ಕಳು ಅಥವಾ ಮೊಮ್ಮಕ್ಕಳ ಕಾಲಕ್ಕಾದರೂ ಅವರು ಸಮಾಜದ ಬೇರೆ ಯಾವ ಭಾಗದ ಜನರೊಡನೆಯಾದರೂ ಪೈಪೋಟಿ ಮಾಡಿ ಜೀವನ ನಡೆಸುವುದಕ್ಕೆ ಸಮರ್ಥರನ್ನಾಗಿಸುವುದು ಮುಖ್ಯವಾದ ಗುರಿ... ಇವರಿಗೆ ರಕ್ಷಣೆ ಕೊಡ

(ಶ್ರೀ ಕೆ. ಎಚ್. ಶ್ರೀನಿವಾಸ್)

ಬೇಕು, ಅನುಕೂಲಗಳನ್ನು ಮಾಡಿಕೊಡಬೇಕೆನ್ನುವ ಉದ್ದೇಶದಿಂದ ಅನೇಕ ಸಂಘ ಸಂಸ್ಥೆಗಳನ್ನು ತೆರೆದಾಗ, ಈ ಉದ್ದೇಶದ ಬಗ್ಗೆ ಎಷ್ಟು ಗಮನ ಕೊಡಬೇಕಾಗಿತ್ತೋ, ಅಷ್ಟು ಗಮನ ಇವತ್ತು ಕೊಡುತ್ತಿಲ್ಲ. ಅನೇಕ ಸಾರಿ ಅವರಲ್ಲಿ ಏನು ಒಂದು ಜವಾಬ್ದಾರಿ ಭಾವನೆ ಉಂಟುಮಾಡಬೇಕಾಗಿತ್ತೋ ಅದನ್ನು ಉಂಟುಮಾಡುವುದಕ್ಕೆ ಸಾಕಷ್ಟು ಪ್ರಯತ್ನ ನಡೆಯಿಲ್ಲವೆಂದು ಹೇಳುತ್ತೇನೆ. ಇವತ್ತು ಇಡೀ ದೇಶವನ್ನು ಬಾಧಿಸುತ್ತಿರುವುದು ಜನಸಂಖ್ಯೆಯ ಹೆಚ್ಚಳದ ಪ್ರಶ್ನೆ. ಈ ಜಾತಿಯವರ ಸಂಖ್ಯೆಯೂ ದಿನೇ ದಿನೇ ಬೆಳೆಯುತ್ತಿದೆ. ಈ ಜನಸಂಖ್ಯೆಯ ಹೆಚ್ಚಳದಿಂದಾಗಿ ಸರ್ಕಾರದವರು ಮಾಡುವ ಅಭಿವೃದ್ಧಿ ಕಾರ್ಯಗಳು ಸಾಕಾಗದಂತಾಗಿವೆ. ಇವರಲ್ಲಿ ಈ ಬಗ್ಗೆ ಸಾಕಷ್ಟು ಪ್ರಜ್ಞೆಯನ್ನು ಮೂಡಿಸಲು ಯಾವ ರೀತಿಯ ಕಾರ್ಯಗಳು ನಡೆದಿವೆಯೆಂದು ನೋಡಿದರೆ ಏನೂ ನಡೆದಂತಿಲ್ಲ. ಅವರಿಗೆ ಎಷ್ಟು ಮಕ್ಕಳಾದರೂ, ಆ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ಹೊರಬೇಕು. ಇದೇ ರೀತಿ ಮುಂದುವರೆದರೆ, ಇವರ ಎಲ್ಲಾ ಜವಾಬ್ದಾರಿಯೂ ಸರ್ಕಾರದ್ದೇ ಎನ್ನುವುದಾದರೆ ಪ್ರಾಯಶಃ ಇಡೀ ಸರ್ಕಾರದ ಶಕ್ತಿಯನ್ನು ಉಪಯೋಗಿಸಿದರೂ ಅವರ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ರಕ್ಷಣೆ ಕೊಡಬೇಕಾದರೆ, ಅವರ ಕಲ್ಯಾಣ ಸಾಧನೆ ಮಾಡುವಂಥ ಯೋಜನೆಗಳನ್ನು ಮಾಡಬೇಕಾದರೆ, ಆ ಮೂಲಕ ಅವರ ಜವಾಬ್ದಾರಿಯನ್ನು ಅವರೇ ಮುಂದೆ ಕಲ್ಪಿಸಿಕೊಳ್ಳುವಂತೆ ಅದಕ್ಕೆ ಬೇಕಾದ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಸ್ಪೃಶ್ಯತೆ ಬಗ್ಗೆ ಸಂವಿಧಾನದಲ್ಲಿ, ಕಾನೂನಿನಲ್ಲಿ ಅದನ್ನು ತೊಡೆದು ಹಾಕಿದ್ದಾರೆ. ಸವರ್ಣೀಯರ ಅಸ್ಪೃಶ್ಯತೆ ಇರಲಿ, ಅವರಲ್ಲಿಯ ಒಳ ಗುಂಪು, ಒಳ ಜಾತಿ ಏನಿವೆ ಅದೂ ಕೂಡ ಇನ್ನೂ ಹೋಗಿಲ್ಲ. 1947ರಲ್ಲಿ ಈ ಬಗ್ಗೆ ಎಷ್ಟು ಇತ್ತೋ ಅಷ್ಟೆ ಇವತ್ತಿಗೂ ಕೂಡ ಇದೆಯೆಂಬುದನ್ನು ಅನುಭವದಿಂದ ಕಂಡುಕೊಳ್ಳಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಶಾಲೆಗಳಲ್ಲಿ ನಿಮ್ನ ವರ್ಗಕ್ಕೆ ಸೇರಿರುವ ಹುಡುಗರನ್ನು ಬೇರೆ ಹಲಗೆಗಳ ಮೇಲೆ ಕೂರಿಸುತ್ತಾರೆ. ಅನೇಕರು ನೋಡಿರಬಹುದು. ನಾವು ಅದನ್ನು ನೋಡಿಕೊಂಡು ಸುಮ್ಮನೆ ಬರಬೇಕಾಗಿದೆ. ಅಸ್ಪೃಶ್ಯತೆಯ ನಿವಾರಣೆ ಬಗ್ಗೆ ವಿಶೇಷವಾಗಿ ಗಮನ ಕೊಡಬೇಕು. ಈ ಜಾತಿಯ ಹುಡುಗರ ಮಾನಸಿಕ ಪರಿವರ್ತನೆಯಾಗುವುದಕ್ಕೆ ಇದು ಪ್ರಥಮ ಹೆಜ್ಜೆಯಾಗಿರುವುದರಿಂದ, ಇದರ ಬಗ್ಗೆ ಇರುವ ಕಾನೂನನ್ನು ಬಿಗಿಪಡಿಸಬೇಕು. ಆದಷ್ಟು ಬೇಗ ಇದನ್ನು ಸಂಪೂರ್ಣವಾಗಿ ತೊಡೆದುಹಾಕುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಾನನಿರೋಧದ ಬಗ್ಗೆ ಹೇಳುವುದಾದರೆ, ಇದು ಒಂದು ವಿವಾದಾತ್ಮಕವಾದ ಪ್ರಸಂಗವೆಂದು ಈಗಾಗಲೇ ಈ ಸಭೆಯ ಮುಂದೆ ಹೇಳಿದ್ದಾರೆ. ಕೆಲವರು ಪಾನನಿರೋಧವನ್ನು ಜಾರಿಗೆ ತಂದಿದ್ದರಿಂದಲೇ ಈ ನಿಮ್ನವರ್ಗದವರ ಸ್ಥಿತಿ ಉತ್ತಮವಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನೂ ಕೆಲವರು ಅದರಿಂದ ದುರಾಚಾರಗಳು ಜಾಸ್ತಿಯಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅನೇಕ ರೀತಿಯ ದೇಶೀಯ ಅಥವಾ ವಿದೇಶದ ಪಾನಗಳನ್ನು ಕುಡಿಯುವುದಕ್ಕೆ ಇವರಿಗೆ ಶಕ್ತಿಯಿಲ್ಲದೆ ಕಳ್ಳಭಟ್ಟಿ ಇಳಿಸಿ ಕುಡಿದು ಪೋಲೀಸ್ ಇಲಾಖೆಯವರ ಕೈಗೆ ಸಿಕ್ಕಿ ನರಳುತ್ತಿದ್ದಾರೆಂದು ಕೆಲವರು ಹೇಳುತ್ತಾರೆ. ಸರಿಯಾಗಿ ನೋಡಿದರೆ ಪಾನನಿರೋಧ ನೀತಿಯಿಂದ ಬಹಳ ಹೆಚ್ಚಿನ ಸಹಾಯವಾಗಿದೆ ಎನಿಸುವುದಿಲ್ಲ. ಈ ನೀತಿಯಿಂದ ಅನೇಕ ಅನ್ಯಾಯಗಳು ನಡೆಯುತ್ತಿರುವುದನ್ನು ನಾವು ದಿನವೂ ಕಾಣುತ್ತಿದ್ದೇವೆ. ಈ ಬಗ್ಗೆ ನನ್ನ ಅಭಿಪ್ರಾಯ ಬೇರೆ ಇರಬಹುದು, ಬೇರೆ ಒಬ್ಬ ಸದಸ್ಯರ ಅಭಿಪ್ರಾಯ ಮತ್ತೊಂದು ರೀತಿ ಇರಬಹುದು. ಆದರೆ ಈ ಪಾನನಿರೋಧದ ನೀತಿಯನ್ನು ಆಗಿಂದಾಗ್ಗೆ ಬೇರೆ ಬೇರೆ ರೀತಿಯಲ್ಲಿ ಬದಲಾಯಿಸುವುದರಿಂದ, ಇವತ್ತು ಕುಡಿಯುವುದಕ್ಕೆ ಇದೆ, ನಾಳೆ ಇಲ್ಲ, ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕುಡಿಯಬಹುದು, ನಾಳೆ ದಿವಸ ಕುಡಿಯಲಿಕ್ಕೆ ಇಲ್ಲ ಅಂತ ಮಾಡಿದರೆ ಪ್ರಾಯಶಃ ಬೇರೆ ವರ್ಗದ ಜನರಿಗೆ ಅನ್ಯಾಯವಾಗಲಿಕ್ಕೆ ಇಲ್ಲ, ಸಾಗರದಲ್ಲಿ ಒಬ್ಬ ಶ್ರೀಮಂತ ಇದ್ದರೆ ಸಾಗರದಲ್ಲಿ ಕುಡಿಯಲಿಕ್ಕೆ ಆಗುವುದಿಲ್ಲ ಎಂದರೆ ಬೆಂಗಳೂರಿಗೆ ಬಂದು ಕುಡಿಯಬಹುದು, ಆದರೆ ಈ ರೀತಿ ಕಾನೂನು ಬದಲಾವಣೆ ಪದೇ ಪದೇ ಆದ ಪಕ್ಷದಲ್ಲಿ ಬಲಹೀನ ಜನ ಯಾರಿದ್ದಾರೆ ಅವರ ಜೀವನದೊಡನೆ ಚೆಲ್ಲಾಟ ಆಡಿದ ಸ್ಥಿತಿಯಾಗುವುದರಿಂದ ಪಾನನಿರೋಧದ ಪದ್ಧತಿಯಲ್ಲಿ ಅಂತಿಮ ತೀರ್ಮಾನವನ್ನು ಕೈಕೊಳ್ಳಬೇಕಾದರೆ ಆ ಪದ್ಧತಿಯನ್ನು ಕೈಬಿಡಬೇಕೆಂಬ ತೀರ್ಮಾನವನ್ನು ಕೈಕೊಳ್ಳಬೇಕಾದರೆ ಅದರಿಂದ ಈ ಬಲಹೀನ ಜನರ ಮೇಲೆ ಏನು ಪರಿಣಾಮ ಆಗಿದೆ ಅಥವಾ ಆಗಿಲ್ಲ ಎಂಬುದನ್ನು ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡಬೇಕಾದ್ದು ಮತ್ತು ಆ ನೀತಿಯನ್ನು ಕೈ ಬಿಡಬೇಕಾದ ಪಕ್ಷದಲ್ಲಿ ಅಥವಾ ಉಳಿಸಿಕೊಳ್ಳಬೇಕಾದ ಪಕ್ಷದಲ್ಲಿ ಇಡೀ ಈ ಒಂದು ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅವಶ್ಯಕ. ಕೊನೆ ಪಕ್ಷ 20—25 ವರ್ಷ ಅದು ಇನ್ನು ಯಾವ ರೀತಿ

ಯಲ್ಲೂ ಬದಲಾವಣೆಯಾಗದಂತಹ ರೀತಿಯಲ್ಲಿ ಅದನ್ನು ಜಾರಿಗೆ ತರಬೇಕಾದ್ದು ಅವಶ್ಯಕ, ಹಾಗೆ ಇಲ್ಲದೇ ಇದ್ದ ಪಕ್ಷದಲ್ಲಿ ಜನತೆಯು ಪ್ರತಿನಿಧಿಗಳು ಮತ್ತು ಸರ್ಕಾರ ಸಾಮಾನ್ಯ ಜನರ ಜೀವದೊಡನೆ ಆಟವಾಡಿದಂತಾಗಬಹುದು ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ಜಾತೀಯ ಹಾಸ್ಟೆಲುಗಳು ಇವತ್ತಿಗೂ ಕೂಡ ಮುಂದುವರಿಯುತ್ತಾ ಇವೆ. ಇವನ್ನು ಆದಷ್ಟು ಬೇಗನೆ ರದ್ದುಪಡಿಸಬೇಕು. ಮತ್ತು ಜನರಲ್ ಹಾಸ್ಟೆಲುಗಳನ್ನು ಹೆಚ್ಚು ಮಾಡತಕ್ಕ ಒಂದು ನೀತಿಯನ್ನು ಸರ್ಕಾರದವರು ಮಾಡಬೇಕು. ಈಗ ಮೊದಲಿನಕ್ಕಿಂತಲೂ ಬಿಗಿಯಾದ ರೀತಿಯಲ್ಲಿ ಈ ಧೋರಣೆಯನ್ನು ಅನುಸರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸಮಾಜ ಕಲ್ಯಾಣ ಶಾಖೆಯಲ್ಲಿನ ಅನೇಕ ಹುದ್ದೆಗಳಿಗೆ ಕೇವಲ ಷಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಜನರನ್ನೇ ನೇಮಕ ಮಾಡುವುದರಿಂದ ಅವರಲ್ಲಿ ಯೋಗ್ಯತೆ ಇರಲಿ, ಇಲ್ಲದೇ ಇರಲಿ, ಪ್ರಾಮಾಣಿಕತೆ ಇರಲಿ ಇಲ್ಲದೇ ಇರಲಿ—ಆ ಜನರ ಸುಖಸಾಧನೆಯಾಗುತ್ತದೆ ಎಂಬ ಭಾವನೆ ಸರ್ಕಾರದಲ್ಲಿದೆ ಎಂದು ಕಾಣುತ್ತದೆ. ನನಗೆ ತಿಳಿದ ಹಾಗೆ ಅದಕ್ಕೆ ತದ್ವಿರುದ್ಧವಾಗಿ, ಒಬ್ಬ ಇನ್‌ಸ್ಪೆಕ್ಟರು ಹರಿಜನರನ್ನು ನೇಮಕ ಮಾಡಿದರೆ ಅವರು ದುಡ್ಡು ತಿನ್ನದೇ, ಯಾವ ಕೆಲಸವನ್ನೂ ಮಾಡದೇ ಇರತಕ್ಕ ಪರಿಸ್ಥಿತಿ ಅನೇಕ ಕಡೆಗಳಲ್ಲಿ ಕಂಡುಬರುತ್ತದೆ. ಅವರಿಗೆ ಇರತಕ್ಕ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದು ಕಂಡುಬರುತ್ತಾ ಇದೆ. ಆದ್ದರಿಂದ ಪ್ರಾಮಾಣಿಕತೆ ಇರತಕ್ಕ ಮತ್ತು ಯೋಗ್ಯ ಅಧಿಕಾರಿಗಳನ್ನು ನೇಮಿಸಬೇಕೇ ಹೊರತು ಜಾತಿಯನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ನೇಮಿಸಬಾರದು ಎಂದು ಹೇಳುತ್ತೇನೆ. ಆದ್ದರಿಂದ ಹರಿಜನ ಗಿರಿಜನರು, ಹಿಂದುಳಿದಿರುವುದಕ್ಕೆ ಸರಕಾರದ ಕಾರ್ಯಕ್ರಮದಲ್ಲಿರತಕ್ಕ ಲೋಪದೋಷಗಳೇ ಎಷ್ಟು ಕಾರಣವಾಗಿರಬಹುದೊ, ಅಷ್ಟೇ ಅವರೂ ಸ್ವತಃ ಕಾರಣರಾಗಿದ್ದಾರೆ ಎಂಬ ಪ್ರಜ್ಞೆ, ಭಾವನೆಯನ್ನು ಕೂಡ ಅವರಲ್ಲಿ ಉಂಟುಮಾಡಬೇಕಾದ್ದು ಅವಶ್ಯಕ. ಶ್ರೀಮಾನ್ ಜಯಪ್ರಕಾಶ ನಾರಾಯಣ್‌ರವರು ಹಾಗೂ ಬಂಗಾರಪ್ಪನವರು ಚಳವಳಿ ಅನಿವಾರ್ಯವಾಗಬಹುದು ಎಂದು ಹೇಳಿದರು. ಹರಿಜನ ಗಿರಿಜನರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು, ತಮ್ಮ ಉದ್ಧಾರವನ್ನು ತಾವೇ ಮಾಡಿಕೊಳ್ಳಬೇಕೆಂಬ ಭಾವನೆಯನ್ನು ಅವರಲ್ಲಿ ಉಂಟುಮಾಡುವ ದೃಷ್ಟಿಯಿಂದ ಸರ್ಕಾರದ ಸಹಾಯ ಎಷ್ಟು ಪಡೆಯುತ್ತಾರೆ ಅದಕ್ಕಿಂತ ಹತ್ತರಷ್ಟು ಹೆಚ್ಚು ಅಭಿವೃದ್ಧಿ ಸಾಧಿಸುವಂಥಾ ಒಂದು ಉತ್ಸಾಹ ಉಂಟುಮಾಡುವ ಚಳುವಳಿಯನ್ನು ಸಂಘಟಿಸಬೇಕು, ಕೇವಲ ಶ್ರೀಮಾನ್ ನಿಜಲಿಂಗಪ್ಪನವರನ್ನು ಭಯಪಡಿಸುವುದಕ್ಕಾಗಲಿ ಅಥವಾ 1972ರ ಚುನಾವಣೆಯ ಬಗ್ಗೆ ಆಶ್ವಾಸನೆ ಕೊಡುವುದಕ್ಕಾಗಲಿ, ಚಳುವಳಿಯನ್ನು ಮಾಡುವುದರಿಂದಾಗಲಿ ಸಹಾಯವಾಗುವುದಿಲ್ಲ ಎಂದು ಪ್ರಾರ್ಥನೆ ಮಾಡಿಕೊಂಡು ಈ ಡಿಮ್ಯಾಂಡುಗಳನ್ನು ಒಪ್ಪಿಕೊಳ್ಳಬಹುದು, ಹಾಗೂ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಕೇಳಿರುವಂತಹ ವಿವಿಧ ಅಭಿಪ್ರಾಯಕ್ಕೆ ವಿಶೇಷವಾದಂತಹ ಗಮನವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬೆಳ್ಳೊಳ್ಳಿ).—ಮಾನ್ಯ ಸಭಾಪತಿಗಳೇ, ಈ ದಿವಸ ಸಾಮಾಜಿಕ ಮತ್ತು ಅಭಿವೃದ್ಧಿ ಸಂಸ್ಥೆಗಳ ಬೇಡಿಕೆ ಮೇಲೆ ನಾನು ಮಾತನಾಡುತ್ತಾ ಒಂದೆರಡು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಮುಖ್ಯವಾಗಿ ಹರಿಜನರ ಏಳಿಗಾಗಿ, ಅವರ ಉದ್ಧಾರಕ್ಕಾಗಿ ಮೈಸೂರು ಸರ್ಕಾರದವರು ಅನೇಕ ರೀತಿಯಿಂದ ಪ್ರಯತ್ನ ಮಾಡುತ್ತಾ ಇದ್ದಾರೆ, ಮಾಡುತ್ತಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ನಿಜವಾಗಿಯೂ ನಾನು 40 ಲಕ್ಷ ಇರತಕ್ಕ ಹರಿಜನ ಬಾಂಧವರ ಮತ್ತು ಹಿಂದುಳಿದವರ ಪರವಾಗಿ ಸರ್ಕಾರದವರಿಗೆ ತುಂಬಾ ಋಣಿಯಾಗಿದ್ದೇನೆ. ಸರ್ಕಾರದವರು ಏನು ಸೌಲತ್ತು ಕೊಡುತ್ತಾ ಇದ್ದಾರೋ ಅದರಿಂದಲೇ ಹರಿಜನರ ಉದ್ಧಾರವಾದೀತು ಅಥವಾ ಹಿಂದುಳಿದವರ ಉದ್ಧಾರವಾದೀತು ಎನ್ನುವುದು ಉಚಿತವಲ್ಲ; ಈಗ ಸರ್ಕಾರದವರು ಕೊಡುವಂತಹ ಸವಲತ್ತುಗಳು ನಿಜವಾಗಿಯೂ ಕೇವಲ ಒಂದು ಎಳೆ ಅಥವಾ ಕೂದಲಷ್ಟು ಹೊರತು ಅದಕ್ಕಿಂತ ಹೆಚ್ಚಲ್ಲ ಎಂಬುದನ್ನು ನಾನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಎಂದರೆ ಇವತ್ತು ನೂರರೊಳಗೆ ಕೇವಲ ಹತ್ತು ಪರ್ಸೆಂಟ್‌ನಷ್ಟು ಸೌಲತ್ತುಗಳನ್ನು ಸರ್ಕಾರದವರು ಅವರಿಗೆ ಕೊಟ್ಟಿದ್ದಾರೆ. ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತಾ ಇದ್ದೇನೆ. ಇದಕ್ಕೆ ಕಾರಣ ಇಷ್ಟೆ. ಈ ಹರಿಜನರ ಮೇಲೆ ಅಥವಾ ಹಿಂದುಳಿದವರ ಮೇಲೆ ಆಗಿರತಕ್ಕ ಅನ್ಯಾಯ ಇಷ್ಟು ಅಖಂಡವಾಗಿದೆ. ಇಡೀ ಭಾರತವನ್ನೇ ಸುತ್ತಿ ಹಾಕಿದರೂ ಕೂಡ ಎಲ್ಲಿ ಹೋದರೂ ಕಾಲಿಡಲಿಕ್ಕೆ ಅವರಿಗೆ ಪವಿತ್ರವಾದ ಜಾಗ ಇಲ್ಲ. ಅಂತಹ ರೀತಿಯಲ್ಲಿ ಅವರನ್ನು ಅನ್‌ಟಚೆಬಲ್ ಅಥವಾ ಅಸ್ಪೃಶ್ಯರು ಅಂತ ಹೇಳಿ ಮತ್ತು ಆ ಭಾವನೆ ಮಾಡಿ ಹಿಂದೂ ಸಮಾಜ ಅವರನ್ನು ತುಳಿದುಹಾಕಿದೆ. ಇದರ ಸಲುವಾಗಿ ಕೇವಲ ಅವರಲ್ಲಿ ತಿಳುವಳಿಕೆಯುಂಟಾಗಿ ಅವರೇ ಹರಿಜನರೇ ಮುಂದೆ ಬರಬೇಕು ಎಂದು ಅನ್ನುವಂತಹ ದೃಷ್ಟಿ

(ಶ್ರೀ ಎಸ್. ಎಸ್. ಅರಕೇರಿ)

ಸರಿಯಾಗಲಾರದು, ಇದು ನಮ್ಮ ಸವರ್ಣೀಯರ ಕರ್ತವ್ಯ ಎಂಬ ದೃಷ್ಟಿಯಿಂದ ಈ ಒಂದು ಸಮಸ್ಯೆಯನ್ನು ಇವತ್ತಿನ ದಿವಸ ನಾವು ನೋಡಬೇಕಾಗಿದೆ. ಈಗ ಅನೇಕ ಸಂಸ್ಥೆಗಳನ್ನು ಸರ್ಕಾರದವರು ಸ್ಥಾಪನೆ ಮಾಡಿದರೂ ಕೂಡ ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರನ್ನು ಮುಟ್ಟಬೇಡಿ ಅನ್ನುವ ಸಮಸ್ಯೆ ಸಮಸ್ಯೆಯಾಗಿಯೇ ಉಳಿದಿದೆ. ಈ ಜಾತಿಯ ಸಮಸ್ಯೆ ಬಹಳ ಉಗ್ರವಾಗಿ, ಭೀಕರವಾಗಿದೆ. ಮುಖ್ಯವಾಗಿ ನಾನು ಸರ್ಕಾರದವರಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ. ಅದೇನೆಂದರೆ, ಅವರ ಏಳಿಗೆಗಾಗಿ ಅವರಲ್ಲೇ ಸ್ವಾಭಿಮಾನವನ್ನು ನಿರ್ಮಾಣ ಮಾಡುವಂತಹ ಒಂದು ಕೆಲಸವನ್ನು ಮೊದಲು ಮಾಡಬೇಕು, ಅವರಲ್ಲಿ ಹೃದಯ ಪರಿವರ್ತನೆಯಾಗಿ, ಅವರಲ್ಲಿ ಸ್ವಾಭಿಮಾನ ಹುಟ್ಟಿದ ಹೊರತು ಹರಿಜನರ ಉದ್ಧಾರವಾಗಲಿಕ್ಕಿಲ್ಲ. ಹರಿಜನರ ಸಲುವಾಗಿ, ಹರಿಜನರಲ್ಲಿ ಸ್ವಾಭಿಮಾನ ಅವರ ಹೃದಯಾಂತರಾಳದಿಂದ ಮೂಡುವಂತಾದ ಹೊರತು, ಅವರಲ್ಲಿ ಜಾಗೃತಿಯುಂಟಾದ ಹೊರತು ಅವರ ಉದ್ಧಾರವಾಗುವುದಿಲ್ಲ, ಅವರು ಮುಂದುಬರುವುದಿಲ್ಲ. ಡಾ॥ ಅಂಬೇಡಕರರು ಈ ರೀತಿ ಹೇಳಿದ್ದಾರೆ. "self-respect and slavery cannot co-exsist" ಗುಲಾಮನಿಗೆ ಗುಲಾಮಗಿರಿಯೇ ಇದೇ ಅಂತಾ ಹೇಳುತ್ತಾ ಹೋದಂತೆಲ್ಲಾ ಅವನಲ್ಲಿ ಜಾಗೃತಿ ನಿರ್ಮಾಣವಾಗುತ್ತದೆ. ಸ್ವಾಭಿಮಾನ, ಜಾಗೃತಿ ನಿರ್ಮಾಣವಾದ ಹೊರತು ಗುಲಾಮಗಿರಿ, ಗುಲಾಮತನ ಹೋಗುವುದಿಲ್ಲ. ಅದರ ಸಲುವಾಗಿ ಫ್ರಾನ್ಸ್‌ದೇಶದ ಒಬ್ಬ ಕ್ರಾಂತಿಕಾರ Tueydedes ಎಂಬ ವ್ಯಕ್ತಿ ಇಂತಹ ಬಡ ಜನರ ಮತ್ತು ಗುಲಾಮರ ಉದ್ಧಾರಕ್ಕಾಗಿ ಒಂದು ಹೋರಾಟವನ್ನೇ ಮಾಡಿದ Tueydedes says "It may be your interest to be our Master but how can it be ours to be your slaves! ಅದೇ ಪ್ರಕಾರ ಭಾರತದಲ್ಲಿರುವಂತಹ ಹಿಂದುಳಿದ ವರ್ಗದವರ ಹಿತಕ್ಕಾಗಿ, ಪುರೋಭಿವೃದ್ಧಿಗಾಗಿ ಡಾ॥ ಅಂಬೇಡ್ಕರ್‌ರವರು ಒಂದು ಮಾತನ್ನು ಹೇಳಿದ್ದಾರೆ ಅದೇನೆಂದರೆ Tell a slave that he is a slave he will revolt against slavery" ಎಂದು, ಇಂತಹ ಒಂದು ಚಳುವಳಿ, ಸಾಮಾಜಿಕ, ಮತ್ತು ರಾಜಕೀಯ ಚಳುವಳಿಯನ್ನು ಒಂದು ಉದ್ಧಾರದ ಗುರಿಯನ್ನು ಇಟ್ಟುಕೊಂಡು ಹೋರಾಡಿದರು ಮತ್ತು ಅದಕ್ಕಾಗಿ ಹೋರಾಟ ನಡೆಸಿದರು. ಅದೇ ಪ್ರಕಾರ ಮಹಾತ್ಮಾ ಗಾಂಧಿಯವರು ಹರಿಜನರ ಸಲುವಾಗಿ ಯಥೇಚ್ಛವಾಗಿ ದುಡಿದರು. ಹರಿಜನರ ಉದ್ಧಾರವಾಗಬೇಕಾದರೆ ಸವರ್ಣೀಯರು ವಿಶಾಲಮನಸ್ಸಿನಿಂದ ಮುಂದೆ ಬರಬೇಕು ಎಂಬುದನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಅವರೇ ಹರಿಜನರ ಹೆಣ್ಣುಮಕ್ಕಳು ಗಂಡುಮಕ್ಕಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಅವರಿಗೆ ಶಿಕ್ಷಣ ಕೊಟ್ಟರು, ಈ ರೀತಿ ಮಾಡಿದರೆ ಅವರ ಸಂಸ್ಕಾರ ಬದಲಾವಣೆಯಾಗುತ್ತದೆ ಎಂಬುದನ್ನು ಸವರ್ಣೀಯ ಜನರಿಗೆ ಸ್ಪಷ್ಟಪಡಿಸಿದ್ದಾರೆ. ಆದರೆ ಎಷ್ಟು ಜನ ಆ ರೀತಿಯಿಂದ ಅನುಸರಣೆ ಮಾಡಿಕೊಂಡು ಹೋಗುತ್ತಾ ಇದ್ದಾರೆ ಎಂಬುದು ಒಂದು ಪ್ರಶ್ನಾರ್ಥಕವಾದ ಪ್ರಶ್ನೆಯೇ ಆಗಿದೆ. ಅದರ ಸಲುವಾಗಿ ಅನೇಕ ಕಾಯಿದೆಗಳನು ಮಾಡಲಾಗಿದೆ. ಉದಾಹರಣೆಗೆ ಅನ್‌ಟಚ್‌ಬಲಿಟಿ ಆಕ್ಟ್ ಇದೆ. ಹಳ್ಳಿಗಳಲ್ಲಿ ಇಂದಿಗೂ ಕೂಡ ಹರಿಜನರು ಚಹದ ಅಂಗಡಿಗೆ ಹೋಗುವುದಕ್ಕೆ ಬರುವುದಿಲ್ಲ. ಸಾರ್ವಜನಿಕ ಬಾವಿಗಳನ್ನು ಉಪಯೋಗಿಸುವುದಕ್ಕೆ ಆಗುತ್ತಿಲ್ಲ. ಇಂತಹ ಕೇಸುಗಳು ನಮ್ಮ ರಾಜ್ಯದ ಪೋಲೀಸ್ ಇಲಾಖೆಯವರ ಗಮನಕ್ಕೆ ಬಂದರೂ ಕೂಡ ಅನ್‌ಟಚ್‌ಬಲಿಟಿ ಆಕ್ಟ್ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಿಲ್ಲ. ಸವರ್ಣೀಯರು ದುಡ್ಡಿದ್ದವರು ಅಥವಾ ಐಶ್ವರ್ಯವಂತರು, ಅವರಿಗೆ ಅಧಿಕಾರ ಇದೆ ಎನ್ನುವ ದೃಷ್ಟಿಯಿಂದ ಈ ಕಾಯಿದೆ ಜಾರಿಗೆ ಬರದಂತಾಗಿದೆ. ಇಂತಹ ಒಂದು ಪರಿಸ್ಥಿತಿ ಹೋಗಬೇಕು, ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಯಾವರೀತಿಯಿಂದ ಮುಂದೆ ಬರಬೇಕೋ ಅದನ್ನು ಯೋಚನೆ ಮಾಡಿ, ಅದಕ್ಕೆ ತಕ್ಕ ಕ್ರಮ ಯಾವುದು ಎಂಬುದನ್ನು ಸರ್ಕಾರದವರು ಗಮನಿಸಬೇಕು. ಈಗ ಮುಖ್ಯವಾಗಿ ಅವರು ಆರ್ಥಿಕ ದೃಷ್ಟಿಯಿಂದ ಮುಂದುವರಿಯಲಿಕ್ಕೆ ಅನೇಕ ಯೋಜನೆಗಳನ್ನು ಹಾಕಿದ್ದಾರೆ. ಅದು ಸಾಲದು ಇನ್ನೂ ಹೆಚ್ಚಿನ ಯೋಜನೆಗಳನ್ನು ಹಾಕಬೇಕು. ಅರಣ್ಯ ಖಾತೆಯಲ್ಲಿ ಬೇಕಾದಷ್ಟು ಜಮೀನು ಇದೆ. ಗ್ರೋ ಮೋರ್‌ಫುಡ್ ಸ್ಕೀಂ ಅಂತ ಹೇಳಿ ಹೆಚ್ಚು ಆಹಾರ ಬೆಳೆಯಬೇಕು ಎಂದು ಹೇಳುವಂತಹ ಕಾಲದಲ್ಲಿ ಆ ಜಮೀನುಗಳನ್ನು ಹರಿಜನರಿಗೆ ಕೊಟ್ಟರೆ ಉತ್ತಮವಾದಂತಹ, ಆದರ್ಶವಾದಂತಹ ರೈತರಾಗಿ ಅವರು ಆಹಾರ ಸಮಸ್ಯೆಯನ್ನು ಬಗೆಹರಿಸುವುಕ್ಕೆ ಸಹಾಯಕರಾಗುತ್ತಾರೆ. ಇವತ್ತಿನ ದಿವಸ ಅವರಿಗೆ ಹೊಟ್ಟೆಗೆ ಅನ್ನ ಇಲ್ಲ, ದುಡಿಯುವುದಕ್ಕೆ ಕೂಲಿ ಇಲ್ಲ. ಕೂಲಿ ಸಿಕ್ಕುತ್ತದೆ ಎಂಬ ಆಸೆಯಿಂದ ಅವರು ಇವತ್ತಿನ ದಿವಸ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುತ್ತಾ ಇದ್ದಾರೆ, ಇಂತಹ ಕರುಣಾಜನಕ ಪರಿಸ್ಥಿತಿಯನ್ನು ನೋಡಿದಾಗ ಅವರಿಗೆ ಎರಡು ಎರಡು ಎಕರೆ ಜಮೀನನ್ನು ಕೊಟ್ಟರೆ ಅವರ ಕಷ್ಟವೂ ಪರಿಹಾರವಾಗುತ್ತದೆ ಅಲ್ಲದೇ ದೇಶದ ಆಹಾರ ಉತ್ಪಾದನೆಗೂ ಸಹಕಾರಿಯಾಗು

ತ್ತದೆ ಎಂದು ಹೇಳುತ್ತೇನೆ. ಇವತ್ತಿನ ನಮ್ಮ ದೇಶದ ರಕ್ಷಣೆ ಮಾಡುವುದಕ್ಕೆ ಕಾಶ್ಮೀರವನ್ನು ಪಾಕೀಸ್ಥಾನದವರು ಧಾಳಿಮಾಡಿದಾಗ ಶಿವಪ್ಪ ಕಾಂಬಳೆ ಎಂಬ ಒಬ್ಬ ಸೈನಿಕ ಅವನು ಮೆಹರ್ ಬ್ಯಾಟಾಲಿಯನ್‌ಗೆ ಸೇರಿದವನು, ಎಂತಹ ಧೈರ್ಯ ಸಾಹಸದಿಂದ ಹೋರಾಡಿದ ಎಂಬುದನ್ನು ಸ್ಮರಿಸಿಕೊಂಡದ್ದೇ ಆದರೆ ಭಾರತದ ಸೈನ್ಯ ಅವನ ಸಹಾಯಕ್ಕೆ ಬರದಂತಹ ಬಿಕ್ಕಟ್ಟಿನಲ್ಲಿ ಪಾಕೀಸ್ಥಾನದ ಸೈನಿಕರು ಅವನನ್ನು ಮುತ್ತಿ ಅವನ ಕುತ್ತಿಗೆಯನ್ನು ಕಡಿದಾಗ್ಗ್ಗೆ ರುಂಡ ಕೆಳಗೆ ಬಿದ್ದ ಮೇಲೆ ಅವನ ಕೈಗಳು ಒತ್ತುತ್ತಿರುವ ಮೆಶಿನ್‌ಗನ್ ಬಟನ್‌ನಿಂದ ಸಾವಿರಾರು ಜನ ಸೈನಿಕರು ಸತ್ತರು. ಮದ್ರಾಸಿನ ಮಿಲಿಟರಿ ಕರ್ನಲ್‌ರಾಗಿದ್ದ ಒಬ್ಬ ಅಧಿಕಾರಿಗಳು ಈ ಸಂಗತಿ ತಿಳಿದು ಶಿವಪ್ಪ ಕಾಂಬಳೆಯ ಧೀರತನ ನೆನೆದು ಭಾರತೀಯ ಸೈನ್ಯದಲ್ಲಿ ಇರತಕ್ಕ ಮಹಾರ್ ಬೆಟ್ಯಾಲಿಯನ್ನಿನಲ್ಲಿ ಇರತಕ್ಕ ಜನರು ಬಹಳ ಶೂರರು, ತಾವು ಸಾಯುವತನಕ ಯುದ್ಧಮಾಡುತ್ತಲೇ ಇರುವಂಥ ಸೈನಿಕರಿವರು ಎಂದು ಹೇಳಿ "ಮಹಾರ್ ಏಕ್ ಐಸಾ ಆದ್ಮಿ ಹೈ ವಹ್ ಮರ್‌ಕರ್‌ಭೀ ಲಡತಾ ಹೈ" ಎಂಬುದಾಗಿ ಅವರು ಇವರನ್ನು ಪ್ರಶಂಸೆ ಮಾಡಿದ್ದಾರೆ. ಈ ಜನರಿಗೆ ಅಷ್ಟು ಧೀರತನದಿಂದ, ವೀರಾವೇಷದಿಂದ ಹೋರಾಡತಕ್ಕಂಥಾ ಉತ್ಸಾಹವಿದೆ. ಇವರಿಗೆ ಸರ್ಕಾರದವರು ಇವರಿಗೆ ಸಲ್ಲತಕ್ಕ ಶೇ|| 18 ರಷ್ಟು ಸ್ಥಾನಗಳು ಮಿಲಿಟರಿಯಲ್ಲಿಯೂ ಮತ್ತು ಪೋಲೀಸ್‌ನಲ್ಲಿಯೂ ಎಲ್ಲಿ ಸಿಕ್ಕಿಲ್ಲವೋ ಅಲ್ಲಿ ಇವರಿಗೆ ಕೂಡಲೇ ಸ್ಥಾನಗಳನ್ನು ಒದಗಿಸಬೇಕೆಂದು ಈ ಅಂಶವನ್ನು ನಾನು ಈ ಸಂದರ್ಭದಲ್ಲಿ ನಮ್ಮ ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಇನ್ನೊಂದು ವಿಷಯ : ನಮ್ಮ ದೇಶದಲ್ಲಿ ದೇವದಾಸಿಯರನ್ನು ಬಿಡತಕ್ಕ ಪದ್ಧತಿ ಬಿಜಾಪುರ, ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಇದೆ. ಹೀಗೆ ಸಮಾಜಕ್ಕೆ ಕಳಂಕ ತರತಕ್ಕ ಒಂದು ಪದ್ಧತಿ ನಮ್ಮ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಆಚರಣೆಯಲ್ಲಿದೆ. ಆದರೆ ಹೈದ್ರಾಬಾದ್ ಕರ್ನಾಟಕ ದಲ್ಲಿ ಯಾವ ರೀತಿ ಇದೆಯೋ ಅದು ನನಗೆ ಗೊತ್ತಿಲ್ಲ. ಇದರ ವಿಚಾರದಲ್ಲಿ 10 ವರ್ಷಗಳ ಹಿಂದೆ ಸರ್ಕಾರದವರು ಒಂದು ಬಿಗಿಯಾದ ಕಾಯಿದೆಯನ್ನು ಜಾರಿಗೆ ತಂದಿದ್ದರು. ಆದರೆ ಅದನ್ನು ಇಲ್ಲಿಯವರೆಗೂ ಹೋಗಲಾಡಿಸಲು ಮಾಡತಕ್ಕ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿಲ್ಲ. ಧಾರವಾಡ ಜಿಲ್ಲೆ ಸವದತ್ತಿಯಲ್ಲಿ ರೇಣುಕಾಂಬ—ಎಲ್ಲಮ್ಮ ಎಂಬ ಒಂದು ಪ್ರಸಿದ್ಧ ದೇವರಿದೆ. ಅದಕ್ಕೆ ನಮ್ಮ ಹರಿಜನರು ತಮ್ಮ ಹೆಣ್ಣು ಮಕ್ಕಳನ್ನು ಆ ದೇವತೆಯ ಹೆಸರಿನಲ್ಲಿ ಸೂಳೆಯರನ್ನಾಗಿ—ದೇವದಾಸಿಯರನ್ನಾಗಿ ಬಿಡತಕ್ಕ ಅನಾದಿಕಾಲದ ಪದ್ಧತಿ ಈಗಲೂ ಅಲ್ಲಿ ಜಾರಿಯಲ್ಲಿದೆ. ಆ ಜನರು ತಮ್ಮ ಹೆಣ್ಣು ಮಕ್ಕಳು ಸುಂದರವಾಗಿದ್ದರೆ ಮಾತ್ರ ಹಾಗೆ ದೇವದಾಸಿ ಬಿಡುತ್ತಾರೆ, ಅವರು ಕುರೂಪಿಗಳಾಗಿದ್ದರೆ ಬಿಡುವುದಿಲ್ಲ. ಇದು ಎಂಥಾ ಸೋಜಿಗದ ವಿಚಾರ ? ನಾವು ಇಂಥಾ ವಿಚಾರ ಗಳನ್ನು ಗಮನಕ್ಕೆ ತೆಗೆದುಕೊಂಡು ಇದನ್ನು ತಡೆಗಟ್ಟತಕ್ಕ ಬಗ್ಗೆ ಪೋಲೀಸರಿಗೆ ದೂರನ್ನು ಕೊಟ್ಟರೆ, ಸವರ್ಣೀಯರು ಹೋಗಿ ಇದಕ್ಕೆ ಬೆಂಬಲ ಕೊಟ್ಟು ಆ ಜನರನ್ನು ಬಿಡಿಸಿಕೊಂಡು ಬರುತ್ತಾರೆ. ಅನೀತಿಯುತವಾದ ಇಂಥ ಒಂದು ಮೂಢ ನಂಬಿಕೆ ನಮ್ಮ ಹಿಂದೂ ಜನರಲ್ಲಿ ಬಹಳವಾಗಿದೆ. ಸಮಾಜದಲ್ಲಿ ಕಳಂಕ ತರುವಂಥ ಆಚರಣೆಗಳನ್ನು ತಡೆಗಟ್ಟತಕ್ಕ ವಿಚಾರದಲ್ಲಿ ಸವರ್ಣೀಯರು ತಮ್ಮ ಬೆಂಬಲವನ್ನು ಕೊಡದಿದ್ದರೆ ನಾವು ಹೇಗೆ ಮುಂದುವರಿಯುವುದಕ್ಕೆ ಸಾಧ್ಯ ? ಸಮಾಜದಲ್ಲಿ ಸ್ಥಾನ ಮಾನಗಳನ್ನು ಹೇಗೆ ಪಡೆಯುವುದು ?

ಮೊನ್ನೆ ಒಂದಾವರ್ತಿ ರಾಯಚೂರು ಜಿಲ್ಲೆಯಲ್ಲಿ ಮಟ್ಟಮರಿ ಎಂಬ ಹಳ್ಳಿಯಲ್ಲಿ ಹರಿಜನರಿಗೆ ಕುಡಿಯುವ ನೀರು ಸಿಕ್ಕಲಿಲ್ಲ. ಆಗ ಅವರು ಸವರ್ಣೀಯರ ಬಾವಿಯ ಬಳಿ ಹೋಗಿ ನೀರನ್ನು ಕೊಡಬೇಕೆಂದು ಕೇಳಿಕೊಂಡಾಗ ಅವರು ಸಹಕಾರ ನೀಡಲಿಲ್ಲ. ಅವರು ಆ ಹರಿಜನರಿಗೆ ನೀರನ್ನು ಕೊಡುವುದಿಲ್ಲವೆಂದು ಹೇಳಿಬಿಟ್ಟರು ; ಅಷ್ಟೇ ಅಲ್ಲ—ನೀವು ಮಾದಿಗರು, ಹೊಲೆಯರು ನಿಮಗೆ ನಾವು ನೀರನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿಬಿಟ್ಟರು. ಈ ವಿಚಾರ ಅಷ್ಟಕ್ಕೇ ನಿಲ್ಲಲಿಲ್ಲ—ಸವರ್ಣೀಯರಲ್ಲೇ ಒಬ್ಬಾತ ರಾತ್ರಿವೇಳೆಯಲ್ಲಿ ತಮ್ಮ ಬಾವಿಯಲ್ಲಿ ಮಾಂಸದ ಮುದ್ದೆಯನ್ನು ಹಾಕಿ, ಹರಿಜನರಿಗೆ ನಿಮಗೆ ನೀರು ಕೊಡದ ಕಾರಣ ನೀವೇ ಹೀಗೆ ಬಾವಿಯಲ್ಲಿ ಹಾಕಿದ್ದೀರೆಂದು ಹೇಳಿ ಆ ಸವರ್ಣೀಯರೆಲ್ಲರೂ ಒಟ್ಟಾಗಿ ಸೇರಿ ಹರಿಜನರನ್ನು ಹೊಡೆದಿದ್ದಾರೆ. ಹೀಗೆ ಅಲ್ಲಿ ಒಂದು ಘಟನೆ ನಡೆದಿದೆ. ಪೋಲೀಸರು ಯಾವ ಕ್ರಮವನ್ನೂ ಹೊಡೆದವರ ಬಗ್ಗೆ ತೆಗೆದುಕೊಂಡಿಲ್ಲ ಎನ್ನುವದನ್ನು ವಿಷಾದದಿಂದ ಹೇಳುತ್ತೇನೆ. ಹೀಗಾಗಿ ಈ ದಿವಸ ರಾಜ್ಯದಲ್ಲಿರತಕ್ಕ ಹರಿಜನರ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿ ಬಹಳ ಗಂಭೀರವಾಗಿದೆ ಹಾಗೂ ಚಿಂತಾಜನಕವಾಗಿದೆ. ಇದನ್ನು ಹೇಗೆ ಸರಿಪಡಿಸಬೇಕು ಎಂಬುದು ಇಲ್ಲಿರತಕ್ಕ 208 ಜನ ಮಾನ್ಯ ಸದಸ್ಯರೆಲ್ಲರಿಗೂ ಸೇರಿರ ತಕ್ಕ ಒಂದು ಪವಿತ್ರ ಕೆಲಸವಾಗಿದೆ. ಇದನ್ನು ಯಶಸ್ವಿಗೊಳಿಸಬೇಕಾದ್ದು ನಮ್ಮೆಲ್ಲರ ಆದ್ಯಕರ್ತವ್ಯ ವಾಗಿದೆ. ಇನ್ನಾದರೂ ನಾವು ಈ ವಿಚಾರದಲ್ಲಿ ಎಚ್ಚರಗೊಳ್ಳದಿದ್ದರೆ ಪರಿಸ್ಥಿತಿ ಮುಂದೆ ಹದಗೆಟ್ಟು ಕ್ರಾಂತಿಯೇಳುವುದಕ್ಕೆ ಅವಕಾಶವಾಗಬಹುದು. ಅದಕ್ಕೆ ಅವಕಾಶ ಕೊಡದಂತೆ ಸರ್ಕಾರದವರು

(ಶ್ರೀ ಎಸ್. ಎಸ್. ಅರಕೇರಿ)

ಹರಿಜನರಿಗೂ ಗಿರಿಜನರಿಗೂ ಲಂಬಾಣಿ, ತಳವಾರ, ಬೋವಿ ಮತ್ತು ಹರಿಣಿಶಿಕಾರಿ ಇತ್ಯಾದಿ ಕೋಮುಗಳವರಿಗೆಲ್ಲಾ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕು. ಈ ಜನರು ವಾಸಮಾಡತಕ್ಕ ಕಾಲೋನಿಗಳಲ್ಲಿ ಹೆಚ್ಚು ಹೆಚ್ಚಾಗಿ ನರ್ಸರಿ ಶಾಲೆಗಳನ್ನು ತೆರೆಯಬೇಕು. ಇದನ್ನು ಕೂಡಲೇ ಜಾರಿಗೆ ತಂದರೆ ಅವರಿಗೆ ಸ್ವಲ್ಪ ಅನುಕೂಲವಾಗಬಹುದು. ನಾನು ಮುಖ್ಯವಾಗಿ ಈ ವಿಚಾರದಲ್ಲಿ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ: ಅದೇನೆಂದರೆ ನಮ್ಮೆಲ್ಲರಲ್ಲೂ ಸ್ವಾಭಿಮಾನದ ಜಾಗ್ರತೆ ಉಂಟಾಗಬೇಕು, ನಾವೆಲ್ಲರೂ ಒಂದೇ ಸಮಾಜಕ್ಕೆ ಸೇರಿದವರು, ಅಣ್ಣತಮ್ಮಂದಿರು, ನಮ್ಮಲ್ಲಿ ಅಂದರೆ ಹಿಂದುಗಳಲ್ಲಿ ಇವರು ಸವರ್ಣೀಯರು ಇವರು ಹರಿಜನರು ಎಂಬ ಭಾವನೆಯನ್ನು ಎಲ್ಲರೂ ಮರೆತು ನಾವೆಲ್ಲರೂ ಒಂದು ಸಮಾಜಕ್ಕೆ ಸೇರಿದವರೆಂಬ ಭಾವನೆ ಎಲ್ಲರಲ್ಲೂ ಮೂಡುವಂತೆ ಮಾಡಲು ಒಂದು ಉಚ್ಚಮಟ್ಟದ ಸಮಿತಿಯನ್ನು ನೇಮಕ ಮಾಡಲು ಸರ್ಕಾರ ಮನಸ್ಸು ಮಾಡಬೇಕು. ಇಲ್ಲವಾದರೆ ಇಡೀ ಭಾರತದಲ್ಲೆಲ್ಲಾ ಅಲ್ಲೋಲ ಕಲ್ಲೋಲವಾಗುತ್ತದೆ. ಭಾರತಕ್ಕೇ ಇದರಿಂದ ದೊಡ್ಡ ತೊಂದರೆ ಬರಬಹುದು ಎಂದು ಹೇಳಿ ಇದಕ್ಕೆ ಅವಕಾಶ ಕೊಡದೆ ಸೂಕ್ತವಾದ ಎಲ್ಲಾ ಅನುಕೂಲಗಳನ್ನು ಕೂಡಲೇ ಇವರಿಗೆ ಒದಗಿಸುವುದಕ್ಕೆ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿ ನನಗೆ ಈ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಳೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ, ಈ ದಿವಸ ರಾಜ್ಯದಲ್ಲಿರತಕ್ಕ ಸುಮಾರು 40 ಲಕ್ಷ ಹರಿಜನ ಸಂಸಾರಗಳಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ 2,98,65,000 ರೂಪಾಯಿಗಳ ಒಂದು ಬೇಡಿಕೆಯನ್ನು ಸಭೆಯ ಮುಂದೆ ನಮ್ಮ ಅನುಮೋದನೆಗಾಗಿ ಇಟ್ಟಿದ್ದಾರೆ. ನಾನು ಇದಕ್ಕೆ ಅನುಮತಿಯನ್ನು ಕೊಡುವುದಕ್ಕಾಗಿ ನಿಂತಿದ್ದೇನೆ.

ಈ ದಿವಸ ನಮ್ಮ ಸರ್ಕಾರದವರು ಪ್ರತಿಯೊಂದು ಕೆಲಸಕಾರ್ಯಗಳಿಗೂ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಒಂದು ಯೋಜನೆ ಕೆಲಸ ಅಂದರೆ ಅದಕ್ಕೆ ಲಕ್ಷಗಟ್ಟಲೆ ಖರ್ಚುಮಾಡುತ್ತಾರೆ. ಒಂದು ಮೋಟಾರ್ ಏಜನ್ಸಿ ಅಂದರೆ ಕೋಟಿಗಟ್ಟಲೆ ಖರ್ಚುಮಾಡುತ್ತಾರೆ. ಹೀಗಿರುವಾಗ ನಮ್ಮ ಹರಿಜನರ ಉದ್ಧಾರಕ್ಕೆ ಎಂದು ಈ ದಿವಸ 40 ಲಕ್ಷ ಕುಟುಂಬಗಳಿಗೆ ಸರ್ಕಾರದವರು ಒದಗಿಸಿರತಕ್ಕ ಹಣವೆಷ್ಟು ಅಂದರೆ—2,98,65,000 ರೂಪಾಯಿಗಳು ಮಾತ್ರ. ಇಷ್ಟು ಹಣದಲ್ಲಿ ಈ ಎಲ್ಲಾ ಜನರ ವಿದ್ಯಾಭ್ಯಾಸಕ್ಕೆ ಎಷ್ಟು ಹಣವನ್ನು ಕೊಡುವುದು, ಇವರಿಗೆ ಉದ್ಯೋಗ ಸೌಲಭ್ಯಗಳನ್ನು ಒದಗಿಸಲು ಎಷ್ಟು ಕೈಗಾರಿಕೆಗಳನ್ನು ಒದಗಿಸುತ್ತಾರೆ. ಇವರ ಸಮಾಜ ಕಲ್ಯಾಣಕ್ಕಾಗಿ ಎಷ್ಟು ಹಣವನ್ನು ಒದಗಿಸುತ್ತಾರೆ ಎಂಬುದನ್ನೆಲ್ಲಾ ಈ ಹಣದಲ್ಲಿ ಏನು ಕೆಲಸಗಳನ್ನು ಸಾಧಿಸಲು ಸಾಧ್ಯ ಎಂಬುದನ್ನು ಅವರೇ ಲೆಕ್ಕಮಾಡಿ ಹೇಳಬೇಕಾಗಿದೆ. ಈ ಹಣ ಯಾತಕ್ಕೂ ಸಾಲದು ಎಂಬುದಾಗಿ ನಾವು ಇಲ್ಲಿ ಪದೇ ಪದೇ ಹೇಳುತ್ತಿದ್ದರೂ ಏನೋ ಈಕೆ ಇಲ್ಲಿ ಒಂದು ಹರಿಕಥೆಯನ್ನು ಹೇಳುತ್ತಿದ್ದಾಳೆ ಎಂದು ಕೆಲವರು ಹೇಳಬಹುದು. ಆದರೆ ನಾನು ಹಾಗೆ ಇಲ್ಲಿ ಒಂದು ಹರಿಕಥೆಯನ್ನು ಮಾಡುವುದಕ್ಕಾಗಿ ಬಂದಿಲ್ಲ. ನಾನು ಹರಿಕಥೆಯನ್ನೇನೂ ಹೇಳುತ್ತಿಲ್ಲ. ಸರ್ಕಾರದವರು ಈ ದಿವಸ ಏನು ಕಾರ್ಯಕ್ರಮಗಳನ್ನು ಹರಿಜನರ ಸಮಾಜ ಕಲ್ಯಾಣಕ್ಕಾಗಿ ಕೈಗೊಂಡಿದ್ದಾರೆಂಬುದನ್ನು ಕೇಳುತ್ತಿದ್ದೇನೆ. ಸರ್ಕಾರದವರು ಪರರಾಷ್ಟ್ರದ ಯಾವುದೇ ಒಂದು ಸ್ಕೀಮನ್ನು ಕೈಗೊಂಡರೂ ಅದರ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಆದರೆ ಇಲ್ಲಿಗೆ 20 ವರ್ಷಗಳು ಮುಗಿದರೂ ಹರಿಜನರಿನ್ನೂ ಬಹಳ ನೀಚಸ್ಥಿತಿಯಲ್ಲೇ ಇದ್ದಾರೆ, ಇವರು ವಿದ್ಯಾ, ಉದ್ಯೋಗ ಸಮಾಜ ಹೀಗೆ ಪ್ರತಿಯೊಂದು ಹಂತದಲ್ಲೂ ಬಹಳ ಹಿಂದೆ ಉಳಿದಿದ್ದಾರೆ. ಇವರನ್ನು ಸುಧಾರಣೆ ಮಾಡುವುದಕ್ಕೆ ಇನ್ನೂ ಎಷ್ಟು ಕಾಲ ಇವರಿಗೆಬೇಕು ಎಂಬುದನ್ನಾದರೂ ಇವರು ಏಕೆ ತಿಳಿಸುತ್ತಿಲ್ಲ ? ಹರಿಜನ ಗಿರಿಜನರ ಉದ್ಧಾರದ ಬಗ್ಗೆ ಏನೇನು ಕೆಲಸಕಾರ್ಯಗಳನ್ನು ಮಾಡಿದ್ದಾರೆ ! ಇವರಿಗೆ ಈ 20 ವರ್ಷಗಳ ಕಾಲ ಸಾಲಲಿಲ್ಲ ಎಂದರೆ ಮುಂದೆ ಸರ್ಕಾರದವರು ಈ ಹರಿಜನರನ್ನು ಉದ್ಧಾರಮಾಡುವ ವೇಳೆಗೆ ನಾವುಗಳೆಲ್ಲಾ ಜೀವಂತರಾಗಿ ಇರುತ್ತೇವೆಯೋ, ಇರುವುದೇ ಇಲ್ಲವೋ ಅದು ಗೊತ್ತಾಗುವುದಿಲ್ಲ. ಅಸ್ಪೃಶ್ಯರನ್ನು ಸರ್ಕಾರದವರು ನಿಜವಾಗಿಯೂ ಅವರಿಗೆ ಆ ಮನಸ್ಸಿದ್ದರೆ ಅವರನ್ನು ಉದ್ಧಾರ ಮಾಡಲೇಬೇಕೆಂಬ ಆಸೆಯಿದ್ದರೆ ಅವರು ಈ ಕಾರ್ಯವನ್ನು ಒಂದು ಮಿಷನರಿಯವರು ಕೆಲಸ ಮಾಡತಕ್ಕ ರೀತಿಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ನಾನು ಈ ಹಿಂದೆ 1957ರಲ್ಲಿ ಇದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾಗ, ಈಗ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಲ್ಲ,—ಆ ದಿವಸ ಮುಖ್ಯ ಮಂತ್ರಿಗಳು ಈ ಜನಾಂಗಗಳ ಉದ್ಧಾರಕ್ಕಾಗಿ ನಾನು ನನ್ನ ಶಕ್ತ್ಯಾನುಸಾರ ಕಾರ್ಯಕ್ರಮ

ಗಳನ್ನು ಕೈಗೊಂಡು ಅವುಗಳನ್ನು ಬಹಿಷ್ಕರಿಸುತ್ತೇನೆಂದು ಅವರು ಹೇಳಿದ್ದರು. ಅವರು ಎಂದು ಅದನ್ನು ಹೇಳಿದರೋ ಆ ದಿವಸವೇ ಅವರು ಅದನ್ನು ಮರೆತುಬಿಟ್ಟರು. ಅಸ್ಪೃಶ್ಯರು ಈ ದಿವಸ ಎಂಥಾ ಒಂದು ಕಳವಳಕರವಾದ ಪರಿಸ್ಥಿತಿಯಲ್ಲಿದ್ದಾರೆಂಬುದನ್ನು ಹೇಳಿದರೆ ಎಲ್ಲರ ಅಂತಃ ಕರುಣವೂ ಬಿಚ್ಚಿಹೋಗಬೇಕು. ಅವರ ಬಗ್ಗೆ ತಮ್ಮೆಲ್ಲರಲ್ಲೂ ಒಂದು ಸಹಾನುಭೂತಿ ಮೂಡಬೇಕು. ತಮ್ಮಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆಯೇ ವಿನಾ ನಾನು ಇಲ್ಲಿ ಹರಿಕಥೆಯನ್ನು ಮಾಡುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಲ್ಲೂ, ಶ್ರೀ ನಾರಾಯಣಗೌಡರಲ್ಲೂ ಮತ್ತು ಸೆಕ್ರೆಟರಿಗಳಲ್ಲೂ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿರುವುದು ಸರ್ಕಾರದವರು ಈ ದಿವಸ ಈ ಹರಿಜನ ಗಿರಿಜನರ ಪರಿಸ್ಥಿತಿ ಏನಾಗಿದೆ ಎಂಬುದನ್ನು ವಿಚಾರಮಾಡಿ ಇವರಿಗೆ ಅನುಕೂಲ ಮಾಡಲು ಒಂದು ಸ್ಕೀಮನ್ನು ತಯಾರಿಸುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ಜನಾಂಗಗಳನ್ನೆಲ್ಲಾ ಉದ್ಧಾರಮಾಡಬೇಕಾಗಿದ್ದರೆ, ಇವರ ವಿದ್ಯಾಭ್ಯಾಸಕ್ಕೆ ಎಷ್ಟು ಹಣಬೇಕು, ಇವರಿಗೆ ಉದ್ಯೋಗಗಳನ್ನು ಒದಗಿಸಲು ಎಷ್ಟು ಹಣವನ್ನು ಒದಗಿಸಬೇಕು ಇವರಿಗೆ ಕೈಗಾರಿಕಾ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಎಷ್ಟು ಹಣವನ್ನು ಒದಗಿಸಬೇಕು ಎಂಬುದಕೆಲ್ಲಾ ಒಂದು ನಿರ್ದಿಷ್ಟವಾದ ಸ್ಕೀಮನ್ನು ತಯಾರಿಸಬೇಕು. ಹಾಗೆ ಮಾಡಿ 40 ಲಕ್ಷ ಕುಟುಂಬಗಳಿಗೂ ಮತ್ತು 19 ಜಿಲ್ಲೆಗಳಲ್ಲಿರತಕ್ಕ ಈ ವರ್ಗದವರಿಗೆಲ್ಲಾ ಅನುಕೂಲಗಳನ್ನು ಮಾಡಿ ಇವರನ್ನು ಇಷ್ಟು ವರ್ಷಗಳಲ್ಲಿ ಸವರ್ಣೀಯರ ಮಟ್ಟಕ್ಕೆ ತರುವುದಕ್ಕೆ ಪ್ರಯತ್ನಮಾಡಬೇಕು ಎಂದು ಹೇಳುತ್ತೇನೆ. ಈ ದಿವಸ ನಮ್ಮ ಜನಾಂಗದ ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜಿಗೆ ಸೇರಬೇಕೆಂದರೆ ಅಲ್ಲಿ ಒಂದೊಂದು ಸೀಟಿಗೂ 5ಸಾವಿರ 10 ಸಾವಿರ ರೂಪಾಯಿಗಳನ್ನು ಕೊಡಬೇಕು. ಎಲ್ಲಿಂದ ದುಡ್ಡನ್ನು ತರಬೇಕು ಇವರು ? ಹೀಗಾದರೆ ಹರಿಜನರು ವಿದ್ಯಾವಂತರಾಗುವುದು ಎಂದು ? ಈ ದಿವಸ ಸರ್ಕಾರದವರು ದೇಶದಲ್ಲಿ ಬಾವಿಗಳನ್ನು ತೆಗೆಸಬೇಕೆಂದರೆ ಅದಕ್ಕೆ ಒಂದು ಸ್ಕೀಮನ್ನು ತಯಾರಿಸಿ ಅನಂತರ ಅದಕ್ಕೆ ಕೋಟಿಗಟ್ಟಲೆ ಖರ್ಚುಮಾಡುತ್ತಾರೆ. ಹೀಗೆ ರೈತರಿಗೆ ಪಂಪ್ ಸೆಟ್ಟುಗಳನ್ನು ಒದಗಿಸುವ ವಿಚಾರದಲ್ಲೂ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಾರೆ. ಸರ್ಕಾರದವರು ಈ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಒಂದು ಸರಿಯಾದ ಸ್ಕೀಮನ್ನು ತಯಾರುಮಾಡದಿದ್ದರೆ ಇನ್ನು ಎಷ್ಟು ವರ್ಷಗಳು ಕಳೆದರೂ ಇವರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ತಾವುಗಳು ಹರಿಜನರಿಗೆ ಕೆಲವು ಭೂಮಿಗಳನ್ನು ಕೊಟ್ಟು ರೈತರಂತೆ ಮಾಡಿ.

4-00 P.M.

ಹರಿಜನರ ಸ್ಕೀಮಿನಿಂದ ಪ್ರತಿವರ್ಷವೂ 4 ಲಕ್ಷ ಅಥವಾ 5 ಲಕ್ಷ ರೂಪಾಯಿನಷ್ಟು ಹಣ ಲ್ಯಾಪ್ಸ್ ಆಗುತ್ತಿದೆ. ಇವರು ಯಾವುದನ್ನು ಹರಿಜನ ಸ್ಕೀಮಿಗೆ ವಾಪಸ್ಸು ಮಾಡುವುದಿಲ್ಲ. ಯಾವ್ಯಾವುದೋ ಸ್ಕೀಮುಗಳಿಗೆ ಬೇಕಾದಷ್ಟು ಹಣವನ್ನು ಕೊಡುತ್ತಾರೆ. ಸೋಷಿಯಲ್ ವೆಲ್‌ಫೇರ್ ಸ್ಕೀಮುಗಳಿಗೆ ಏನೂ ಮಾಡುವುದಿಲ್ಲ. ಕಾರ್ಮಿಕರಿಗೆ ಸಾಕಷ್ಟು ಕೆಲಸವೇ ಇಲ್ಲವೆಂದು ಹೇಳುವಾಗ ಆ ಬಾಬಿಗೆ ಕೊಟ್ಟಿರತಕ್ಕ ದುಡ್ಡಿನಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ನೋಡಬೇಕು. ಅದನ್ನು ನೋಡದೆ ಸುಮ್ಮನೆ ಕೊಟ್ಟ ಹಣ ಲ್ಯಾಪ್ಸ್ ಆಗುತ್ತಿದೆ ಎಂಬುದಾಗಿ ಇವರು ಹೇಳಿದರೆ ಏನು ಪ್ರಯೋಜನ ? ಏನೋ ನಡೆದುಕೊಂಡು ಹೋಗುತ್ತಿದೆ, ಸಮಾಜ ಇದೆ, ಅದರ ಬಗ್ಗೆ ಗಾಂಧಿ ತತ್ವ ಇದೆಯೆಂದು ಕೊಂಡು ಸುಮ್ಮನೆ ಈ ಕಾರ್ಯಗಳನ್ನು ಅಲಕ್ಷಮಾಡಿದರೆ ನಿಜವಾಗಿ ಅಸ್ಪೃಶ್ಯತೆ ಹೋಗುತ್ತದೆಯೇ ? ಇವತ್ತು ಶ್ರೀಮತಿ ಯಶೋಧರ ದಾಸಪ್ಪ ಅವರು ತಿರುಗಿ ಇಲ್ಲಿಗೆ ಬರಬೇಕಾಗಿತ್ತು. ಏಕೆಂದರೆ, ಅವರು ಹರಿಜನ ಮತ್ತು ಗಿರಿಜನರ ಅಭಿವೃದ್ಧಿಯ ಬಗ್ಗೆ ಬಹಳವಾಗಿ ಪ್ರಯತ್ನಮಾಡಿದ್ದಾರೆ. ನಾನು ಸರ್ಕಾರಕ್ಕೆ ಮೊದಲಿನಿಂದ ವಿನಯವಾಗಿ ಪ್ರಾರ್ಥನೆಮಾಡುತ್ತಿದ್ದೇನೆ. ಅವರ ಸಲುವಾಗಿ ಯಾವ ರೀತಿಯಿಂದಾದರೂ ಪ್ರಚಾರಮಾಡಿ ಈಗಿರತಕ್ಕ ಅಸ್ಪೃಶ್ಯತೆ ನಿವಾರಣೆಯನ್ನು ಪೂರ್ತಿಯಾಗಿ ಹೋಗಲಾಡಿಸಲು ಹೆಚ್ಚು ಹೆಚ್ಚಾಗಿ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಅದಕ್ಕಾಗಿ ಒಂದು ಕಮಿಟಿಯನ್ನು ರಚನೆಮಾಡಬೇಕು. ಆ ಕಮಿಟಿಯೊಳಗೆ ಮುಖ್ಯ ಮಂತ್ರಿಗಳು, ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಶಾಖೆಯ ಕಾರ್ಯದರ್ಶಿ, ಮಂತ್ರಿಗಳು ಮತ್ತು ಹಣಕಾಸಿನ ಸಚಿವರು ಇರುವಂತಹ ವ್ಯವಸ್ಥೆ ಇರಬೇಕು. ಇವರೆಲ್ಲರೂ ಕೂಡಿ ಒಂದು ಯೋಜನೆಮಾಡಿ ಅಸ್ಪೃಶ್ಯತೆ ನಿವಾರಣೆಗಾಗಿ ಆದಷ್ಟು ಪ್ರಯತ್ನವನ್ನು ಮಾಡಬೇಕು. ಇವರು ಇದುವರೆಗೆ ಮಾಡಿದಕಾರ್ಯ ಏನೂ ಸಾಧನೆಯಾಗಲ್ಲಿಲ್ಲ. ನಾನು ಇದುವರೆಗೆ 27 ಸಾರ್ವಜನಿಕ ಸಂಘ ಸಂಸ್ಥೆಗಳನ್ನು ಸ್ಥಾಪನೆಮಾಡಿದ್ದೇನೆ. ಆ ಕಡೆಗಳಲ್ಲಿ ಅಸ್ಪೃಶ್ಯ ಜನರಲ್ಲಿ ಸುಳ್ಳು ಹೇಳುವವರ ಸುಳಿವೇ ಇಲ್ಲ. ದರೋಡೆಏನೂ ಮಾಡುವವರಿಲ್ಲ ಮೋಸಮಾಡುವವರು ಸಹ ಅಲ್ಲಿಲ್ಲ. ಆ ವಿಚಾರವನ್ನು ಆ ಸಂಸ್ಥೆಗಳಲ್ಲಿ ಒಬ್ಬರಿಗೊಬ್ಬರು ಕೇಳಿ ವಿಚಾರ ಮಾಡಿಕೊಳ್ಳಬಹುದು. ಏಕೆಂದರೆ ದುಡಿಯುವುದಕ್ಕೆ ನಮ್ಮ ಸಮಾಜ ಎಂದೂ ಮೋಸಮಾಡಿಲ್ಲ.

(ಶ್ರೀಮತಿ ಚಂಪಾಬಾಯಿ ಭೋಗಳೆ)

ಈ ಸಮಾಜದ ಆರ್ಥಿಕ ಮಟ್ಟವನ್ನು ಯಾವರೀತಿ ಬೆಳಸಬೇಕು ಎಂಬುದನ್ನು ನೋಡಬೇಕು ಸರ್ಕಾರದವರು ಹರಿಜನರ ಉದ್ಧಾರಕ್ಕಾಗಿ ಹಣ ತೊಟ್ಟಿದ್ದಾರೆ. ಇತ್ತೀಚೆಗೆ ಹೌಸಿಂಗ್ ಸ್ಕೀಮುಗಳಿಗೆ ಸಾಲ ಕೊಡುತ್ತಿದ್ದಾರೆ. ಅದರಿಂದ ಅವರ ಒಂದು ಯೋಜನೆಯಾದರೂ ಯಶಸ್ವಿಯಾಗುತ್ತದೋ ಇಲ್ಲವೋ ಎಂಬ ಸಂದೇಹ ಬಂದಿದೆ. ಇದರಿಂದ ನಮ್ಮ ಜನರಿಗೆ ಇನ್ನು 3 ವರ್ಷಗಳಲ್ಲಾದರೂ ಮನೆ ಸಿಗುತ್ತದೆನ್ನುವ ಆಶೆಯೂ ಇಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಅವರು ಆ ಸಾಲವನ್ನು ತೀರಿಸುವುದಕ್ಕೇ ಬಹಳ ಕಷ್ಟವಾಗಿದೆ. ಕಾಗವಾಡ ನಮ್ಮಕಡೆ ಒಂದು ಮದಾಷ್ಟೈದವಿಕಾಸನಾಳದಲ್ಲ 60 ಮನೆಗಳು ಸುಟ್ಟು ಹೋದುವು. ಅದರಿಂದ 3 ಲಕ್ಷ ರೂಪಾಯಿಗಳು ಲುಕ್ಸಾನು ಆಯಿತು. ಆಗ ಅನೇಕರು ತಮ್ಮ ಮಂಗಳ ಸೂತ್ರಗಳನ್ನು ಮಾರಿ ಜೀವನ ಮಾಡಬೇಕಾದ ಪರಿಸ್ಥಿತಿಬಂತು. ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಒಂದು ತಂತಿಯನ್ನು ಕೊಟ್ಟೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಒಂದು ಅರ್ಜಿಯನ್ನು ಇದರ ಸಂದರ್ಭದಲ್ಲಿ ಹಾಕಿದ್ದೆ. ಇಲ್ಲಿಯ ತನಕ ಸರ್ಕಾರದವರು ಆ ಬಗ್ಗೆ ಏನೊಂದು ಉತ್ತರವನ್ನು ಕೊಟ್ಟಿಲ್ಲ. ನೂರಾರು ಅರ್ಜಿಗಳನ್ನು ಮೇಲಿಂದ ಮೇಲೆ ಅನೇಕರು ಹಾಕಿದ್ದಾರೆ. ಅದರಿಂದ ಅಸ್ಪೃಶ್ಯತಾ ಜನರು ಎಷ್ಟರಮಟ್ಟಿಗೆ ಜೀವನ ಮಾಡಿಕೊಳ್ಳಬಲ್ಲರು ? ಹಳ್ಳಿಯ ಜನಗಳಮೇಲೆ ವಿಶೇಷವಾಗಿ ವಿಶ್ವಾಸವಿಟ್ಟು ಅವರನ್ನು ಉದ್ಧಾರ ಮಾಡುವುದೇ ಗಾಂಧೀಜಿಯವರ ತತ್ವವಾಗಿತ್ತು. ಅನೇಕ ದಿವಸಗಳ ಕಾಲ ಹರಿಜನರನ್ನು ಅವರು ಹೊಗಳುತ್ತಿದ್ದರು. ಆದರೆ ಅವರು ಬಹಳದಿನಗಳ ಕಾಲ ಬದುಕಲಿಲ್ಲ. ಆದರೂ ಈಗಲೂ ಅವರ ತತ್ವ ಆಚರಣೆಗೆ ಬಂದಿದೆ ಎಂಬುದಾಗಿ ಹೇಳುತ್ತಿದ್ದಾರೆ. ನಮ್ಮ ಸಮಾಜದವರು ಜಮೀನು ಹಾಗೂ ಮನೆ ಕಳೆದುಕೊಂಡವರ ಬಗ್ಗೆ ಅರ್ಜಿಗಳನ್ನು ಸಲ್ಲಿಸಿ ಇಲ್ಲಿಗೆ ಒಂದೂವರೆ ತಿಂಗಳು ಆಯಿತು. ಆದರೂ ಅವರಿಗೆ ಇಲ್ಲಿಯವರೆಗೂ ಏನೂ ವಸತಿ ಸೌಕರ್ಯ ಸಿಗಲ್ಲಿಲ್ಲ. ಈಗ ಅವರಿಗೆ ಹಣವನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಕೆಲವರಿಗೆ ರೊಕ್ಕದ ಸಹಾಯ ಸಿಕ್ಕಿದೆಯೆಂಬುದಾಗಿ ಹೇಳಿದರು. ಅದರಿಂದ ಸರ್ಕಾರದವರಿಗೆ ಆ ಸಮಾಜದ ಪರವಾಗಿ ವಂದನೆಗಳನ್ನು ಅರ್ಪಿಸುತ್ತೇನೆ. ನಾನು ಇನ್ನೂ ಹರಿಜನರ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ದಯವಿಟ್ಟು ಸಮಯ ಕೊಡಬೇಕು. ಇವರ ವಿದ್ಯಾಭ್ಯಾಸದ ವಿಷಯದಲ್ಲಿ ಬೊಂಬಾಯಿ ಕರ್ಣಾಟಕದೊಳಗೆ ಒಂದು ರೀತಿಯ ಕಾನೂನು ಇತ್ತು. ಆದರೆ ಇಲ್ಲಿ 1965ನೇ ಇಸವಿಯ ಗ್ರಾಂಟನ್ನು 1966ರಲ್ಲಿ ಕೊಡುತ್ತಾರೆ. ಇದೇ ಮಾನ್ಯಸಭೆಯಲ್ಲಿ ನಾನು ಈ ವಿಚಾರವಾಗಿ ಅನೇಕಸಲ ಹೇಳಿಕೊಂಡಿದ್ದೇನೆ. ಈ ಕಾನೂನನ್ನು ಬದಲಾವಣೆಮಾಡದೆ ಅಸ್ಪೃಶ್ಯತೆ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ನಿಗದಿಯಾದ ಕಾಲದಲ್ಲಿ ಗ್ರಾಂಟು ಕೊಡದೆ ಇದ್ದಪಕ್ಷದಲ್ಲಿ ಹರಿಜನರ ಯಾವ ಯೋಜನೆಯೂ ಯಶಸ್ವಿಯಾಗುವುದಿಲ್ಲ. ಅನಂತರ ಎಷ್ಟು ಹಣ ಕೊಟ್ಟರೂ ಉಪಯೋಗವಿಲ್ಲ. ಇದರಿಂದ ಈಗ ಏನಾಗಿದೆಯೆಂದರೆ 40ಲಕ್ಷ ಕುಟುಂಬಕ್ಕೆ ಕಲ್ಯಾಣವಾಗುತ್ತಿದ್ದುದು ಹೋಗಿ ಆ ರೀತಿ ಆಗುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯಾಗಿದೆಯೆಂದು ಹೇಳಬೇಕಾಗಿದೆ. ಆದ್ದರಿಂದ ಸರ್ಕಾರದವರು ಈಗ ಹೆಚ್ಚಿನ ಹಣವನ್ನು ಅಂದರೆ ಕೋಟ್ಯಾಂತರ ರೂಪಾಯಿಗಳನ್ನು ಅವರ ಪ್ರತಿಯೊಂದು ಯೋಜನೆಗೂ ಭರ್ತಿಹಾಕಿ ಅದನ್ನು ಅವರ ಕಲ್ಯಾಣದ ಸಲುವಾಗಿ ಉಪಯೋಗಮಾಡಬೇಕೆಂದು ಮಾನ್ಯ ಮಂತ್ರಿ ಶ್ರೀ ನಾರಾಯಣಗೌಡರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಸಮಾಜವನ್ನು ವಿದ್ಯಾಭ್ಯಾಸದಲ್ಲಿ ಕಲ್ಯಾಣವಾಗುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಉದ್ಯೋಗ ಸಂಖ್ಯೆಯನ್ನೂ ಸಹ ಮುಂದುವರಿಸಬೇಕು. ಇಲ್ಲದಿದ್ದರೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಗೋಸ್ಕರ ಏನಾದರೂ ಭೂಮಿ ಕೊಡುವುದು ಇದ್ದರೆ ಕೊಡಿ. ಅದನ್ನು ಬಿಟ್ಟು ನಮ್ಮ ಭೂಮಿಯನ್ನು ಪಾಕಿಸ್ಥಾನಕ್ಕೆ ಮಾರಿಕೊಂಡರೆ ಏನು ಪ್ರಯೋಜನ ? ಹರಿಜನರಿಗೆ ಕೇವಲ ಒಂದೆರಡು ಕುಂಟೆ ಜಮೀನು ಇದ್ದರೆ ಅದರಿಂದ ಅಷ್ಟಾಗಿ ಉಪಯೋಗವಿಲ್ಲ. ಮಹಾತ್ಮ ಗಾಂಧಿಯವರು ಹೇಳಿದಂತೆ ಅವರ ಒಂದು ತತ್ವದ ಪ್ರಕಾರ ಸುಮಾರು 10 ಎಕರೆ ಜಮೀನನ್ನಾದರೂ ಒಂದೊಂದು ಕುಟುಂಬಕ್ಕೆ ಕೊಡಿ. ಆಗ ಅವರ ಆರ್ಥಿಕ ಸ್ಥಿತಿ ಸುಧಾರಿಸಬಹುದು. ಆದರೆ ಸಮಾಜದಲ್ಲಿ ಅವರು ಯಾವಾಗಲೂ ಚೆನ್ನಾಗಿರುತ್ತಾರೆಯೇ ಇಲ್ಲವೇ ಎಂಬುದನ್ನು ನೋಡಿ ನಾವು ಮಾಡಿದ್ದೇವೆಂದು ಸರ್ಕಾರದವರು ಹೇಳುವುದರಲ್ಲಿ ಅರ್ಥವಿಲ್ಲ. ಸರ್ಕಾರದವರು ಅವರ ಬಗ್ಗೆ ಪ್ರಚಾರ ಮಾಡಿ ಆ ಸಮಾಜ ಏಳಿಗೆಗೋಸ್ಕರ ಸಾಕಷ್ಟು ಅವರು ದುಡಿಯಬೇಕೆಂದು ಹೇಳಬೇಕು. ನಮ್ಮ ಸಮಾಜದಲ್ಲಿ ಪೋಲೀಸ್ ಕೇಸುಗಳು ಯಾವತ್ತೂ ಬರುವುದಿಲ್ಲ. ಅವರಿಗೆ ದುಡ್ಡು ಬೇಕಿಲ್ಲ. ನಮ್ಮ ಸಮಾಜದವರಿಂದ 10 ರೂಪಾಯಿಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅಂತಹ ಪೋಲೀಸ್ ಅಧಿಕಾರಿಗಳು ಯಾವತ್ತೂ ಬರುವುದಿಲ್ಲ. ಈಗ ಇರತಕ್ಕ ಕಾಯಿದೆಗಳಿಂದ ಎಂದಿಗೂ ಅವರು ಮುಂದೆ ಬರುವುದಿಲ್ಲ. ಮುಖ್ಯವಾಗಿ ಅವರಿಗೆ ಬೇಕಾದ್ದು ವಿದ್ಯೆ ಮತ್ತು ಉದ್ಯೋಗ. ಅದಕ್ಕಾಗಿ ಸರ್ಕಾರದವರು ಹೆಚ್ಚಿನ ಸಹಾಯ ಮಾಡಬೇಕು ನಮ್ಮ ಸಮಾಜದಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಒಂದೊಂದು ಪ್ರದೇಶದಲ್ಲಿ ಹರಿಜನರ ಸಂಘ

ಟಣಿ ಮಾಡಿ ಸುಮಾರು 10 ಊರುಗಳಿಗೆ ಒಂದು ಹರಿಜನ ಸಂಘ ಎಂದು ಮಾಡಬಹುದು ತಕ್ಕ ಪ್ರೋತ್ಸಾಹವನ್ನು ಸರ್ಕಾರದವರು ಕೊಡಬೇಕು. ಅದನ್ನು ಮಾಡಿದರೆ ಅವರ ಈ ಯೋಜನೆ ಯಶಸ್ವಿಯಾಗುತ್ತದೆ. ಏಕೆಂದರೆ ಅವರ ಎಲ್ಲಾ ಸ್ಕೀಮುಗಳಿಗಿಂತ ಇದು ಬಹಳ ಮಹತ್ವವಾದಂಥ ಯೋಜನೆಯಾಗಿದೆ. ಒಟ್ಟಿನಲ್ಲಿ ಅಸ್ಪೃಶ್ಯತಾ ನಿವಾರಣೆಯನ್ನು ಸರ್ಕಾರದವರು ಮಾಡಲೇ ಬೇಕು. ಅದು ಮಹಾತ್ಮಾ ಗಾಂಧಿಯವರ ತತ್ವ. ಅದನ್ನು ಕೂಡಲೇ ಜಾರಿಗೆ ತರಬೇಕೆಂದು ಹೇಳುತ್ತೇನೆ. ಆದರೆ ಈ ಬಾಬಿಗೆ ಕೊಟ್ಟಿರತಕ್ಕ 3 ಕೋಟಿ ರೂಪಾಯಿಗಳು ಏನೇನೂ ಸಾಲುವುದಿಲ್ಲ. ಈಗ ಕೊಟ್ಟಿರತಕ್ಕ ಹಣಕ್ಕೆ ಇನ್ನೂ ಅದರ ಕಾಲು ಭಾಗವನ್ನು ಜಾಸ್ತಿಯಾಗಿ ಬಜೆಟ್ಟಿನಲ್ಲಿ ಕೊಟ್ಟು ಆದಷ್ಟು ಜಾಗ್ರತೆಯಾಗಿ ಅಸ್ಪೃಶ್ಯತಾ ನಿವಾರಣೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಅಧ್ಯಕ್ಷರೇ, ಸಮಾಜ ಕಲ್ಯಾಣ ವಿಷಯವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ಮುಖ್ಯವಾಗಿ ಸಮಾಜ ಕಲ್ಯಾಣ ಕೆಲಸವನ್ನು ಸರ್ಕಾರವೇ ಮಾಡಬೇಕು ಎನ್ನುವ ವಿಷಯ ಅತಿ ಗಂಭೀರವಾದುದು. ಸಮಾಜಕ್ಕೂ ಒಂದು ನೀತಿ ಇದೆ. ಸಮಾಜದಲ್ಲಿರುವ ವ್ಯಕ್ತಿಗಳಿಗೆ ಒಂದು ಧಾರ್ಮಿಕ ಭಾವನೆ ಇದೆ. ಆ ಒಂದು ಧಾರ್ಮಿಕ ಭಾವನೆಯಿಂದ ಮಹಾನುಭಾವರು, ಶ್ರೀಮಂತರು ಸಮಾಜ ಸೇವೆಯನ್ನು ಸಲ್ಲಿಸುವುದರಲ್ಲಿ ನಿರತರಾಗಿರುವುದು ಇತ್ತೀಚೆಗೆ ಒಂದು ಆಶ್ಚರ್ಯವನ್ನು ನನಗೆ ಉಂಟು ಮಾಡಿದೆ. ಕೆಲವರು ಸಮಾಜದಲ್ಲಿ ಸಂಘಟನೆ ಮಾಡಿಕೊಂಡು ಬ್ರಿಟಿಷರು ಆಡಳಿತ ಮಾಡುತ್ತಿದ್ದಾಗ ಯಾವ ರೀತಿಯಲ್ಲಿ ಆಂದೋಳನ ಅಥವಾ ಚಳುವಳಿ ಮಾಡುತ್ತಿದ್ದರೋ ಆ ರೀತಿಯಲ್ಲಿ ಸಮಾಜ ಸೇವಾ ಸಂಘಗಳ ಸಂಘಟನೆಯಾಗಬೇಕು. ಸಮಾಜಕಲ್ಯಾಣ ಮಾಡುತ್ತೇವೆಂದು ಸಮಾಜ ಸೇವೆಯನ್ನು ಆಡಳಿತದ ಅಂಗವಾಗಿ ಇಟ್ಟುಕೊಂಡು ಅಧಿಕಾರಿಗಳಿಂದಲೇ ಸಮಾಜಸೇವೆಯನ್ನು ಮಾಡಿಸುವಂಥಾದ್ದು, ಅಂತಹ ಒಂದು ಯೋಜನೆಯನ್ನು ಈ ದೇಶದಲ್ಲಿ ಜಾರಿಗೆ ತರುವುದು ಖಂಡನೀಯವಾದುದು ಎಂಬುದಾಗಿ ನಾನು ಹೇಳುತ್ತೇನೆ. ಏಕೆಂದರೆ ಸಮಾಜ ಸೇವೆಯ ಪ್ರತಿಯೊಂದು ಕಾರ್ಯಕ್ರಮವನ್ನು ಆಡಳಿತದಲ್ಲಿ ಸೇರಿಸಿಕೊಂಡು ಸರ್ಕಾರ ನಮ್ಮ ಸಲುವಾಗಿ ಇಂತಹ ಕೆಲಸಗಳನ್ನು ಮಾಡುತ್ತಾರೆ ಎನ್ನುವ ಉಪಕಾರ ಭಾವನೆಯನ್ನು ಮನಸ್ಸಿನಲ್ಲಿ ಪ್ರತಿಬಿಂಬಿಸುವ ಉದ್ದೇಶದಿಂದ ಚುನಾವಣೆಯ ಕಾಲದಲ್ಲಿ ಪಕ್ಷದ ಪ್ರಚಾರಕ್ಕಾಗಿ ಕಾಂಗ್ರೆಸ್ ಸರ್ಕಾರದವರು ಸಮಾಜ ಅಭಿವೃದ್ಧಿ ಕಾರ್ಯಗಳನ್ನು ಆಡಳಿತದ ಅಂಗವಾಗಿ ಹಾಗೂ ಆಡಳಿತದ ವಿಭಾಗವಾಗಿ ಇಟ್ಟುಕೊಂಡಿದ್ದಾರೆ.

ಈ ಸಮಾಜ ಕಲ್ಯಾಣ ಶಾಖೆಯಲ್ಲಿ ಆಗಬೇಕಾದ ಪ್ರಗತಿ ಆಗಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಈ ಯುಗ ಸಮಾಜ ಕಲ್ಯಾಣ ಮಾಡುವಂತಹ ಯುಗವಲ್ಲ. ಮಂತ್ರಿಗಳು ತಮ್ಮ ಸ್ವಂತ ಕಲ್ಯಾಣ ಮಾಡಿಕೊಳ್ಳುವ ಯುಗವಾಗಿ ಪರಿಣಮಿಸಿದೆ. ಪಂಚವಾರ್ಷಿಕ ಯೋಜನೆಗಳಿಂದ ಬರಬೇಕಾದಷ್ಟು ಲಾಭ ದೇಶಕ್ಕೆ ಇನ್ನೂ ಬಾರದೆ ಇರುವಾಗ ಅತಿ ಪ್ರಸರಣದ ಫಲವಾಗಿ ಬೆಲೆಗಳು ಏರಿಕೆ ಹೆಚ್ಚಾಗಿರುತ್ತದೆ. ಸಾಮಾನ್ಯ ಜನಗಳಿಗೆ ಹೊಟ್ಟೆಯನ್ನು ತುಂಬಿಸಿಕೊಳ್ಳುವುದು ಅಸಾಧ್ಯವಾಗಿರುವುದು. ಶ್ರೀಮಂತರಾಗಿರುವವರು ಅನುಕೂಲ ಪರಿಸ್ಥಿತಿ ಇರುವುದರಿಂದ ಭ್ರಷ್ಟಾಚಾರಿಗಳಾದ ರಾಜಕೀಯಸ್ಥರು ಭ್ರಷ್ಟಾಚಾರಿಗಳಾದ ವ್ಯಾಪಾರಸ್ಥರು ಭ್ರಷ್ಟಾಚಾರಿಗಳಾದ ಅಧಿಕಾರಿಗಳು ಅತಿ ಪ್ರಸರಣಕ್ಕೆ ಅವಕಾಶ ಮಾಡುತ್ತಿದ್ದಾರೆ. ಈ ಸಮಾಜದಲ್ಲಿ ಒಂದು ಅಸ್ತವ್ಯಸ್ಥ ಪರಿಸ್ಥಿತಿ ಉಂಟಾಗಿದೆ. ಮಂದಿ ಅಧಿಕಾರದಲ್ಲಿರಲಿ, ವ್ಯಾಪಾರದಲ್ಲಿರಲಿ ಯಾವುದಾದರೂ ಒಂದು ಉದ್ಯೋಗದಲ್ಲಿರತಕ್ಕ ಮಂದಿ ಇರಲಿ, ಸ್ವಂತ ಲಾಭಕ್ಕೋಸ್ಕರ ಯೋಗ್ಯನಿರಲಿ ಅಯೋಗ್ಯನಿರಲಿ ಧನವನ್ನು ಗಳಿಸುವ ಮನೋಭಾವನೆ ಇರುವುದರಿಂದ ಸಮಾಜ ಕಲ್ಯಾಣ ಮಾಡಬೇಕು, ಸಮಾಜ ಕಲ್ಯಾಣ ಆಗಬೇಕು ಎಂಬ ಭಾವನೆ ದೇಶದಲ್ಲಿ ಕಡಿಮೆ ಯಾಗುತ್ತಾ ಇರುವಾಗ ಸಮಾಜ ಕಲ್ಯಾಣವಾಗುವುದು ಸ್ವಲ್ಪ ಕಷ್ಟವಾಗಿದೆ. ಸಮಾಜ ಕಲ್ಯಾಣ ಶಾಖೆಯನ್ನು ಸರ್ಕಾರದವರು ನಡೆಸುತ್ತಾ ಇರುವುದರಿಂದ ಹಿಂದುಳಿದ ನಿಮ್ಮ ವರ್ಗದ ಸಮಾಜದ ಸಲುವಾಗಿ ಸರ್ಕಾರ ಎಷ್ಟೋ ಲಕ್ಷ ರೂಪಾಯಿಗಳನ್ನು ಕೋಟಿಗಟ್ಟಲೇ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಈ ಬಾಬಿಗೆ ಖರ್ಚು ಮಾಡತಕ್ಕಂಥ ಹಣವನ್ನು ಅಧಿಕಾರಿಗಳ ಕೈಯ್ಯಲ್ಲಿ, ಸಮಾಜದ ಮುಖಂಡರ ಕೈಯ್ಯಲ್ಲಿ ಕೊಟ್ಟು ಅವರ ಅಭಿವೃದ್ಧಿಯ ಸಲುವಾಗಿ ಸಂಘಟನೆ ಮಾಡಿ, ನಿಮ್ಮ ವರ್ಗದವರ ಸಹಕಾರ ಸಂಘಗಳನ್ನು ನಿರ್ಮಾಣ ಮಾಡಿದರೂ ಕೂಡ ಅವುಗಳನ್ನು ಕಾರ್ಯಗತ ಮಾಡುವ ವ್ಯಕ್ತಿಗಳು ಕಲಿತವರು ಮತ್ತು ಮೇಲ್ಮಟ್ಟದ ಜನಗಳು ಇರುವಾಗ ಅವರು ಹೆಚ್ಚಿನ ಲಾಭವನ್ನು ಪಡೆದು ಕೊಂಡು ದುಡಿಯುತ್ತಾ ನಿಮ್ಮ ವರ್ಗದ ಜನಗಳಿಗೆ ಅದರ ಫಲ ಸಿಕ್ಕರೆ ಅವುಗಳ ಸಂಚಾಲನೆ ಮಾಡುವ ವ್ಯಕ್ತಿಗಳು ಸ್ವಾರ್ಥ ಸಾಧನೆ ಮಾಡಿಕೊಳ್ಳುತ್ತಿದ್ದಾರೆ, ಎನ್ನುವ ಮಾತನ್ನ ನಾನು ಈ ಸಭೆಯ ಗಮನಕ್ಕೆ ತರುತ್ತೇನೆ. ಇದು ಸ್ವಾರ್ಥಸಾಧನೆಯ ಯುಗ ಎಂದು ಹೇಳುತ್ತಾ ಇರುವಾಗ ಎಷ್ಟೋ ಜನ ಗಾಂಧಿ ತತ್ವವನ್ನು ಹೇಳುತ್ತಿರುವುದನ್ನು ಕಂಡು

(ಶ್ರೀ ಕೆ. ಪಿ. ನಾಡಗೌಡ)

ಬರುತ್ತಿದೆ. ದೇಶದ ಹಿತದೃಷ್ಟಿಯಿಂದ ನಾವು ಯಾವುದೇ ಒಳ್ಳೆಯ ಕಾರ್ಯಗಳನ್ನು ಸಾಧಿಸಬೇಕು ಎಂದು ಲಕ್ಷ್ಯ ಪೂರ್ವಕವಾಗಿ ಕೆಲಸ ಮಾಡುತ್ತಿಲ್ಲ. ಈಗ ಮಂತ್ರಿಗಳ ಕುಟುಂಬದವರು ಅಪ್ತರು ಇಂಥವರೇ ದೊಡ್ಡ ದೊಡ್ಡ ಕಂಟ್ರಾಕ್ಟರುಗಳಾಗಿ ಹಣವನ್ನು ಗಳಿಸುತ್ತಿದ್ದಾರೆ. ಎನ್ನುವ ಮಾತು ಕೇಳಿ ಬರುತ್ತಿದೆ. ಸಾಮಾಜಿಕ ಕಾರ್ಯವನ್ನು, ನಿಮ್ಮ ವರ್ಗದವರ ಅಭಿವೃದ್ಧಿಯನ್ನು ಸಾಧಿಸಬೇಕು ಎಂದು ಸರ್ಕಾರ ಯೋಚನೆ ಮಾಡಿದರೂ ಕೂಡ ಅದನ್ನು ನಡೆಸಿಕೊಂಡು ಹೋಗುವುದರಲ್ಲಿ ಸಮಾಜದ ಸೇವೆಯನ್ನು ಮಾಡುವ ಭಾವನೆಯಿಂದ ಇರುವುದಿಲ್ಲ, ಜನಗಳು ಸಿಕ್ಕಿದಷ್ಟನ್ನು ದುರ್ಲಾಭ ಪಡೆಯಬೇಕು ಎಂದು ಆಲೋಚನೆ ಮಾಡುತ್ತಿದ್ದಾರೆ. ಗಾಂಧೀಜಿಯವರು ಸಮಾಜದ ಹಿತದೃಷ್ಟಿಯಿಂದ ತ್ಯಾಗ ಭಾವನೆಯಿಂದ ಸಮಾಜದ ಸೇವೆಯನ್ನು ಮಾಡುತ್ತಾ ಇರುವಾಗ ಎಷ್ಟೋ ಜನ ಸಮಾಜ ಕಾರ್ಯ ಕರ್ತರು ದೇಶದಲ್ಲಿ ಇದ್ದರು. ಸ್ವಾತಂತ್ರ್ಯಾನಂತರ ಸಾಮಾಜಿಕ ಕಾರ್ಯಕರ್ತರ ಸಂಖ್ಯೆ ಕಡಿಮೆಯಾಗುತ್ತಿದೆ. ಇವುದ್ದರಲ್ಲಿ ಶ್ರೀ ವಿನೋಬಾಭಾವೆಯವರ ಆಂಧೋಳನದಲ್ಲಿ ಕೆಲವು ದೊಡ್ಡ ಮಹನೀಯರು ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ನಿಮ್ಮ ವರ್ಗದವರನ್ನು ಉದ್ಧಾರ ಮಾಡಿದರೆ ಸಮಾಜಕ್ಕೆ ಮತ್ತು ದೇಶಕ್ಕೆ ಹಿತವಾಗುವ ಕಾರ್ಯಗಳು ಆಗುತ್ತದೆ. ಎನ್ನುವ ಮಾತನ್ನು ನಾನು ಸರ್ಕಾರದವರದಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಯಾರಿಗೆ ನಿಮ್ಮ ವರ್ಗದವರ ಅಭಿವೃದ್ಧಿಯ ವಿಚಾರದಲ್ಲಿ ಆಸಕ್ತಿ ಇದೆಯೋ, ಯಾರಿಗೆ ಸಮಾಜದ ಸೇವೆಯನ್ನು ಮಾಡುವುದರಲ್ಲಿ ಆಸಕ್ತಿ ಇದೆಯೋ ಅಂಥವರ ಕೈಯ್ಯಲ್ಲಿ ಖರ್ಚುಮಾಡಬೇಕೆಂದಿರುವ ಹಣವನ್ನು ಕೊಟ್ಟರೆ, ನಿಮ್ಮ ವರ್ಗದವರ ಅಭಿವೃದ್ಧಿಯಾಗುತ್ತದೆ ಎಂದು ನಾನು ಈ ಸಭೆಯ ಗಮನಕ್ಕೆ ತರುತ್ತೇನೆ. ಮಂತ್ರಿಗಳೂ ಕೂಡ ಯಾವ ಕೆಲಸವನ್ನು ಯಾವ ರೀತಿ ಮಾಡಬೇಕೆಂದು ಸ್ವಲ್ಪ ಆಲೋಚನೆ ಮಾಡಬೇಕು. ಯಾವ ಸಂಸ್ಥೆಯಲ್ಲಿ ಯಾವ ಲೋಪದೋಷಗಳಿವೆ ಎನ್ನುವುದನ್ನು ತಿಳಿದುಕೊಳ್ಳದೆ ಕೆಲಸ ಮಾಡುವುದಾದರೆ ಕೇವಲ ದುಡ್ಡಿಗೋಸ್ಕರ ಮಂತ್ರಿಗಳು ಆ ಜಾಗದಲ್ಲಿ ಬಂದಿದ್ದಾರೆ, ಅಹಿಷ ಆರಾಮಕ್ಕಾಗಿ ಆ ಜಾಗದಲ್ಲಿ ಬಂದಿದ್ದಾರೆ ಎಂದು ಜನತೆ ತಿಳಿದುಕೊಳ್ಳುತ್ತಾರೆ. ದೇಶ ಉದ್ಧಾರವಾಗಬೇಕು, ಸಮಾಜ ಉದ್ಧಾರವಾಗಬೇಕು ಎನ್ನುವ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಲು ಸಂಸ್ಥೆಯ ಉದ್ದೇಶವನ್ನು ಇಟ್ಟು ಕೆಲಸ ಮಾಡುತ್ತಿದ್ದಾರೆಯೇ ಎಂದು ಸಂಸ್ಥೆಯ ಉದ್ದೇಶವನ್ನು ಒಳ ಹೊಕ್ಕು ನೋಡಿದಾಗ ಸ್ವಾರ್ಥಿಗಳ ಕೈಯಲ್ಲಿ ಅಧಿಕಾರ ಹೋಗಿದೆ ಎಂಬುದು ಕಂಡುಬರುತ್ತದೆ. ಈಗ ಸ್ವಾರ್ಥಿಗಳಿಗೆ ಲಾಭವಾಗುತ್ತಿದೆ ಎನ್ನುವ ಮಾತನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಅವುಗಳನ್ನು ಸರಿಪಡಿಸಿ ಯೋಗ್ಯ ಮಾರ್ಗವನ್ನು ಅನುಸರಿಸಿಕೊಂಡು ಯಾವ ದುಡ್ಡು ವ್ಯರ್ಥವಾಗಿ ಖರ್ಚಾಗದೆ ಯಾವ ಕಾರ್ಯಕ್ಕಾಗಿ ಯಾವ ದುಡ್ಡನ್ನು ಒದಗಿಸಿದ್ದಾರೆಯೋ ಅದನ್ನು ಆಯಾ ಕಾರ್ಯಕ್ಕೇ ಖರ್ಚು ಮಾಡಿದರೆ ಅದು ಸಾರ್ಥಕವಾಗುತ್ತದೆ ಎನ್ನುವ ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಸಮಾಜ ಕಲ್ಯಾಣ ಶಾಖೆಗೆ ಸಂಬಂಧಪಟ್ಟ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡಬೇಕೆಂದು ಅಪೇಕ್ಷೆ ಮಾಡುತ್ತೇನೆ. ಸೋಷಿಯಲ್ ವೆಲ್‌ಫೇರ್ ಇಲಾಖೆಯ ಬಗ್ಗೆ ನನ್ನ ಅನುಭವಕ್ಕೆ ಬಂದ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಅಪೇಕ್ಷೆ ಮಾಡುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯವರೆಗೂ ನಾನು ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಕೆಲಸ ಮಾಡಿದ್ದೇನೆ. ಮತ್ತು ಈಗ ಕೂಡ ಬೋರ್ಡಿನ ಮೆಂಬರಾಗಿದ್ದೇನೆ. ನಮ್ಮ ಕಡೆ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕೋಸ್ಕರ ಮಹಿಳಾ ಮಂಡಲಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದುವು. ಪೂರ್ತಿ ಗ್ರಾಂಟ್ ಸಿಕ್ಕುತ್ತಿತ್ತು. ಪ್ರತಿಯೊಂದು ಬ್ಲಾಕಿಗೂ 10 ಮಹಿಳಾ ಮಂಡಲಿಗಳು ಕಲಸ ಮಾಡುತ್ತಿದ್ದವು ಪ್ರತಿಯೊಂದಕ್ಕೂ ಬಿ.ಡಿ.ಓ.ಗಳ ಕಂಟ್ರೋಲ್ ಇತ್ತು. ಕಮಿಟಿಗಳು ಇದ್ದವು. ನಿಗಾವಣಿ ಚೆನ್ನಾಗಿತ್ತು. ಪ್ರತಿಯೊಂದು ಕೇಂದ್ರದಲ್ಲಿಯೂ ಕೂಡ ಮುಖ್ಯ ಸೇವಿಕಿಯರು, ತಾಲ್ಲೂಕು ಲೆವೆಲ್‌ನಲ್ಲಿ ಗ್ರಾಮ ಸೇವಕಿಯರು ಇದ್ದರು. ಮಹಿಳಾ ಮಂಡಲಿಗಳು ಇದ್ದವು. ಕ್ರಾಫ್ಟ್ ಸೆಂಟರುಗಳನ್ನು ಶಿಶುವಿಹಾರಗಳನ್ನು ಚೆನ್ನಾಗಿ ನಡೆಸಿಕೊಂಡು ಬಂದುವು. ಎರಡನೆಯ ಪಂಚವಾರ್ಷಿಕ ಯೋಜನೆಯ ಅನಂತರ ಮಹಿಳಾ ಮಂಡಲಿಗಳನ್ನು ರದ್ದು ಮಾಡಬೇಕು. ವಾಲಂಟರಿ ಇನ್ಸ್ಟಿಟ್ಯೂಷನ್ಸ್ ರಿಜಿಸ್ಟರ್ ಮಾಡಬೇಕು ಎಂದು ಆದೇಶ ಬಂತು. ಈ ಮಹಿಳಾ ಮಂಡಲಿಗಳನ್ನು ರಿಜಿಸ್ಟರ್ ಮಾಡಿಸಬೇಕು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಗ್ರಾಂಟ್ ಇನ್ ಏಯ್ಡ್ ರೂಲ್ಸ್ ಪ್ರಕಾರ ಗ್ರಾಂಟ್ ಕೊಡಬೇಕು ಅವರು ಆ ಮಂಡಲಿಗಳನ್ನು ನಡೆಸಬೇಕು ಎಂದು ಅಭಿಪ್ರಾಯ ಪಟ್ಟರು. ನಮ್ಮ ಮೂರು ಜಿಲ್ಲೆಗಳಲ್ಲಿಯೂ ಮಹಿಳಾ ಮಂಡಲಿಗಳು 50 ಪರ್ಸೆಂಟ್ ಮ್ಯಾಚಿಂಗ್ ಗ್ರಾಂಟ್ ಕೊಡಬೇಕು ಎನ್ನುವ ನಿಯಮ ಬಂತು. ನನ್ನ ಒಂದು ಏಳು ಎಂಟು ವರ್ಷಗಳ ಅನುಭವದಲ್ಲಿ ಹೇಳಬೇಕಾಗಿದ್ದರೆ ಅಲ್ಲಿ ಮಹಿಳಾ ಮಂಡಲಿಗಳು ಶಕ್ತಿ ಮೀರಿ

ಕೆಲಸ ಮಾಡಿವೆ. ಯಾವಾಗ ಈ ರೀತಿ ಸರ್ಕಾರದವರು ಮಹಿಳಾ ಮಂಡಲಿಗಳನ್ನು ರಿಜಿಸ್ಟರ್ ಮಾಡಬೇಕು 50 ಪರ್ಸೆಂಟ್ ಹಣವನ್ನು ಮ್ಯಾಚಿಂಗ್ ಮಾಡಬೇಕೆಂದು ಒಂದು ನಿಯಮವನ್ನು ಮಾಡಿದರೋ ಅದರಿಂದ ಆ ಮಹಿಳಾ ಮಂಡಲಿಗಳೆಲ್ಲವೂ ಮುಚ್ಚುವ ಪರಿಸ್ಥಿತಿ ಬಂದಿದೆ. ಸರ್ಕಾರದವರು ಕೊಡತಕ್ಕ ಗ್ರ್ಯಾಂಟ್ ಸಿಕ್ಕುವುದಿಲ್ಲ ಮ್ಯಾಚಿಂಗ್ ಮಾಡಬೇಕು ಹೀಗಿರುವಾಗ ಎಲ್ಲಾ ಜಿಲ್ಲೆಗಳಲ್ಲಿಯೂ, ಎಲ್ಲಾ ಕಡೆಗಳಲ್ಲಿಯೂ ವಿದ್ಯಾಭ್ಯಾಸಕ್ಕಾಗಿ ಬಲಾತ್ಕಾರವಾಗಿ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬರಬೇಕು, ಸಣ್ಣ ಸಣ್ಣ ಮಕ್ಕಳಿಗೆ ಶಿಶುವಿಹಾರಗಳನ್ನು ನಡೆಸಬೇಕು, ಕ್ರಾಫ್ಟ್ ಸೆಂಟರುಗಳನ್ನು ಮಾಡಿ ಅವುಗಳನ್ನು ನಡೆಸಿಕೊಂಡು ಹೋಗಬೇಕು ಎಂದರೆ ಮಹಿಳಾ ಮಂಡಲಿಗಳು ಈ ಕೆಲಸವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ವಾಲಂಟಿಯರ್ ಆಗಿ ನಾವೇ ಹೋಗಿ ಕರೆದುಕೊಂಡು ಬಂದರೂ ಬಾರದೇ ಇರುವ ಹೆಣ್ಣು ಮಕ್ಕಳು ದುಡು ಕೊಟ್ಟು ಬನ್ನಿ ಎಂದರೆ ಯಾರು ಬರುತ್ತಾರೆ? ಇದರಿಂದಾಗಿ ಮಹಿಳಾ ಮಂಡಲಿಗಳ ಚಟುವಟಿಕೆಗಳು ನಡೆಯುತ್ತಿಲ್ಲ. ಯಾವ ಕೇಂದ್ರದಲ್ಲೂ ಕೂಡ ಗ್ರಾಮ ಸೇವಕಿಯರು ಮತ್ತು ಮುಖ್ಯ ಸೇವಕಿಯರು ಇಲ್ಲ. ಮಹಿಳಾ ಕಾರ್ಯ ಕರ್ತರೂ ನಿಂತುಹೋಗಿದ್ದಾರೆ. ದಯವಿಟ್ಟು ಇದನ್ನು ಸರಕಾರದವರು ಪರಿಶೀಲನೆ ಮಾಡಬೇಕು. ಈಗ ಗ್ರ್ಯಾಂಟ್ ಏನಿದ್ದರೂ ಅರ್ಬನ್ ಏರಿಯಾಕ್ಕೆ ಮಾತ್ರ ಸಿಕ್ಕುತ್ತದೆ. ರೂರಲ್ ಏರಿಯಾಕ್ಕೆ ಸಿಕ್ಕುವುದಿಲ್ಲ ಅದರಿಂದ ರೂರಲ್ ಏರಿಯಾಕ್ಕೆ ಈ ಗ್ರ್ಯಾಂಟಿನಿಂದ ಉಪಕಾರವಾಗುವುದಿಲ್ಲ. ಇದರ ಸಲುವಾಗಿ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳೇ ನೇರವಾಗಿ ಇದನ್ನು ವಹಿಸಿಕೊಂಡು ಅವರ ಮೂಲಕವೇ ಮಹಿಳಾ ಮಂಡಲಿಗಳಿಗೆ ಪೂರ್ತಿ ಗ್ರ್ಯಾಂಟ್ ಕೊಟ್ಟು ಮಹಿಳಾ ಮಂಡಲಿಗಳು ತಮ್ಮ ಮುಂದಿನ ಕಾರ್ಯ ಕ್ರಮವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದರೆ ಚೆನ್ನಾಗಿರುತ್ತದೆ ಎಂದು ನಾನು ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಹರಿಜನರ ಗಿರಿಜನರ ಮನೆಗಳ ವಿಷಯವಾಗಿ ಕೆಲವು ಸದಸ್ಯರು ಪ್ರಸ್ತಾಪ ಮಾಡಿದರು. ಹರಿಜನರ ಮನೆಗಳು ಹರಕು ಮುರಕು ಕಲಸವಾಗಿದೆ. ಒಂದು ತಾಲ್ಲೂಕಿನವರಿಗೆ ಮನೆ ಕಟ್ಟಲು ಹಣ ಸಿಕ್ಕಿದೆ. ಇನ್ನೊಂದು ತಾಲ್ಲೂಕಿನಲ್ಲಿ ಅವರಿಗೆ ಮನೆ ಕಟ್ಟಲು ಹಣ ಸಿಕ್ಕಿಲ್ಲ. ಇದರಿಂದ ತುಂಬಾ ಜನರಿಗೆ ಅನಾನುಕೂಲವಾಗಿದೆ. ಹಿಂದಕ್ಕೆ ಕೊಡುತ್ತಿದ್ದ 400 ರೂಪಾಯಿ ಕೆಲವರಿಗೆ ಸಿಕ್ಕಿದೆ. ಆದರೆ ಈಗ ಸೊಸೈಟಿ ಮಾಡಿ ಆದರ ಮೂಲಕ ಸಾಲ ಕೊಡುವ ವ್ಯವಸ್ಥೆ ಮಾಡಿದ ಮೇಲೆ ಕೆಲವರಿಗೆ ಹಣ ಸಿಕ್ಕಿದೆ ಕೆಲವರಿಗೆ ಸಿಕ್ಕಿಲ್ಲ. ನಾನು ಸೂಚಿಸುವುದು ಏನೆಂದರೆ ಮನೆ ಕಟ್ಟಲು ಇರತಕ್ಕ ಈ ಹಣವನ್ನು ಅವರಿಗೋಸ್ಕರ ಮೀಸಲಾಗಿಇಡಬೇಕು. ಅನೇಕ ಸಲ ಅವರಿಗೆ ಹಣ ಕೊಟ್ಟರೂ ಕೂಡ ಅವರಿಗೆ ಜಾಗ ಸಿಕ್ಕುವುದಿಲ್ಲ, ಮನೆ ಕಟ್ಟತಕ್ಕ ಸ್ಥಳದ ಅಕ್ಕಪಕ್ಕದ ಜಮೀನು ಅಕ್ವೈಯರ್ ಮಾಡಬೇಕಾಗುತ್ತದೆ. ಖರೀದಿ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಜಮೀನು ಅಕ್ವೈಯರ್ ಮಾಡುವುದು ಕೂಡ ಸಾಧ್ಯವಾಗುವುದಿಲ್ಲ. ಸಂದರ್ಭ ಹೀಗೆ ಇರುವುದರಿಂದ ಹಣ ಮಂಜೂರ ಆಗಿದ್ದರೂ ಕೂಡ ಅವರಿಗೆ ಮನೆ ಕಟ್ಟಲು ಸಾಧ್ಯವಾಗಿಲ್ಲ. ಹರಿಜನರ ಮನೆಗಳನ್ನು ಕಟ್ಟುವುದಕ್ಕಾಗಿ ನಿರ್ದಿಷ್ಟವಾಗಿ ಒಂದು ಎಕರೆ ಜಮೀನು—ಅದು ಸರಕಾರಿ ಜಮೀನು ಇರಲೀ, ಪ್ರೈವೇಟ್ ಜಮೀನು ಇರಲಿ—ಮೀಸಲಾಗಿ ಇಟ್ಟು ಆದನ್ನು ಅಕ್ವೈಯರ್ ಮಾಡಿಕೊಂಡರೆ ಈ ಮನೆ ಕಟ್ಟುವ ಸ್ಕೀಂ ಯಶಸ್ವಿಯಾಗುತ್ತದೆ. ಅವರಿಗೆ ಕೇವಲ ದುಡ್ಡುಕೊಟ್ಟರೂ ಸಹ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ಇನ್ನು ಅಬಾಲಿಷನ್ ಆಫ್ ವೇರಿಯಸ್ ಎಕನಾಮಿಕ್ ಡೆವಲಪ್ಮೆಂಟ್ ಅಂಡ್ ಆದರ್ ಸ್ಕೀಮ್ಸ್ ಈ ಯೋಜನೆಯ ಮೂಲಕ ಕೆಲವು ಬಾಬುಗಳಿಗೆ ದುಡ್ಡು ಕೊಡುತ್ತೀರಿ. ಸಾಮಾನ್ಯವಾಗಿ ಕುರಿ ಸಾಕುವುದಕ್ಕೆ, ನೇಗಿಲು, ಎತ್ತು ಬಂಡಿ ಕೊಂಡುಕೊಳ್ಳುವುದಕ್ಕೆ ಇಂಥ ಸಣ್ಣ ಸಣ್ಣ ಬಾಬುಗಳಿಗೆ ಆರ್ಥಿಕ ನೆರವು ಕೊಡುವ ಉದ್ದೇಶದಿಂದ ದುಡ್ಡು ಕೊಡುತ್ತೀರಿ. ಆದರೆ ಈ ದುಡ್ಡು ಅವರಿಗೆ ಮುಟ್ಟುವುದಿಲ್ಲ. ಈ ದುಡ್ಡು ಪಡೆಯುವುದಕ್ಕಾಗಿ ಅವರ ಹೆಸರಿನಲ್ಲಿ ರಸೀದಿ ಮಾಡಿಸಿಕೊಂಡು ಪ್ರಭಾವಶಾಲಿಗಳು ಹಣ ಪಡೆದುಕೊಂಡು ಅದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಪ್ರಭಾವಶಾಲಿಗಳ ಕೈ ಸೇರುತ್ತದೆ. ಅವರಿಗೆ ಹಣ ದೊರೆಯುವುದಿಲ್ಲ. ಇದಲ್ಲದೆ ಒಬ್ಬಿಬ್ಬರಿಗೆ ಮಾತ್ರ ಹಣ ಕೊಡಲಾಗುತ್ತದೆ. ಆದರೆ ಒಂದು ತಾಲ್ಲೂಕಿನಲ್ಲಿ ಸಾವಿರಾರು ಅರ್ಜಿಗಳು ಬಂದಿರುತ್ತವೆ. ಇದನ್ನು ಯಾರಿಗೆ ಕೊಡಬೇಕು ಯಾರಿಗೆ ಕೊಡಬಾರದು ಎಂಬ ಸಂಶಯ ಬರುತ್ತದೆ. ಆದುದರಿಂದ ಇಂಥ ಸಣ್ಣ ಸಣ್ಣ ಸ್ಕೀಂಗಳನ್ನು ರದ್ದು ಮಾಡಿ ಬಿಟ್ಟು ಅವರ ಏಳಿಗೆಗಾಗಿ ಇರತಕ್ಕಂಥ ಹಾಸ್ಟೆಲ್‌ಗಳಿಗೆ ಈ ಧನ ಸಹಾಯ ಕೊಡಬೇಕು. ಹಾಸ್ಟೆಲುಗಳಲ್ಲಿ ಇದ್ದು ವಿದ್ಯಾಭ್ಯಾಸ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ಒಳ್ಳೇ ಆಹಾರ, ಒಳ್ಳೇ ಬಟ್ಟೆ ದೊರಕಿಸಿ ಕೊಡುವುದಕ್ಕೆ ಹಣ ಹೆಚ್ಚು ಮಾಡಬೇಕು. ಹಣ ದುರುಪಯೋಗ ಮಾಡತಕ್ಕಂಥ ಸ್ಕೀಮುಗಳನ್ನು ಮಾಡಬೇಡಿ ಎಂದು ಸರಕಾರಕ್ಕೆ ಹೇಳಬಯಸುತ್ತೇನೆ.

ಸರಕಾರದವರು ದರಖಾಸ್ತು ರೂಲ್ಸ್ ಅಳವಡಿಸಿಕೊಂಡು ಹಿಂದುಳಿದವರಿಗೆ ಭೂಮಿಕೊಡುತ್ತಾರೆ ಈ ಯೋಜನೆಯಿಂದ ಅನೇಕ ಹರಿಜನರು ಭೂಮಿ ಪಡೆದಿದ್ದಾರೆ. ಆದರೆ ಬಹು ಜನರು ಇವತ್ತಿನ

(ಶ್ರೀಮತಿ ಬಸವರಾಜೇಶ್ವರಿ)

ದಿವಸ ತಹಶೀಲದಾರರ ಕಚೇರಿ ಮುಂದೆ ಅಲೆಯುತ್ತಿದ್ದಾರೆ. ಈ ಭೂಮಿ ಬಗ್ಗೆ ಅವರಿಗೆ ಕಬ್ಜಾ ಇದ್ದರೂ ಕೂಡ ಪಟ್ಟಾ ಆಗಿರುವುದಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಪ್ರಭಾವಶಾಲಿಯಾದವರ ಕೈವಾಡದಿಂದ ಅವರಿಗೆ ಪಟ್ಟಾ ಸಿಕ್ಕುವುದಿಲ್ಲ. ಅನ್-ಅಥರೈಜ್ಡ್ ಕಲ್ಟಿವೇಷನ್ ಮಾಡಿದ್ದಾರೆಂದು ಅವರ ಕಡೆಯಿಂದ ಎರಡು ಮೂರು ಪಟ್ಟು ತವಾನಾ ವಸೂಲ್ಮಾಡುತ್ತಿದ್ದಾರೆ. ಅಂಥವರು ನಮ್ಮ ಕಡೆ ಬರುತ್ತಾರೆ. ಅದುದರಿಂದ ನಾನು ಸೂಚಿಸುವುದೇನೆಂದರೆ ಯಾರಾದರೂ ಮೂರು ವರ್ಷ ಸಾಗುವಳಿ ಮಾಡಿದ್ದರೆ ಅವರ ರಿಕಾರ್ಡು ತರಿಸಿ ಅವರ ಹೆಸರಿಗೆ ಪಟ್ಟಾ ಮಾಡಿಕೊಟ್ಟು ಅವರ ತೊಂದರೆ ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸದಸ್ಯರಾದಂಥ ಶ್ರೀಮಾನ್ ಜೈ ಪ್ರಕಾಶ್ ನಾರಾಯಣರವರು, ಅರಕೆರೆಯವರು ಮಾತನಾಡುವಾಗ್ಗೆ ಹೇಳಿದ್ದೇನೆಂದರೆ ಹರಿಜನರ ಕಲ್ಯಾಣಕಾಗಿ ಏನೂ ಹಣ ಖರ್ಚು ಮಾಡಿಲ್ಲ, ಪ್ಲಾನಿನಲ್ಲಿ ಕೊಟ್ಟಂಥ ಹಣ ಲ್ಯಾಪ್ಸ್ ಆಗಿದೆ ಎಂದು ಹೇಳಿದರು. ಅವರು ಹೇಳಿದ್ದು ಸಮರ್ಪಕ ವಾಗಿಲ್ಲ ಎಂಬುದು ನಾನು ಅಂಕಿಅಂಶಗಳನ್ನು ಹೇಳಿದ ಮೇಲೆ ಗೊತ್ತಾಗುತ್ತದೆ. ಹರಿಜನರ ಕಲ್ಯಾಣಕ್ಕಾಗಿ ಎಷ್ಟು ಹಣ ಖರ್ಚು ಮಾಡಿದೆ ಎಂಬುದನ್ನು ಹೇಳುತ್ತೇನೆ. ಈ ಅಂಕಿಅಂಶಗಳನ್ನು ಅವರ ಗಮನಕ್ಕೆ ತಂದರೆ ಅವರಿಗೆ ತೃಪ್ತಿಯಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಸೆಕೆಂಡ್ ಪ್ಲಾನ್ ಒಟ್ಟಲ್ಲೇ 3,83,48,000 ರೂಪಾಯಿಯಲ್ಲಿ 3,58,25,180 ಖರ್ಚು ಮಾಡಿದ್ದಾರೆ. ವಿವರಗಳನ್ನು ಬೇಕಾದರೆ ಪ್ರತಿಯೊಂದು ಬಾಬಿಗೆ ಹೇಳಬಹುದು.

ಸೆಕೆಂಡ್ ಪ್ಲಾನ್	ಹಣ ಒದಗಿಸಿದ್ದು	ಹಣ ಖರ್ಚುಮಾಡಿದ್ದು
ಎಜ್ಯುಕೇಷನ್	46,68,000	63,43,077
ಎಕನಾಮಿಕ್ ಅಪ್ ಲಿಫ್ಟ್‌ಮೆಂಟ್	48,57,500	42,62,000
ಹೆಲ್ತ್ ಹೌಸಿಂಗ್ ಅಂಡ್ ಅದರ್ ಸ್ಕೀಂಮ್ಸ್	2,88,22,500	2,52,20,100
ಥರ್ಡ್ ಪ್ಲಾನ್		
ಎಜ್ಯುಕೇಷನ್	2,08,48,000	1,65,27,000
ಎಕನಾಮಿಕ್ ಅಪ್ ಲಿಫ್ಟ್‌ಮೆಂಟ್	1,26,93,000	73,86,000
ಹೆಲ್ತ್ ಹೌಸಿಂಗ್ ಅಂಡ್ ಅದರ್ ಸ್ಕೀಂಮ್	1,46,45,000	1,02,61,800
ಫೋರ್ಥ್ ಪ್ಲಾನ್		
1966-67 ನಲ್ಲಿ ಎಜ್ಯುಕೇಶನ್	83,77,000	62,00,000

ಅವರ ಉದ್ಧಾರವಾಗಿಲ್ಲ, ಸರಕಾರ ಗಮನ ಕೊಟ್ಟಿಲ್ಲ ಎಂದು ಆಪಾದಿಸುವವರು ಈ ಅಂಕಿ ಅಂಶ ಗಳನ್ನು ನೋಡಿದರೆ ಅವರಿಗೆ ತೃಪ್ತಿಯಾಗಬಹುದು.

ಶ್ರೀ ಕೆ. ಎಚ್. ಪಾಟೀಲ್.—ಹಣ ಖರ್ಚು ಆಗಿದೆ. ಆದರೆ ಉಪಯೋಗವಾಗಿದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಹಣ ಖರ್ಚು ಆದ ಹಾಗೆ ಅವರ ಉದ್ಧಾರವಾಗುತ್ತಾ ಇದೆ. ಇನ್ನೂ ಹೆಚ್ಚು ಉದ್ಧಾರವಾಗುವುದಕ್ಕೆ ರಚನಾತ್ಮಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಡಬೇಕು.

ಶ್ರೀಮತಿ ನಾಗಮ್ಮ.—ಸ್ವಾತಂತ್ರ್ಯ ಬಂದು 20 ವರ್ಷವಾಯಿತು. 20 ವರ್ಷ ಹಣ ಖರ್ಚಾಗಿದೆ. ಆದರೆ ಹರಿಜನ ಉದ್ಧಾರವಾಗಿಲ್ಲ. ಇನ್ನು ಎಷ್ಟು ವರ್ಷದಲ್ಲಿ ಅವರ ಉದ್ಧಾರ ಮಾಡುತ್ತೀರಿ ?

ಶ್ರೀಮತಿ ಬಸವರಾಜೇಶ್ವರಿ.—ಸ್ವಲ್ಪ ಸ್ವಲ್ಪ ಮಟ್ಟದಲ್ಲಿ ಅವರ ಉದ್ಧಾರವಾಗುತ್ತಾ ಇದೆ.

ಕೊನೆಯದಾಗಿ ಒಂದು ವಿಷಯ ಪ್ರಸ್ತಾಪ ಮಾಡಿ ನನ್ನ ಮಾತು ಮುಗಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಅರಕೇರಿಯವರು ಮಾತನಾಡುತ್ತಾ ಉತ್ತರ ಕರ್ನಾಟಕದ ಮೂರು ಜಿಲ್ಲೆಯ ಹರಿಜನರಲ್ಲಿಯ ಅನೀತಿ ಪದ್ಧತಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಬಹಳ ಕಳಕಳಿಯಿಂದ

ಈ ವಿಚಾರ ಹೇಳಬೇಕಾಗುತ್ತದೆ. ನಮ್ಮ ಹೈದರಾಬಾದ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಸಹ ಈ ಅನೀತಿ ಪದ್ಧತಿ ಇದೆ. ದೇವದಾಸಿ ಪದ್ಧತಿ. ವೇಶ್ಯಾವೃತ್ತಿ ಬೆಳೆಯುತ್ತಿದೆ. ವೇಶ್ಯಾವೃತ್ತಿ ಬೆಳೆಯುವುದಕ್ಕೆ ಬಸವಿ ಬಿಡುವ ಪದ್ಧತಿ ಆಚರಣೆಯಲ್ಲಿದೆ. ಇದನ್ನು ತಡೆಗಟ್ಟುವುದಕ್ಕೆ ಆಗಿಲ್ಲ. ಇದನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ.

4-30 P.M.

ಇದರಿಂದ ಆದಾಯ ಇರುವ ಕಾಲಕ್ಕೆ ಕಾಯಿದೆ ಮೂಲಕ ಅದನ್ನು ಅದನ್ನು ತಡೆಗಟ್ಟದ ಹೊರತು ಕೇವಲ ಭಾಷಣಗಳ ಮೂಲಕ ತಡೆಗಟ್ಟುವುದು ಅಸಾಧ್ಯ ಎಂದು ಕಂಡುಬರುತ್ತದೆ. ಇದನ್ನು ಮಹಿಳೆಯರಾದಂಥಹ ನಾವು ಈ ಪ್ರಜಾಪ್ರಭುತ್ವದಲ್ಲಿ ಈ ರೀತಿ ಇರುವುದನ್ನು ನೋಡಿ ನಮಗೆ ದುಃಖವಾಗುತ್ತದೆ. ದಯವಿಟ್ಟು ಕಾಯಿದೆ ಮೂಲಕ ಸರಿಯಾದಂಥಹ ತಿಳುವಳಿಕೆ ಕೊಟ್ಟು ಈ ಜನರಲ್ಲಿ ಈ ವೃತ್ತಿಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಅದನ್ನು ಮಾಡಿದರೆ ಅವರ ಉದ್ಧಾರ ಆಗುತ್ತದೆ. ಅಸ್ಪೃಶ್ಯತೆ ಎರಡನೆಯದು. ಇದು ಮೊದಲನೇ ಸೋಷಿಯಲ್ ಇವಿಲ್ ಎಂದು ನಾನು ತಿಳಿದುಕೊಂಡಿದ್ದೇನೆ. ಅನೀತಿಯುತ ಕೆಲಸವನ್ನು ಮಾಡದೇ ಇರುವಾಗ ತಕ್ಕ ಕಾರ್ಯಕ್ರಮ ಹಾಕಿಕೊಂಡು ತಡೆಗಟ್ಟಬೇಕು ಎಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಸ್ವಲ್ಪ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಯನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಸದಸ್ಯೆಯರು ಇಷ್ಟು ಸಮಯದವರೆಗೂ ಹರಿಜನೋದ್ಧಾರದ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಒಂದೆರಡು ಮಾತನ್ನು ಮಾತ್ರ ಆಡಿ ಮಿಕ್ಕ ವಿಷಯದ ಬಗ್ಗೆ ನಾನು ಹೇಳಬೇಕು ಎಂದು ಬಯಸುತ್ತೇನೆ. ನನ್ನ ಅನುಭವದಲ್ಲಿ ಸರ್ಕಾರದವರು ಇಷ್ಟೊಂದು ಹಣವನ್ನು ಹರಿಜನ ಅಭಿವೃದ್ಧಿಗಾಗಿ ಕೊಡುತ್ತಾ ಇದ್ದರೂ ಸಹ ಬಹಳ ಮಟ್ಟಿಗೆ ಹಣ ದುರುಪಯೋಗವಾಗುತ್ತಾ ಇದೆ. ಹರಿಜನ ಉದ್ಧಾರಕರು ಎನ್ನುವ ಸೋಗಿನಲ್ಲಿ ಈ ಮತದ ಮುಖಾಂತರ ಅದನ್ನು ಲಪಟಾಯಿಸುತ್ತಿದ್ದಾರೆ. ದರಖಾಸ್ತು ವಿಲೇವಾರಿ ವಿಚಾರವಾಗಿ ನಂಜನಗೂಡು, ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕುಗಳನ್ನು ನೋಡಿದರೆ ಹರಿಜನ ಅಭಿವೃದ್ಧಿಗೆ ಅನೇಕ ಕಾರ್ಯಗಳು ನಡೆದಿದ್ದರೂ ಭೂಮಿ ಕೊಟ್ಟರೂ ಯಾರೂ ಅಲ್ಲಿ ಹೋಗಿ ನೆಲಸಿಲ್ಲ. ಆದರೆ ಕಾಡು ನಾಶವಾಯಿತು. ಪಿರಿಯಾಪಟ್ಟಣ ನೋಡಿದರೆ ಹರಿಜನರ ಹೆಸರಿನಲ್ಲಿ ಅನೇಕರು ದರಖಾಸ್ತು ಭೂಮಿಗಳನ್ನು ಪಡೆದು ಖಾಸಗೀ ಸ್ವತ್ತುಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಹಂಚು, ಗಳ ಮುಂತಾದುವನ್ನು ಹರಿಜನ ಅಭಿವೃದ್ಧಿ ಕಾರ್ಯಗಳಿಗೆ ಕೊಟ್ಟ ಈ ಸಂದರ್ಭದಲ್ಲಿ ಅನೇಕ ಜನ ದಳ್ಳಾಳಿಗಳ ಸೋಗಿನಲ್ಲಿ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಇದು ಸರ್ಕಾರಕ್ಕೂ ಮನವರಿಕೆಯಾಗಿದೆ. ನಿಜವಾಗಿಯೂ ಹಣ ಹಿಂದುಳಿದ ಕೋಮಿಗೆ ಹೋಗುತ್ತಾ ಇದೆಯೋ ಎನ್ನುವುದನ್ನು ಎಚ್ಚರಿಕೆಯಿಂದ ತನಿಖೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಭಿವೃದ್ಧಿ ಆಗಬೇಕು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಇನ್ನೊಂದು ವಿಷಯ ನಾವು ಇದರಲ್ಲಿ ಗಮನ ಇಡಬೇಕು. ರಾಜ್ಯಾಂಗದಲ್ಲಿ ಹೇಳುವಂತೆ ಹರಿಜನರಿಗೆ ಗಿರಿಜನರಿಗೆ ವಿಶೇಷ ಸೌಲಭ್ಯಗಳನ್ನು ಕೊಡುವುದು ಸಹಜ. ಕೊಡಬೇಕಾದುದು ನಿಜ. ಹಿಂದುಳಿದ ಸಮಾಜದಲ್ಲಿ ಹರಿಜನಕ್ಕಿಂತಲೂ ಹಿಂದುಳಿದ ಅನೇಕ ಕೋಮುಗಳು ಇವೆ. ಉದಾಹರಣೆಗೆ ಪರಿವಾರ, ಉಪ್ಪಾರಶೆಟ್ಟಿ, ಬೆಸ್ತ, ಈಡಿಗೌಡ, ಮೇಲುಸಕ್ಕರೆಶೆಟ್ಟಿ, ಬಣಜಿಗ, ಅಕ್ಕಸಾಲೆ, ಉಪ್ಪಾರ, ದರ್ಜಿ—ಇವರನ್ನು ಸಮಗ್ರ ಹಿಂದೂ ಸಮಾಜದಲ್ಲಿ ಸೇರಿಸಿ ಯಾವ ರಕ್ಷಣೆಯನ್ನೂ ಸಹ ಅವರಿಗೆ ಕೊಡುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಒಂದು ದಿವಸ ಬರಲಿ. ನಾನು ಅವರನ್ನು ನಂಜನಗೂಡಿನ ಕಳಲೆ ಗ್ರಾಮಕ್ಕೆ ಕರೆದುಕೊಂಡು ಹೋಗುತ್ತೇನೆ. ರಸ್ತೆ ಚೆನ್ನಾಗಿದೆ, ಮನೆಗಳು ಚೆನ್ನಾಗಿವೆ, ಕುಡಿಯುವ ನೀರು ಇದೆ ಆದರೆ ದೊಡ್ಡ ಪರಿವಾರದಕೇರಿ, ಚಿಕ್ಕಪರಿವಾರದ ಕೇರಿಗೆ ಕರೆದುಕೊಂಡು ಹೋದರೆ ಅಲ್ಲಿ ಮೂಗನ್ನು ಹಿಡಿದುಕೊಂಡು ಹೋಗಬೇಕಾಗುತ್ತದೆ. ಹಾಗಿದ್ದರೂ ಇವರನ್ನು ಮುಂದುವರಿದವರು ಎಂದು ಹೇಳುತ್ತಾರೆ. ಇವರು ಹರಿಜನರು ಮತ್ತು ಗಿರಿಜನರ ಕೋಮಿಗಿಂತ ಹಿಂದುಳಿದಿದ್ದಾರೆ. ರಾಜ್ಯಾಂಗದ 304ನೆಯ ಆರ್ಟಿಕಲ್ ಪ್ರಕಾರ ನಮ್ಮ ದೇಶದ ಪ್ರೆಸಿಡೆಂಟ್ ಆದೇಶದಂತೆ ಒಂದು ಕಮೀಷನ್ ಇಲ್ಲಿಗೆ ಬರುತ್ತದೆ. ಅವರು ಅಂಕಿಅಂಶಗಳನ್ನು ಸಂಗ್ರಹಿಸುತ್ತಾರೆ. ಆಗ ಸರ್ಕಾರದವರು ನಮ್ಮ ಮುಂದೆ ಹಿಂದೂ ಸಮಾಜದಲ್ಲಿ ಉಳಿದಿರತಕ್ಕ ಕೋಮುಗಳ ಹೆಸರನ್ನು ಹೇಳಿ ಇವರಿಗೂ ಷೆಡ್ಯೂಲ್ ಟ್ರೈಬ್ಸ್‌ಗೆ ಕೊಡತಕ್ಕ ರಕ್ಷಣೆಯನ್ನು ತಾವು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ಸೋಷಿಯಾಲಜಿ

(ಶ್ರೀ ಎಲ್. ಶ್ರೀಕಂಠಯ್ಯ)

ಡಿಪಾರ್ಟ್‌ಮೆಂಟಿಗೆ ಆದೇಶ ಕೊಡಬೇಕು. ಅವರು ಅಲ್ಲಿ ಅಮೇರಿಕನ್ ಟೆಕ್ಸ್ಟ್ ಬುಕ್ ಆಧಾರದ ಮೇಲೆ ಸೋಷಿಯಲ್ ಸ್ಟಡೀಸ್ ಮಾಡುವುದನ್ನು ಬಿಟ್ಟು ಉಪ್ಪಾರಿಗರು, ಪರಿವಾರದವರು ಅನೇಕ ತಾಲ್ಲೂಕುಗಳಲ್ಲಿ ಹೇಗೆ ಇದ್ದಾರೆ. ಅವರ ಎಕನಾಮಿಕ್ ಕಂಡೀಷನ್ಸ್ ಏನು ಇದೆ ಎಂಬುದನ್ನೆಲ್ಲ ರಿಸರ್ಚ್ ವಿದ್ಯಾರ್ಥಿಗಳು ವ್ಯಾಸಂಗ ಮಾಡಲಿ. ಹಿಂದುಳಿದ ಕೋಮುಗಳ ಪರಿಸ್ಥಿತಿಯಂತೆಯೇ ಒಕ್ಕಲಿಗ ಕೋಮಿನಲ್ಲಿಯೂ, ಲಿಂಗಾಯಿತ ಕೋಮಿನಲ್ಲಿಯೂ ಈ ಪರಿಸ್ಥಿತಿ ಕಂಡುಬರುತ್ತದೆ. ಪಟ್ಟಣದಲ್ಲಿ ಕೆಲವರು ಅನುಕೂಲಸ್ಥರು ಇರಬಹುದು. ಆದರೆ ಗ್ರಾಮಾಂತರ ಪರಿಸ್ಥಿತಿ ನೋಡಿದರೆ ಈ ಕೋಮಿನವರಿಗೆ ಸೇರಿದ ಜನರು ಹರಿಜನರಿಗಿಂತಲೂ, ಗಿರಿಜನರಿಗಿಂತಲೂ ಬಹಳ ಹಿಂದುಳಿದಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಸಚಿವರು ಹೆಚ್ಚು ಗಮನಕೊಟ್ಟು ಹಿಂದುಳಿದ ಕೋಮಿನವರಿಗೆ ರಕ್ಷಣೆ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇತ್ತೀಚೆಗೆ ಸುಪ್ರೀಂ ಕೋರ್ಟಿನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಯಾವುದು ಎಂಬ ಬಗ್ಗೆ ತೀರ್ಪು ಕೊಟ್ಟಿದ್ದಾರೆ. ಅದನ್ನು ಛಾಲೆಂಜ್ ಮಾಡುವ ಹಾಗೆ ಇಲ್ಲ. ಎಕನಾಮಿಕ್ ಬೇಸಿಸ್ ಮೇಲೆ ಬ್ಯಾಕ್ ವರ್ಡ್‌ನೆಸ್ ನಿರ್ಧಾರ ಮಾಡುವುದಕ್ಕೆ ಹೋದರೆ ತೊಂದರೆ ಯಾಗುತ್ತದೆ. ಅವರು ಮುಂದುವರೆದಿಲ್ಲ. ಮನುಷ್ಯನ ಇಂಟೆಲಿಜೆನ್ಸ್ ಮತ್ತು ದರ್ಜೆ ಎನ್ನತಕ್ಕದ್ದು ಒಂದು ಕಲ್ಚರಲ್ ಅಟೇನ್‌ಮೆಂಟ್. ಅದು ಒಂದೆರಡು ದಿವಸದಲ್ಲಿ ಬರುವುದಿಲ್ಲ. ಹತ್ತಾರು ವರ್ಷಗಳ ಮೇಲೆ ಬರುತ್ತದೆ. ಆದ್ದರಿಂದ ಒಬ್ಬ ಮನುಷ್ಯನಿಗೆ 20 ಎಕರೆ ಜಮೀನು ಇದ್ದರೆ ಅವನನ್ನು ಮುಂದುವರಿದ ಕೋಮು ಎಂದು ಪರಿಗಣಿಸಿ ಅವರ ಕೋಮಿನಲ್ಲಿ ಇರುವ ವಿದ್ಯಾರ್ಥಿಗಳಿಗೆ ಯಾವ ತರಹ ಶಿಕ್ಷಣವೂ ದೊರೆಯದೆ ಅವರು ಹಿಂದುಳಿದಿರುತ್ತಾರೆ. ಇದನ್ನು ನೀವು ಯೋಚನೆ ಮಾಡಬೇಕು. ಇಷ್ಟು ಹೇಳಿ ನಮ್ಮ ಹಿಂದೂ ಸಮಾಜದಲ್ಲಿ ಇರತಕ್ಕ ಕೆಲವು ಉಪಕೋಮುಗಳಿಗೆ ರಕ್ಷಣೆ ಅಗತ್ಯ ಎಂದು ಹೇಳುತ್ತೇನೆ. ಅದಕ್ಕೆ ಆದ್ಯ ಗಮನ ಕೇಂದ್ರ ಸರ್ಕಾರ ದಿಂದ ಬರತಕ್ಕ ಕಮೀಷನ್ ಮುಂದೆ ಸಾಕ್ಷಿ ಒದಗಿಸುವಾಗ ಅವರಿಗೆ ರಕ್ಷಣೆ ಕೊಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಹೇಳಬೇಕಾಗಿದೆ.

ಇನ್ನೊಂದು ವಿಷಯ ಹೇಳಬೇಕೆಂದು ಇಚ್ಛೆ ಪಡುತ್ತೇನೆ. ಈ ಭಿಕ್ಷುಕರ ಸಮಸ್ಯೆ. ಮೈಸೂರು ದೇಶ ಒಂದಕ್ಕೆ ಸಂಬಂಧಪಟ್ಟದ್ದಲ್ಲ, ಇಡೀ ಇಂಡಿಯಾದೇಶಕ್ಕೆ ಸಂಬಂಧಪಟ್ಟದ್ದು. ಯಾವ ಬೀದಿ ಯಲ್ಲಿ ಹೋದರೂ ಬಸ್‌ಸ್ಟ್ಯಾಂಡಿಗೆ ಹೋಗಲಿ, ರೈಲ್ವೆ ಸ್ಟೇಷನ್ನಿಗೆ ಹೋಗಲಿ ಈ ಭಿಕ್ಷುಕರು ಪರದೇಶದಿಂದ ಬಂದ ಬಿಳಿಯವರ ಮುಂದೆ ನಿಂತಿರುವುದನ್ನು ನೋಡಿದರೆ ನಾವು ಸಮಾಜದಲ್ಲಿ ತಲೆ ತಗ್ಗಿಸತಕ್ಕ ಪರಿಸ್ಥಿತಿಯಾಗಿದೆ. ಹೋಟೆಲ್ ಮುಂದೆ, ಸಿನಿಮಾ ಮುಂದೆ ಈ ರೀತಿ ನಿಂತು ಭಿಕ್ಷೆ ಬೇಡಿ ದರೆ ಅಮೆರಿಕಾ, ರಷ್ಯಾ ಮತ್ತು ಜರ್ಮನಿ ದೇಶದವರು ಏನು ತಿಳಿದುಕೊಳ್ಳಬೇಕು ? ಇಂಡಿಯಾದಲ್ಲಿ ಎಷ್ಟು ಪ್ಲಾನ್ ಮಾಡಿದರೂ ಈ ಭಿಕ್ಷುಕರ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಕೇಂದ್ರ ಸರ್ಕಾರಕ್ಕಾಗಲಿ, ರಾಜ್ಯ ಸರ್ಕಾರಕ್ಕಾಗಲಿ, ಶಕ್ತಿ ಇಲ್ಲವೇ ಎಂದು ಅವರ ಮನಸ್ಸಿಗೆ ಬರುತ್ತದೆ. ಮೈಸೂರು ಬೆಂಗಳೂರಿನಲ್ಲಿ ಬೆಗ್ಗರ್ಸ್ ಹೋಮ್ಸನ್ನು ನಡೆಸುತ್ತಾ ಇದ್ದಾರೆ, ಬೀದಿಯಲ್ಲಿ ವ್ಯಾನುಗಳಲ್ಲಿ ಭಿಕ್ಷುಕರನ್ನು ತುಂಬಿಕೊಂಡು ಬಂದು ಮತ್ತೊಂದು ಬೀದಿಯಲ್ಲಿ ಬಿಡುತ್ತಾರೆ. ಹೀಗಾಗಿ ಈ ಬೆಗ್ಗರ್ಸ್ ಹೋಮ್ಸ್‌ಗೆ ಖರ್ಚುಮಾಡುವ ಹಣ ದುರುಪಯೋಗವಾಗುತ್ತಿದೆ. ಇದಕ್ಕೆ ಕಾರಣರಾದ ಪಾಪಿಗಳಿಗೆ ಯಾವ ಶಿಕ್ಷೆ ಕೊಡಬೇಕು ಎಂಬುದೇ ಗೊತ್ತಾಗುವುದಿಲ್ಲ. ಅನೇಕ ಬೆಗ್ಗರ್ಸ್ ಹೋಮ್ಸ್‌ನಲ್ಲಿ ಅಧಿಕಾರಿಗಳು ಸಂಬಳ ತೆಗೆದುಕೊಳ್ಳುವುದಕ್ಕೆ ಹೆಸರಿಗೋಸ್ಕರ ಇದ್ದಾರೆ. ಇತ್ತೀಚೆಗೆ ಕೆರೆಕಟ್ಟೆ ಒಡೆದು ಹೋದರೆ ರೈತರೇ ಆ ಕೆಲಸಕ್ಕೆ ಜನರನ್ನು ಒದಗಿಸಬೇಕು ಎಂದು ಒಂದು ಇರಿಗೇಷನ್ ಬಿಲ್ ಬರುತ್ತದೆ. ಅಂತಹ ಕಡೆ ಕಾನ್‌ಸ್ಟಿಟ್ಯೂಷನ್ ತಿದ್ದುಪಡಿ ಆದರೂ ಈ ಭಿಕ್ಷುಕರನ್ನು ಕಾನ್‌ಸ್ಕ್ರಿಪ್ಟ್ ಮಾಡಿಯಾದರೂ ಉಪಯೋಗಿಸಬಹುದು. ಮನೆಗೆ ಮಾರಿ ಪರರಿಗೆ ಉಪಕಾರಿ ಎಂಬಂತೆ ಟಿಬೆಟ್ಟಿನಿಂದ ಬಂದಂಥ ಜನರಿಗೆ ಹಾಲು, ಜೇನುತುಪ್ಪ ಕೊಟ್ಟು ಸಾಕುತ್ತಾ ಇದ್ದೇವೆ. ಆದರೆ ನಮ್ಮ ಮನೆಮಕ್ಕಳು ಸಾಯುತ್ತಾ ಇದ್ದಾರೆ. ಆದ್ದರಿಂದ ಇಂತಹ ಬಿಕ್ಷುಕರನ್ನು ಕಾನ್‌ಸ್ಕ್ರಿಪ್‌ಮಾಡಿ ಒಂದು ಕಾಲೋನಿಯಲ್ಲಿ ನೆಲಸುವಂತೆಮಾಡಿ ಅವರಿಗೆ ಆಹಾರ ವಸ್ತುಗಳನ್ನು ಒದಗಿಸಿಕೊಟ್ಟರೆ ಚೆನ್ನಾಗಿರುತ್ತದೆ.

ಅಧ್ಯಕ್ಷರು.—ಟಿಬೆಟ್ ಜನರಿಗೆ ಆ ಹಣವನ್ನು ಕೇಂದ್ರ ಸರ್ಕಾರದಿಂದ ಒದಗಿಸಿ ಕೊಡುತ್ತಿದ್ದಾರೆ. ಈ ಬಡ್ಜೆಟ್ಟಿನಲ್ಲಿ ಇದಕ್ಕೆ ಹಣ ಇಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಸೆಂಟರ್‌ನಿಂದ ಕೊಟ್ಟಿದ್ದರೂ ಕೂಡ ಭೂಮಿ ನಮ್ಮದು. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಭೂಮಿಗೂ ಕೂಡ ಬೆಲೆಯಾಗುತ್ತದೆ. ಇತರರಿಗೆ ಭೂಮಿ

(ಶ್ರೀ ಎ. ಮುನಿಯಪ್ಪ)

ಬಹಳ ಬದಲಾವಣೆಯನ್ನು ಮಾಡಿದ್ದಾರೆ. ಈ ಒಂದು ಕ್ರಾಂತಿಯನ್ನು ಹರಿಜನರ ಉದ್ಧಾರಕ್ಕಾಗಿ ಅವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ನಮ್ಮ ಮಂತ್ರಿಗಳು ಹರಿಜನರ ಉದ್ಧಾರಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿ ಅವುಗಳನ್ನು ಕಾರ್ಯಗತ ಮಾಡಬೇಕು ಎಂದು ನಾನು ಅವರಿಗೆ ಸಲಹೆ ಮಾಡುತ್ತೇನೆ.

ಬೆಳಗಿನಿಂದ ಈ ಬೇಡಿಕೆಯಮೇಲೆ ಎಲ್ಲ ಪಕ್ಷದವರೂ ಬಹಳ ಸಹಾನುಭೂತಿಯಿಂದ ಅವರಿಗೆ ಇರತಕ್ಕ ಅನೇಕ ತೊಂದರೆಗಳನ್ನು ಕೂಲಂಕಷವಾಗಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ಎಲ್ಲ ಪಕ್ಷಗಳೂ ಹರಿಜನರ ಉದ್ಧಾರಕ್ಕಾಗಿ ಇಷ್ಟು ಮುತುವರ್ಜಿಯಿಂದ ಇಷ್ಟು ಸಹನೆಯಿಂದ ಬೆಂಬಲವನ್ನು ಕೊಟ್ಟಿರುವುದಕ್ಕೆ ಎಲ್ಲ ಪಕ್ಷಗಳವರಿಗೂ ನನ್ನ ಅನಂತ ವಂದನೆಗಳು. ದೇಶದಲ್ಲಿರುವ ಅಸ್ಪೃಶ್ಯತೆ ಎನ್ನುವುದು ಮನುಷ್ಯನ ದೇಹದಲ್ಲಿ ಕ್ಷಯರೋಗ ಇದ್ದ ಹಾಗೆ ದೇಶದಲ್ಲಿ ಅಸ್ಪೃಶ್ಯತೆ ಎನ್ನುವುದೂ ಒಂದು ಕ್ಷಯ. ಸರಿಯಾಗಿ ಚಿಕಿತ್ಸೆ ಮಾಡದೆ ಇದ್ದರೆ ಕ್ಷಯ ರೋಗ ಮನುಷ್ಯನ ಪ್ರಾಣವನ್ನು ತೆಗೆಯುತ್ತದೆ. ಈ ಅಸ್ಪೃಶ್ಯತೆಯನ್ನು ನಮ್ಮ ಸರ್ಕಾರದವರು ಮತ್ತು ದೇಶದ ಅನೇಕ ಪಕ್ಷ ಪಂಗಡಗಳವರು ಎಲ್ಲರೂ ಸೇರಿ ವ್ಯವಸ್ಥಿತವಾದ ರೀತಿಯಲ್ಲಿ ರದ್ದು ಮಾಡದೆ ಇದ್ದರೆ ಹಿಂದೂ ದೇಶಕ್ಕೆ ಮತ್ತು ಕರ್ಣಾಟಕ ದೇಶಕ್ಕೆ ಬಹಳ ಹಾನಿ ಎಂದು ಹೇಳುತ್ತೇನೆ.

ವೇದಗಳ ಕಾಲದಲ್ಲಿ ಈ ಜಾತಿಗಳಿರಲಿಲ್ಲ. ವೇದಗಳಲ್ಲಿ ಬರೇ ಗಂಡು ಹೆಣ್ಣು ಎಂದು ಇದೆ.

ಜಾತಿ ಜಾತಿಯೆಂದು ಮತ್ಸರ ಬೆಳೆಯುತ
ಪ್ರೇತಗಳಾದೆವು ಎಲೆ ಸ್ವಾಮಿ,
ಭೂಮಾತೆಗೆ ಯಾವ ಜಾತಿಯು ಸ್ವಾಮಿ,
ಈ ಜಗದೊಳು ಹೆಣ್ಣು ಗಂಡಿದೆ ಸ್ವಾಮಿ.
ಎಂಜಲೆಂಜಲೆಂತೆಂಬರ ನುಡಿಗಳು
ಎಂಜಲಿಲ್ಲದ್ಯಾವುದು ಸ್ವಾಮಿ,
ಮೀನೆಂಜಲು ನೀರಲ್ಲವೆ ಸ್ವಾಮಿ
ಕರು ಎಂಜಲು ಹಾಲಲ್ಲವೆ ಸ್ವಾಮಿ
ಎಂಜಲಾಗಿರ್ಪುದ ಈ ಜಗವೆಲ್ಲವು
ಎಂಜಲಿಲ್ಲದ್ದುಮ ಯಾವುದು ಸ್ವಾಮಿ ?

ಎಂದು ಹೇಳಿದ್ದಾರೆ.

ಆದುದರಿಂದ ವೇದದ ಕಾಲದಿಂದ ಜಾತಿ ಎನ್ನುವ ಪ್ರಶ್ನೆ ಇರಲಿಲ್ಲ. ಹೆಣ್ಣು ಗಂಡು ಎರಡೇ ಇದ್ದುದು. ವರ್ಣಾಶ್ರಮ ಧರ್ಮ ಬಂದಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಎಂದು ನಾಲ್ಕು ವರ್ಣಗಳಾಯಿತು. ಹೊಲೆಯ, ಮಾದಿಗ ಎಂದು ಯಾವುದರಲ್ಲಿಯೂ ಇರಲಿಲ್ಲ. ಆದುದರಿಂದ ಈ ಒಂದು ಸನ್ನಿವೇಶದಲ್ಲಿ ನಾಲ್ಕು ಜಾತಿಗಳು ವರ್ಣಾಶ್ರಮ ಧರ್ಮದ ಪ್ರಕಾರ ಹೇಗೆ ಬಂತೋ ಹಾಗೆ ಐದನೆಯ ಜಾತಿ ಬರಲಿಲ್ಲ. ಎಲ್ಲ ಸವರ್ಣೀಯರು ಇದನ್ನು ಆಳವಾಗಿ ಯೋಚನೆ ಮಾಡಬೇಕು. ಮಹಾತ್ಮ ಗಾಂಧಿಯವರು ಹೇಳಿದ್ದಾರೆ, ಹಿಂದೂ ಸಮಾಜದಲ್ಲಿರತಕ್ಕ ಸವರ್ಣೀಯರು ಹರಿಜನರನ್ನು ತಮ್ಮಂತೆಯೇ ನೋಡಿಕೊಂಡರೆ ಈ ಹಿಂದೂ ಮತದ ಉದ್ಧಾರವಾಗುತ್ತದೆ, ಅವರನ್ನು ದೂರೀಕರಿಸಿದರೆ ನಿಮ್ಮ ಹಿಂದೂ ಮತ ಹಾಳಾಗುವುದು, ಇದು ಸವರ್ಣೀಯರಾದ ನಿಮಗೆ ಗೊತ್ತಿರಲಿ ಎಂದು ಮಹಾತ್ಮ ಗಾಂಧಿಯವರು ಹೇಳಿದ್ದಾರೆ. ಆದುದರಿಂದ ಈ ಕಡೆಗೆ ಹೆಚ್ಚು ಗಮನ ಕೊಡಬೇಕು. ಹಿಂದೆ ವೇದಗಳ ಕಾಲದಲ್ಲಿ ಜಾತಿ ಇರಲಿಲ್ಲ.

ತಲ್ಲಿಯೂರ್ವಶಿ ತನಯುಲು ಮಾದಿಗ
ತಾನು ಬ್ರಾಹ್ಮಣುಡು ತಗುನೇ ಜಗತಿ
ತಪಮು ಚೇಶಿತೆ ದ್ವಿಜುಡು ತರ್ಕಿಂಪನೇಲ
ವಿಶ್ವಾದಾಭಿರಾಮ ವಿನರ ವೇಮ.

ಕೊಡುವ ಚೈತನ್ಯ ನಮಗೆ ಇದೆ. ಅದರೆ ಅದೇ ತರಹ ಒಂದು ಕಾಲೋನಿ ಮಾಡಿ ನಮ್ಮ ಜನರನ್ನೂ ಅಲ್ಲಿ ನೆಲಸುವಂತೆ ಮಾಡಿ ಅವರಿಗೆ ಕೋಳಿ ಸಾಕಾಣಿಕೆ ಮತ್ತು ಇತರ ವಿಷಯಗಳಲ್ಲಿ ಏಕೆ ತರಪೇತಿಯನ್ನು ಕೊಡಬಾರದು ಎಂದು ಕೇಳುತ್ತೇನೆ. ಇದರಿಂದ ಕೈ ಇಲ್ಲದವರಿಗೆ, ಕಾಲಿಲ್ಲದವರಿಗೆ, ಲೆಪ್ರಸಿ ರೋಗ ಬಂದವರಿಗೆ ಸ್ವಲ್ಪ ಸಹಾಯ ಮಾಡಿದ ಹಾಗೆ ಆಗುತ್ತದೆ. ಕೈ ಇಲ್ಲದವರಿಗೆ, ಕಾಲು ಇಲ್ಲದವರಿಗೆ, ಕಣ್ಣು ಇಲ್ಲದವರಿಗೆ, ಅವರವರ ಯೋಗ್ಯತೆಯನ್ನು ಅನುಸರಿಸಿ ಒಂದು ಕಾಲೊನಿಯನ್ನು ಸ್ಥಾಪನೆ ಮಾಡಿ ಅವರಿಗೆ ಬೇಕಾದ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕು ಅದರೆ ಈಗ ಮಾಡುತ್ತಿರುವುದು ಮನೆಗೆ ಮಾರಿ, ಪರರಿಗೆ ಉಪಕಾರಿ, ಎನ್ನುವಂತಾಗಿದೆ. ನಮ್ಮಲ್ಲಿನ ಭಿಕ್ಷುಕರ ಸಮಸ್ಯೆಯನ್ನು ಬಗೆಹರಿಸಬೇಕು. ಇದಕ್ಕಾಗಿ ಕಾನ್ಸ್ಕ್ರಿಪ್ಷನ್ ಮಾಡಿ ಅಥವಾ ಫೋರ್ಸ್ಡ್ ಲೇಬರ್ ಆದರೂ ಚಿಂತೆ ಇಲ್ಲ ಮಾಡಿ ಒಂದು ಕಾಲೊನಿಯನ್ನು ಸ್ಥಾಪನೆ ಮಾಡಿ, ಅವರಿಗೆ ಸೌಕರ್ಯಗಳನ್ನು ಕಲ್ಪಿಸಿ ಕೈಕೆಲಸದಲ್ಲಿ ತೊಡಗುವುದು ಅಥವಾ ವ್ಯವಸಾಯದಲ್ಲಿ ತೊಡಗುವುದು, ಇಂಥದ್ದಕ್ಕೆ ವ್ಯವಸ್ಥೆ ಮಾಡಿ. ಇಲ್ಲವೆ ಇದ್ದರೆ ರಾಷ್ಟ್ರಕ್ಕೇ ಅವಮಾನ ದೇಶಕ್ಕೇ ಅವಮಾನ ಮಾಡಿದಂತಾಗುತ್ತದೆ. ಹಿಂದೆ ಬುದ್ಧನ ಕಾಲದಲ್ಲಿ ಇಂಥ ವ್ಯಕ್ತಿಗಳನ್ನು ನೋಡಿರಲಿಲ್ಲ ಎಂದು ಕಾಣುತ್ತದೆ. ಬುದ್ಧ ಒಂದು ದಿನ ಹೊರಗೆ ಹೋಗುತ್ತಿದ್ದಾಗ ಅಸ್ಥಿಪಂಜರದ ಒಬ್ಬ ವ್ಯಕ್ತಿಯನ್ನು ನೋಡಿ ಇದ್ದಕ್ಕಿದ್ದ ಹಾಗೆ ರಾಜ್ಯ ತ್ಯಾಗ ಮಾಡಿ ಸನ್ಯಾಸಿಯಾದ. ಇಂಥ ವ್ಯಕ್ತಿಗಳನ್ನು ನೋಡಿ ನೋಡಿ ನಾವೂ ಕೂಡ ಬುದ್ಧರಾಗ ಬಹುದು. ಆದ್ದರಿಂದ ಸರಕಾರ ಇತ್ತಕಡೆ ಸ್ವಲ್ಪ ಗಮನ ಕೊಡಬೇಕಾಗಿದೆ. 19 ವರ್ಷಗಳ ಕಾಲ ರಾಜ್ಯಭಾರ ಮಾಡಿಯೂ ಇನ್ನೂ ಈ ಭಿಕ್ಷುಕರ ಸಮಸ್ಯೆಯನ್ನು ಬಗೆಹರಿಸಿಲ್ಲ. ಯಾವತ್ತು ಬಗೆ ಹರಿಸುತ್ತೀರೋ ಗೊತ್ತಿಲ್ಲ. ಹೆಸರಿಗೆ ಮಾತ್ರ ಭಿಕ್ಷುಕರ ಕಾಲೊನಿಗಳನ್ನು ಮಾಡಿದ್ದೀರಿ. ಅದರೆ ಭಿಕ್ಷುಕ ವೃತ್ತಿಯನ್ನು ತಪ್ಪಿಸಿದ್ದೀರಾ? ರೈಲ್ವೇ ಡಬ್ಬಿಗಳಲ್ಲಿ, ಥರ್ಡ್ ಕ್ಲಾಸ್ ಮತ್ತು ಸೆಕೆಂಡ್ ಕ್ಲಾಸ್ ಡಬ್ಬಿಗಳಲ್ಲಿ ಕೂಡ ಇವರು ಇರುತ್ತಾರೆ, ಎಂ. ಎಸ್. ಆರ್. ಟಿ. ಸಿ. ಬಸ್ಸುಗಳನ್ನು ಹತ್ತಿದರೆ ಹಿಂದೆಯೇ ಇರುತ್ತಾರೆ. ಇದು ಸಮಾಜಕ್ಕೆ ಒಂದು ಸಮಸ್ಯೆ. ಘೋರ ಸಮಸ್ಯೆ. ರಾಷ್ಟ್ರದ ಗೌರವವನ್ನು ಕಾಪಾಡಿಕೊಳ್ಳತಕ್ಕ ಸಮಸ್ಯೆಯಾಗಿದೆ. ಇದರ ನಿವಾರಣೆ ಬಗ್ಗೆ ನಾವು ಕಠೋರವಾದ ನೀತಿಯನ್ನು ಅನುಸರಿಸಬೇಕು. ಎಲಿಜಬೆತ್ ರಾಣಿಯ ಕಾಲದಲ್ಲಿ ಯಾವನಾದರೂ ಬಿಕ್ಷುಕನನ್ನು ನೋಡಿದರೆ ಅವನ ಹಣೆಯ ಮೇಲೆ ಒಂದು ಮುದ್ರೆ ಒತ್ತಿ ಕಳಿಸುತ್ತಿದ್ದರು. ಕೂಡಲೆ ಅವನು ಭಿಕ್ಷುಕನೆಂದು ತಿಳಿದು ಅವನನ್ನು ಹಿಡಿದುಕೊಂಡು ಹೋಗುತ್ತಿದ್ದರು. ರಷ್ಯ ದೇಶದಲ್ಲಿ ಕಾನ್ಸೆಂಟ್ರೇಷನ್ ಕ್ಯಾಂಪ್ ಮಾಡಿ ಅಲ್ಲಿ ಎನ್‌ಫೋರ್ಸ್ಡ್ ಲೇಬರ್ ಕಾಲೊನಿ ಮಾಡಿದ್ದರು. ಇಲ್ಲಿಯೂ ಅಂಥ ಕಾಲೊನಿ ಮಾಡಿ ಭಿಕ್ಷುಕರು ಒಂದು ಉದ್ಯೋಗವನ್ನು ಕಲಿತುಕೊಳ್ಳುವುದಕ್ಕೆ ಪ್ರೋತ್ಸಾಹ ಕೊಡದೆ ಹೋದರೆ ರಾಷ್ಟ್ರಕ್ಕೇ ಅವಮಾನವಾಗುತ್ತದೆ ಎಂದು ನಾನು ಒತ್ತಿ ಒತ್ತಿ ಹೇಳಿ, ಸರ್ಕಾರ ಭಿಕ್ಷುಕರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮೈಸೂರು ಗೆಜೆಟೀರ್ ಎಂದು 1927ನೆ ಇಸವಿಯಲ್ಲಿ ಸಿ. ಹಯವದನರಾಯರು ಮಾಡಿದರು. ಅಲ್ಲಿಂದೀಚೆಗೆ ಮೈಸೂರು ಸರ್ಕಾರದವರು ಬೇರೆ ಗೆಜೆಟೀರ್ ಮಾಡಿಲ್ಲ. 1965ರಲ್ಲಿ ಗೆಜೆಟೀರ್ ಆಫ್ ಇಂಡಿಯಾ ಎಂದು ಡಿಸ್ಟ್ರಿಕ್ಟ್‌ವೈಸ್ ತಯಾರು ಮಾಡಿದ್ದಾರೆ. ಮೈಸೂರು ಗೆಜೆಟೀರ್ ಅನ್ನು 1927ನೇ ಇಸವಿಯಲ್ಲಿ ಸಿ. ಹಯವದನರಾಯರು ಮಾಡಿದ ನಂತರ ಇತ್ತೀಚೆಗೆ ಯಾವುದನ್ನೂ ಮಾಡಿಲ್ಲ. ನಾವು 1967ನೆ ಇಸವಿಯಲ್ಲಿದ್ದೇವೆ. 40 ವರ್ಷ ಕಳೆದಿರುವುದರಿಂದ ಈ ಪುಸ್ತಕದಲ್ಲಿರುವ ಅನೇಕ ವಿಷಯಗಳು 'ಔಟ್ ಆಫ್ ಡೇಟ್'' ಆಗಿವೆ. ಆದುದರಿಂದ ಒಂದು ಕಮಿಟಿಯನ್ನು ಮಾಡಿ ಈ ಗೆಜೆಟೀರ್ ಅನ್ನು ಅಪ್-ಟು-ಡೇಟ್ ಮಾಡಬೇಕು.

ಇಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಅತ್ಯಂತ ವಂದನೆಗಳು.

MR. SPEAKER.—As regards the Book referred to by Professor Srikantiah I believe the Government have set up an agency and the first volume may have been published. State Government is also revising the Gazetteer.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ಸಭೆಯ ಮುಂದೆ ತಂದಿರತಕ್ಕ 2,98,65,000 ರೂಪಾಯಿಗಳ ಬೇಡಿಕೆಯನ್ನು ಸ್ವಾಗತಿಸುತ್ತ, ಕೆಲವು ವಿಚಾರಗಳನ್ನು ನಮ್ಮ ಸರ್ಕಾರಕ್ಕೆ ಸಲಹೆ ಮಾಡಲು ನಿಂತುಕೊಂಡಿದ್ದೇನೆ. ನಮ್ಮ ಮಂತ್ರಿಗಳು ಬೇರೆಯವರು ಇರಕೂಡದು, ಹರಿಜನರೇ ಇರಬೇಕು ಎಂದು ಕೆಲವು ಸದಸ್ಯರು ಸಲಹೆ ಮಾಡಿದರು. ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಬೇರೆ ಜಾತಿಯವರ ಸಹಕಾರವಿಲ್ಲದಿದ್ದರೆ ಹರಿಜನರ ಉದ್ಧಾರವಾಗುವುದಿಲ್ಲ, ಸವರ್ಣೀಯರ ಸಹಕಾರವಿಲ್ಲದಿದ್ದರೆ ಖಂಡಿತವಾಗಿ ಹರಿಜನರ ಉದ್ಧಾರವಾಗುವುದಿಲ್ಲ. ನಮ್ಮ ಈಗಿನ ಮಂತ್ರಿಗಳು ಹಿಂದೆ ವ್ಯವಸಾಯದಲ್ಲಿ ಕ್ರಾಂತಿ ಮಾಡಿದ ಹಾಗೆ

ಎಂದು ಯೋಗಿ ವೇಮನ ಹೇಳಿದ್ದಾರೆ. ಅರುಂಧತಿಯನ್ನು ಬ್ರಹ್ಮರ್ಷಿ ವಶಿಷ್ಠರು ಮದುವೆ ಮಾಡಿಕೊಂಡರು. ಇವನ್ನೆಲ್ಲಾ ನೋಡಿದರೆ ಆಗ ಜಾತಿ ಪದ್ಧತಿ ಇರಲಿಲ್ಲ ಎಂದು ಗೊತ್ತಾಗುತ್ತದೆ. ಈ ಒಂದು ಸನ್ನಿವೇಶದಲ್ಲಿ ಇಂಥ ಎಡರು ತೊಡರುಗಳಿವೆ. ನಮ್ಮ ಸರ್ಕಾರದವರು ಅಸ್ಪೃಶ್ಯತೆಯ ನಿವಾರಣೆ ಕಡೆಗೆ ಹೆಚ್ಚು ಗಮನಕೊಡಬೇಕು. ಹರಿಜನರಿಗೆ ನೂರಕ್ಕೆ 18ರಂತೆ ಪ್ರತಿಯೊಂದು ಇಲಾಖೆಯಲ್ಲಿಯೂ ಕೊಡಬೇಕು ಎಂದು ನಾನು ಹೇಳುತ್ತೇನೆ. ಆ ರೀತಿ ಎಲ್ಲ ಇಲಾಖೆಗಳಲ್ಲಿಯೂ ಏರ್ಪಾಟು ಮಾಡಿ ಕೊಡಿ. ಡೆವಲಪ್‌ಮೆಂಟ್ ಇಲಾಖೆಯಲ್ಲಿ ಯಾವ ಗ್ರ್ಯಾಂಟ್ ಇದೆಯೋ ಅವನ್ನು ಸೇಕಡ 18ರಂತೆ ಕೊಡಿ, ಬಸವರಾಜೇಶ್ವರಿಯವರು ಇಷ್ಟು ಖರ್ಚಾಗಿದೆ ಎಂದು ಹೇಳಿದರು, ಆದರೆ ಅದು ಕಾರ್ಯಗತವಾಗಿಲ್ಲ. ಖಂಡಿತವಾಗಿಯೂ ಅವರ ಕೈ ಸೇರುವುದಿಲ್ಲ, ಬೇರೆಯವರಿಗೆ ಸೇರುತ್ತದೆ, ಆದುದರಿಂದ ಎಚ್ಚರಿಕೆಯಿಂದ ನೋಡಬೇಕು ಎಂದೂ ಅವರು ಹೇಳಿದರು. ಈ ಹಣ ಬೇಡ ಎಂದು ನಾನು ಛಾಲೆಂಜ್ ಮಾಡುತ್ತೇನೆ. ಸಮಾಜ ಸುಧಾರಣೆ ಮಾಡಿ, ಆರ್ಥಿಕವಾಗಿ ನಮಗೆ ಮಾಡಬೇಕಾದ ಸಹಾಯದ ಬಗ್ಗೆ ಪ್ಲಾನು ಮಾಡಿ, ರಾಜಕೀಯದಲ್ಲಿ ಕೊಡಬೇಕಾದ ಸ್ಥಾನಮಾನ ಕೊಡಿ. ಹಾಗೆ ಮಾಡಿ ಇದಕ್ಕೆ ಕೊಟ್ಟಿರುವ ಹಣವೆಲ್ಲಾ ನೀವು ತೆಗೆದುಕೊಳ್ಳಿ. ಈ ಹಣದಿಂದ ಹರಿಜನರ ಉದ್ಧಾರವಾಗುವುದಿಲ್ಲ. ಹಣ ಸಂಪಾದನೆ ಮಾಡುವ ಶಕ್ತಿ ಈ ಜಾತಿಗಿದೆ. ಸವರ್ಣೀಯರು ಒಂದು ಮದುವೆಯಲ್ಲಿ ತಾಂಬೂಲ ಕೊಡದಿದ್ದರೆ 10 ವರ್ಷ ಸಾಧನೆ ಮಾಡುತ್ತಾರೆ. ಎಷ್ಟೋ ವರ್ಷಗಳಿಂದ ನಿಮ್ಮ ದೇವರ ಪೂಜೆ ಮಾಡುತ್ತೇವೆ. ನಿಮ್ಮ ದೇವರ ಹೆಸರನ್ನೇ ಇಟ್ಟುಕೊಳ್ಳುತ್ತೇವೆ. ಇಂಥ ನಮಗೆ ಅವಮಾನ ಮಾಡುವುದಕ್ಕೆ ಒಂದು ಮಿತಿಯಿದೆ. ಆ ಮಿತಿಯನ್ನು ಸವರ್ಣೀಯರೆಲ್ಲರೂ ಬಹಳ ಆಳವಾಗಿ ಯೋಚನೆ ಮಾಡಬೇಕು. ಹಾಗೆ ಮಾಡಿ ನಮ್ಮನ್ನು ನಿಮ್ಮ ಮಕ್ಕಳಂತೆ ಆದರದಿಂದ ಕಂಡು ಹಿಂದೂ ಧರ್ಮವನ್ನು ಉದ್ಧಾರ ಮಾಡಿ, ಇಲ್ಲವಿದ್ದರೆ ದೂರೀಕರಿಸಿ. ನಮ್ಮ ಹಿಂದೂ ಧರ್ಮವನ್ನು ಹಾಳು ಮಾಡುವುದಕ್ಕೆ ನೀವೇ ಜವಾಬ್ದಾರರು. ಹಿಂದೆ ಕೋಲಾರ ಜಿಲ್ಲೆಯವರೇ ಮುಖ್ಯ ಮಂತ್ರಿಗಳಾಗಿದ್ದರು, ಈಗಲೂ ಕೋಲಾರ ಜಿಲ್ಲೆಯವರೇ ನಮಗೆ ಸಂಬಂಧಪಟ್ಟ ಖಾತೆಯ ಮಂತ್ರಿಗಳಾಗಿದ್ದಾರೆ. ನಾರಾಯಣಗೌಡರು ಬೇರೆ ಜಾತಿಯವರಾದರೂ ಅವರಿಂದ ನಮಗೆ ಬಹಳ ಅನುಕೂಲವಿದೆ. ಇಲಾಖೆಗೇನೋ ಹಣವನ್ನು ಒಳ್ಳೆಯ ಸದ್ಬುದ್ಧಿಯಿಂದ ಮಂಜೂರು ಮಾಡುತ್ತಾರೆ. ಆದರೆ ಅದನ್ನು ಖರ್ಚು ಮಾಡುವಾಗ ಬೇರೆಯವರು ಲಪಟಾಯಿಸುವುದಕ್ಕೆ ಅವಕಾಶವಿಲ್ಲದಂತೆ ಮಾಡಿ ಸಮಾಜ ಕಲ್ಯಾಣದ ಉದ್ಧಾರಕ್ಕೆ ನಾರಾಯಣಗೌಡರು ಬಸವಣ್ಣನವರಂತೆ ಕ್ರಾಂತಿ ಮಾಡಲಿ ಎಂದು ಆಶಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

SRI P. B. NANDIHALI (Uchagaon).—Mr. Speaker Sir, I rise to oppose the Demand No. 27 --Miscellaneous, Social and Developmental Organisations, for Rs. 2,98,65,000.

In this connection, I wish to make some of my observations and give my experiences while asking for the uplift and progress of the Scheduled Caste people and the backward class people.

The poor people of the scheduled castes and tribes are given inhuman Treatment for centuries and unfortunately even now also it is being continued. The three great personages, namely Mahatma Fule Mahatma Gandhi and Dr. Babasaheb Ambedkar tried their level best for the progress and uplift of these people and so many leaders followed in their noble and holy footsteps. Of course, the Government is also spending crores of rupees and according to my information there is not appreciable improvement in this work. One of the root causes for their backwardness is : that there are so many castes and sub castes, sects and religions in our Hinduism. Ignorance illiteracy and poverty are also the reasons. Government has been unable to solve the financial, social and cultural problems of these backward people. They must be solved as soon as possible. Their financial position is worse. They have to work as slaves. They have no food, clothes and Shelter. They are born in poverty and debt and they have to die in debt. I remember one example which pains my heart. Example there is one young boy working in the

(SRI. P. B. NANDIHALI)

house of a rich farmer. He has to pay interest for the loan taken for marriage of his parents. This is rather a pitiable case.

So, the Government must be liberal enough to release Forest or Revenue lands to these Scheduled Castes and Tribes people to encourage them. The procedure for granting these lands must also be simplified. The Government must sanction Loans on a long term and without interest.

They must also be given housing sites and loans to build houses on a large scale. I shall give my experience of a Scheduled Caste Housing Co-operative Society, Belgaum. There are 225 members from rural areas in it and the Society had asked for Rs. 6,25,000 from the Government. If I remember right, the Government have sanctioned only a sum of Rs. 93,500; and this amount is also not released in time. I know one of the houses in a village which were not complete because the Poor could not get Loan in time. When I left my place for Bangalore, rainy season had commenced. There was no roof to the house at that time. I do not known what has happened to that house by now. What I want to suggest is that the Government must help liberally. It is the fundamental right of the people. They are helped to-day as a piece of bread is thrown to a hungry dog.

There is also unemployment among these people. The landless labourers from these communities must be employed. In spite of honest efforts by the unemployed people of this section of the community in the Employment Exchange they are not able to get jobs. Some of the officers are not sincerely trying for the progress of these people. There is no village-to-village propaganda in regard to the educational facilities available to them. There are so many drawbacks in the working of the schemes prepared for their uplift and abolition of untouchability. The problem of untouchability is still there. In this connection, I appeal not only to the hon'ble Ministers but also to all the members of this House to visit the "Dombariwadas" "Harijanwadas" in every City and village and to take meals with them. I also request the hon'ble Minister to invite once in a year some five to six persons of schedule castes and tribes to our houses and to give them opportunities to mix with the members of our families freely.

The problem of untouchability will not be solved only by Law. Anyhow there are no honest efforts. The Government must take the Educational backwardness into consideration. The Government must also encourage the hostels where the students of all castes are admitted. The condition of Landless Labourers and poor workers is very bad. All the facilities of Scheduled Castes and Tribes should be given to the poor people of the other Back-ward class whose annual income is less than Rs. 1,200 today even if Dr. Babasaheb Ambedkar were there, he would have urged to give the facilities on the merit of financial position and not on the merit of caste and creed. So I request earnestly to the hon'ble Minister to take note of this and do the needful immediately.

The Government has run Hostels throughout the State. The Government is meeting the Expenditure of the Hostels. But I am surprised why the Government is not sanctioning reasonable grants to the hostels of Private Managements. The condition of these Hostels is very pitiable. Government is sanctioning only Rs. 25 per student per month. The Management will have to spend for the Superintendent, lighting charges, pay for fuel, rent, the cook etc. So, it would be utterly impossible for any Management to give at least the bare food for four annas per diet. We cannot give even half diet in four annas. Therefore, I request the hon'ble Minister to think of this seriously and sanction at least fifty rupees per student per month. I would also suggest that grants should be given monthly. The department can calculate at the end of the year and the loss incurred can be made good.

5-00 P.M.

About the Social Welfare Department, I am of the definite opinion that the special department is not necessary. We have the Educational Department, the Taluka Development Boards and the staff. The social welfare work could as well be entrusted to that staff and the heavy expenditure on a separate department must be saved.

While opposing this Demand, I will raise one demand in this House, namely, the portrait of the person who created our Constitution and who dedicated for the cause of Harijans Dr. Babasaheb Ambedkar should be unveiled in this House.

Thank you.

ಶ್ರೀಮತಿ ನಾಗಮ್ಮ ಶೇಷಪ್ಪ (ಕಲ್ಮಲ).—ಮಾನ್ಯ ಅಧ್ಯಕ್ಷರೇ, ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡಿನ ಮೇಲೆ ಒಂದೆರಡು ಮಾತುಗಳನ್ನು ಆಡಲು ಇಚ್ಛಿಸುತ್ತೇನೆ. ಈಗಾಗಲೇ ನನ್ನ ಸ್ನೇಹಿತರನೇಕರು ಬಹಳವಾಗಿ ಮಾತನಾಡಿದ್ದಾರೆ. ಎಲ್ಲರೂ ಹರಿಜನರಿಗೆ, ಗಿರಿಜನರಿಗೆ ಎಲ್ಲಾ ಸೌಲತ್ತುಗಳನ್ನು ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಆ ರೀತಿ ಕೊಟ್ಟದ್ದು ನನಗಂತೂ ಕಾಣುವುದಿಲ್ಲ. ಇಷ್ಟೆಲ್ಲಾ ಇಲಾಖೆಗಳಿಗೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ ಎಂದು ಹೇಳುತ್ತಿದ್ದಾರೆಯೇ ವಿನಾ, ಇದುವರೆಗೆ ಯಾವ ಒಂದು ಹಾಸ್ಟೆಲ್ ಬರಲಿಲ್ಲ, ಭೂಮಿ ಕೊಟ್ಟದ್ದು ಇಲ್ಲ, ಯಾವುದೂ ಇಲ್ಲ. ಖಂಡಿತವಾಗಿಯೂ ಆ ಜನರನ್ನು ಮುಂದಕ್ಕೆ ತರಬೇಕಾದರೆ, ಸಂಬಂಧಪಟ್ಟ ಅಧಿಕಾರಿಗಳು, ಮಂತ್ರಿಗಳು ಮುಂದೆ ಬಂದು ಎಲ್ಲೆಲ್ಲಿ ಅಗತ್ಯವಿದೆಯೋ, ಅಲ್ಲಲ್ಲಿ ಜಿಲ್ಲಾ ಸೋಷಿಯಲ್ ಆಫೀಸರರನ್ನು ನೇಮಕ ಮಾಡಿ ಎಲ್ಲೆಲ್ಲಿ ಏನೇನು ಆಗಿದೆ ಎಂಬುದನ್ನು ರಿಪೋರ್ಟ್ ತರಿಸಿ, ಅದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಅದು ಯಾವುದೂ ಮಾಡುತ್ತಾ ಇಲ್ಲ. ಸುಮ್ಮನೆ ಕಾಗದ ಟೇಬಲ್ ಮೇಲೆ ಬಿದ್ದಿರುತ್ತವೆ. ಇವರು ಯಾವುದನ್ನೂ ನೋಡುತ್ತಿಲ್ಲ. ಒಂದು ಕಡೆ ಹರಿಜನರಿಗೆ ಎತ್ತು ಕೊಡುತ್ತೇವೆಂದು ಹೇಳುತ್ತಾರೆ, ಕೋಣ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಯಾವುದೂ ಕಾರ್ಯರೂಪದಲ್ಲಿ ಇಲ್ಲ. ನನ್ನ ಎರಡು ತಾಲ್ಲೂಕುಗಳಲ್ಲಿ ನಾನು ನೋಡುತ್ತಿದ್ದೇನೆ. ಮೂವತ್ತು ರೂಪಾಯಿ ಕೋಳಿ, ಕುರಿಗೆಂದು ಕೊಡುತ್ತಿದ್ದಾರೆ. ಆದರೆ, ನಾನಾದರೂ ಹೇಳುತ್ತೇನೆ, ಇದರ ಬದಲು ನಮ್ಮ ಕಾಲೇಜಿನಲ್ಲಿ ಓದುವ ಹುಡುಗರಿಗೆ ಓದಿಸಿ, ಹಾಸ್ಟೆಲ್ ಮಾಡಿ ಊಟ ತಿಂಡಿ ಕೊಟ್ಟು, ಅವರನ್ನು ಮುಂದಕ್ಕೆ ತನ್ನಿರಿ. ಈಗ 25 ರೂಪಾಯಿ ಕೊಡುತ್ತಿದ್ದೀರಿ, ಅದು ಏನೂ ಸಾಲುವುದಿಲ್ಲ. ಬರೇ ಶಿಶುವಿಹಾರ ಆರ್ಗನೈಸ್ ಮಾಡುವುದು ಬೇಡ. ಹೆಣ್ಣುಮಕ್ಕಳ ಹಾಸ್ಟೆಲ್ ಮಾಡಿಸಿ, ಕಾಲೇಜು ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ. ಇಲ್ಲದಿದ್ದರೆ, ಮಧ್ಯೆ ಇರುವ ಸೂಪರಿಂಟೆಂಡೆಂಟ್ ಯಾರಾದರೂ ಎಲ್ಲಾ ತಿಂದುಹಾಕುವನು.

(ಶ್ರೀಮತಿ ನಾಗಮ್ಮ ಶೇಷಪ್ಪ)

ಇದೇ ರೀತಿ ಈ ಸಣ್ಣ ಸಣ್ಣ ಸ್ಕೀಮ್ ಎಂದು ರಿಮಾಂಡ್ ಹೋಮ್ ಮಾಡುವುದು ಏಕೆ? ಅದರಿಂದ ಜನರ ಉದ್ಧಾರ ಏನಾಗುತ್ತದೆ? ಜನ ಎಲ್ಲಾ ಇದು ಸೋಷಿಯಲ್ ವೆಲ್‌ಫೇರಿಗೆ ಸಂಬಂಧಪಟ್ಟದ್ದು, ಹರಿಜನರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇದರ ಬದಲು ಹರಿಜನ ಹುಡುಗರಿಗೆ ಕಾಲೇಜು ವಿದ್ಯಾಭ್ಯಾಸ ಕೊಡಿಸಬೇಕು, ಹಾಸ್ಟೆಲು ಕಟ್ಟಡ ಕಟ್ಟಿಸಿ ಕೊಡಬೇಕು, ಫ್ರೀಯಾಗಿ ಊಟ ಕೊಡಿಸಬೇಕು. ಸುಮ್ಮನೆ ಗ್ರಾಂಟ್ ಕೊಡುತ್ತಿದ್ದೇವೆ ಎಂದು ಅಂಕಿ ಅಂಶಗಳನ್ನು ಹೇಳುತ್ತಿದ್ದೀರಿ. ಅಲ್ಲಿ ಎಲ್ಲಾ ಲ್ಯಾಪ್ಸ್ ಆಗುತ್ತದೆ. ಅದನ್ನು ಕೇಳುವವರೇ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ಎಲ್ಲಾ ಮಾಡಬೇಕು. ಅವರೆ, ಅಲ್ಲಿ ಫೈಲು ಬಿದ್ದಿರುತ್ತದೆ. ನೀವು ನಿಜವಾಗಿ ಕೊಡುವುದಾದರೆ, ಹರಿಜನರಿಗೆ ಭೂಮಿ ಕೊಟ್ಟು ಅದನ್ನು ರಿಜಿಸ್ಟರ್ ಮಾಡಿ ಕೊಡಿ. ಇಲ್ಲದಿದ್ದರೆ, ಹರಿಜನರು ಹಿಂದೆ ಬಿದ್ದ ಮೊದಲಿನಂತೆ ಹಿಂದುಳಿಯುತ್ತಾರೆ.

ಈಗ ಹರಿಜನರಿಗೆ 18 ಪರ್ ಸೆಂಟ್ ನೌಕರಿಯಲ್ಲಿ ಕೊಡುತ್ತಾರೆಂದು ಹೇಳುತ್ತಾರೆ. ಅದು ಎಲ್ಲಿ ಕೊಟ್ಟಿದ್ದಾರೆಂದು ತೋರಿಸಿಕೊಡಲಿ. ಇದುವರೆಗೂ ರಾಯಚೂರಿನಲ್ಲಿ ಕೊಟ್ಟಿಲ್ಲ, ಗುಲ್ಬರ್ಗ ದಲ್ಲೂ ಕೊಟ್ಟಿಲ್ಲ.

[MR. DEPUTY SPEAKER in the Chair]

ಈಗ ಹರಿಜನರಲ್ಲಿ ಗ್ರಾಜುಯೇಟುಗಳಿದ್ದಾರೆ, ದೊಡ್ಡ ದೊಡ್ಡ ಆಫೀಸರ್ಸ್ ಇದ್ದಾರೆ. ಅವರಿಗೆ ಪ್ರಮೋಶನ್ಸ್ ಕೊಡದೆ, ಅಲ್ಲಲ್ಲೇ ಮೂಲೆಗೆ ಬಿದ್ದಿದ್ದಾರೆ. ಅವರನ್ನು ಡಿ.ಸಿ.ಯಾಗಿ ಮಾಡಿದ್ದೀರಾ, ಡಿವಿಜನಲ್ ಕಮಿಷನರನ್ನಾಗಿ ಮಾಡಿದ್ದೀರಾ? ಇದುವರೆಗೆ ಎಷ್ಟು ಜನರನ್ನು ಮಾಡಿದ್ದೀರಿ? ಎಷ್ಟು ಇಂಜನಿಯರನ್ನು ಮಾಡಿದ್ದೀರಿ, ಎಷ್ಟು ಡಿ.ಸಿ. ಎಷ್ಟು ತಹಸೀಲ್ದಾರರನ್ನು ಮಾಡಿದ್ದೀರಿ? ಪ್ರೊಮೋಷನ್ಸ್ ಎಷ್ಟು ಜನರಿಗೆ ಕೊಟ್ಟಿದ್ದೀರಿ? ಬರೀ ಬಾಯಿ ಮಾತಿನಲ್ಲೇ ಆಗುತ್ತಿವೆ. ಆದ್ದರಿಂದ ಅವರಿಗೆ ಪ್ರೊಮೋಷನ್ಸ್ ಕೊಟ್ಟು ಜಿಲ್ಲಾಧಿಕಾರಿಗಳನ್ನಾಗಿ ಮಾಡಿದರೆ, ಉದ್ಧಾರ ಮಾಡಿದಂತಾಗುತ್ತದೆ. ಮೊದಲು ಇವರು ಕ್ರಿಶ್ಚಿಯನ್ ಜಾತಿಗೆ ಏಕೆ ಹೋದರು? ಎಲ್ಲಿಯಾದರೂ ಒಂದು ಟೀಚರು ಹಳ್ಳಿಯಲ್ಲಿ ಬಂದರೆ, ಅವರು ತಮ್ಮ ಕೆಲಸ ಬಿಟ್ಟು ರಾಜೀನಾಮೆ ಕೊಡುವುದೇ ಒಂದು ಬಾಕಿ. ಈ ರೀತಿ ಇರುವುದರಿಂದ ಅವರು ಬೇರೆ ಕ್ರಿಶ್ಚಿಯನ್ ಜಾತಿಗೆ ಸೇರುವಂತಾಯಿತು. ಆದ್ದರಿಂದ ನಮ್ಮ ಮಾನ್ಯ ಮಂತ್ರಿಯವರಿಗೆ ನಾನು ಹೇಳುವುದೇನೆಂದರೆ, ನಮ್ಮ ಜನರಿಗೆ ಭೂಮಿ ಕೊಟ್ಟು, ಮನೆಗಳನ್ನು ಕೊಟ್ಟು, ಎಲ್ಲಾ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ರಾಮಚಂದ್ರ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಮಂಡಿಸಿರುವಂಥ 2 ಕೋಟಿ 98 ಲಕ್ಷ 65 ಸಾವಿರ ರೂಪಾಯಿಗಳು ಈ ಸಮಾಜ ಕಲ್ಯಾಣದ ಅಭಿವೃದ್ಧಿಗೆ ಸಾಲದೆಂದು ನಾನು ವಿರೋಧ ಮಾಡುತ್ತೇನೆ. ಈ ಹರಿಜನ ಮತ್ತು ಗಿರಿಜನರ ಅಭಿವೃದ್ಧಿ, ಸಮಾಜದಲ್ಲಿ ಯಾವ ರೀತಿ ಆಗಬೇಕಾಗಿತ್ತೋ ಆ ರೀತಿ ಆಗಿಲ್ಲ. ಹಿಂದುಳಿದ ವರ್ಗಕ್ಕಾಗಿ ಇದುವರೆಗೆ ಇಷ್ಟು ಹಣ ಖರ್ಚು ಮಾಡಿದ್ದರೂ ಸಹ ಯಾವ ಒಂದು ಅಭಿವೃದ್ಧಿಯೂ ಆಗಿಲ್ಲವೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಈ ಹರಿಜನರು ಬಹಳ ಹಿಂದುಳಿದವರು, ಬಡವರ್ಗಕ್ಕೆ ಸೇರಿದವರು, ಕೀಳು ತರಗತಿಯ ವರ್ಗಕ್ಕೆ ಸೇರಿದವರು, ಇಡೀ ಹಿಂದೂ ದೇಶದಲ್ಲೇ ಇವರು ಬಹಳ ಹಿಂದುಳಿದವರು ಎಂಬುದಾಗಿ ಡಾಕ್ಟರ್ ಅಂಬೇಡ್‌ಕರ್ ಅವರು ಮಹಾತ್ಮ ಗಾಂಧಿಯವರಿಗೆ ತಿಳಿಯಪಡಿಸಿದ್ದಾರೆ. ಭಾರತ ದೇಶದಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆಯಬೇಕಾದ ಸಂದರ್ಭದಲ್ಲಿ, ಈ ಹರಿಜನರು ಅಸ್ಪೃಶ್ಯತೆಯಲ್ಲಿ, ಬಡತನದಲ್ಲಿ ನರಳುವುದನ್ನು ಕಂಡು, ನಾನು ಅಂಥ ಸ್ವಾತಂತ್ರ್ಯವನ್ನು ಪಡೆಯಲಾರೆ ಎಂದು ಮಹಾತ್ಮ ಗಾಂಧಿಯವರು ಹೇಳಿದ ನಿದರ್ಶನವಿದೆ. ಆಗ ಡಾಕ್ಟರ್ ಅಂಬೇಡ್ಕರ್ ಅವರನ್ನು ಮಹಾತ್ಮ ಗಾಂಧಿಯವರು ಮೆಚ್ಚಿಸಿ, ಇನ್ನು 10 ವರ್ಷಗಳಲ್ಲಿ ಹರಿಜನರ ಉದ್ಧಾರ ಮಾಡುವುದಾಗಿ ಹೇಳಿ ಸ್ವಾತಂತ್ರ್ಯವನ್ನು ಪಡೆದರು. ಈಗ ಸ್ವತಂತ್ರ ಬಂದು 20 ವರ್ಷವಾದರೂ ಶೇಕಡ 5ರಷ್ಟು ಕೂಡ ಉದ್ಧಾರವಾಗಿಲ್ಲ ಎಂಬುದು ತಿಳಿದ ಸಂಗತಿ. ಹರಿಜನರಿಗಾಗಿ ಇದ್ದ ಜಮೀನನ್ನು ಹಂಚಿಕೊಡದೆ ಬೇರೆಯವರಿಗೆ ಕೊಡುತ್ತಿದ್ದಾರೆ. ಮನೆ ಕಟ್ಟಿಸಿ ಕೊಡುತ್ತೇವೆ, ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುತ್ತೇವೆಂದು ಹೇಳುತ್ತಾರೆಯೇ ವಿನಾ ಯಾವುದೇ ಅನುಕೂಲಗಳನ್ನು ಮಾಡಿಕೊಡುತ್ತಿಲ್ಲ. ಹರಿಜನರ ಉದ್ಧಾರ ಮಾಡುತ್ತೇವೆ, ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುವ ಸರ್ಕಾರ ಅವರ ಬಗ್ಗೆ ಯಾವ ಒಂದು ನಿರ್ದಿಷ್ಟ ಕ್ರಮ ತೆಗೆದುಕೊಳ್ಳುತ್ತಿಲ್ಲ. ಬಹಳ ನಿರ್ಲಕ್ಷ್ಯದಿಂದ ಇವರನ್ನು ಕಾಣು

ತ್ತಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ದುಃಖ ಬರುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರ ಉದ್ಧಾರ ಎಷ್ಟಾಗಿದೆ ಎಂಬುದನ್ನು ಲೆಕ್ಕ ಹಾಕಿ ನೋಡುವುದಾದರೆ, ಯಾವ ಸುಧಾರಣೆಯಾಗಲಿಲ್ಲ. ಸೋಷಿಯಲ್ ವೆಲ್‌ಫೇರ್ ಆಫೀಸರ್ ಆಗಲೀ, ಈ ಇಲಾಖೆಯ ಮಂತ್ರಿಗಳಾಗಲೀ, ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಾಗಲೀ ಇವರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿಲ್ಲ. ಇವರಿಗಾಗಿ ಇದ್ದ ಭೂಮಿಯನ್ನು ರದ್ದು ಮಾಡಿ ಬೇರೆಯವರಿಗೆ ಕೊಟ್ಟಿದ್ದಾರೆ. ಇದನ್ನು ಸಂಬಂಧಪಟ್ಟವರ ಗಮನಕ್ಕೆ ತಂದರೂ ಸಹ ಅವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದರಿಂದ ನಮಗೆ ಬಹಳ ಪಶ್ಚಾತ್ತಾಪವಾಗಿದೆ. ನಮ್ಮನ್ನು ಕೇಳುವವರೆ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಜನರಿಗಾಗಿ ಇದ್ದ ದರಖಾಸ್ತು ಭೂಮಿಯನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಯವರಿಗೆ ತಿಳಿಸಿದರೂ ಸಹ ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಅಂದರೆ ಈ ಅಧಿಕಾರಿಗಳಿಗೆ ಹರಿಜನರು ಉದ್ಧಾರ ವಾಗುವುದು ಬೇಡವೆಂದು ಕಾಣುತ್ತದೆ. ಇವರು ಮುಂದುವರೆದರೆ ನಾಳೆ ಇವರೇ ಸರ್ಕಾರದ ದೊಡ್ಡ ಅಧಿಕಾರಿಗಳಾಗಿ ಬರಬಹುದೆಂದು ತಿಳಿದು ಯಾವ ರೀತಿಯ ಅನುಕೂಲಗಳನ್ನೂ ಮಾಡಿ ಕೊಡುತ್ತಿಲ್ಲ. ಇವರ ಉದ್ಧಾರಕ್ಕಾಗಿ ಪ್ರತಿ ವರ್ಷ ಕೇವಲ ಎರಡು ಮೂರು ಕೋಟಿ ರೂಪಾಯಿ ಗಳನ್ನು ಇಟ್ಟು, ಖರ್ಚು ಸರಿಯಾಗಿ ಆಗದೆ ಅದರಲ್ಲಿ ಉಳಿದಿದ್ದನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳುತ್ತಿದ್ದಾರೆ. ಕೆಲವರು ಮಹಾತ್ಮ ಗಾಂಧಿಯವರನ್ನೇ ಬೈಯುತ್ತಿದ್ದಾರೆ. ಗಾಂಧಿ ಯವರ ತಲೆ ಸರಿಯಿಲ್ಲವೆಂದು ಹೇಳುವುದನ್ನು ನಾನು ಕೇಳಿದ್ದೇನೆ. ಗಾಂಧಿಯವರು ಇವರ ಉದ್ಧಾರಕ್ಕಾಗಿ ಕೆಲಸ ಮಾಡಿದರು ಎಂಬುದನ್ನು ಕೆಲವರು ಮರೆತಿದ್ದಾರೆ. ಸರ್ಕಾರಿ ಅಧಿಕಾರಿಗಳು ಇವರ ಬಗ್ಗೆ ಉದಾಸೀನ ಮಾಡದೆ ಪರಿಶುದ್ಧವಾದ ಆತ್ಮದಿಂದ, ನಿಜವಾಗಿ ದೇಶದಲ್ಲಿರುವ ಹಿಂದುಳಿ ದವರ ಸೇವೆ ಮಾಡಬೇಕೆನ್ನುವ ಉದ್ದೇಶದಿಂದ ಕೆಲಸ ಮಾಡಬೇಕು. ಸರ್ಕಾರದವರು ಇವರ ಅಭಿವೃದ್ಧಿ ಗಾಗಿ ಇಟ್ಟಿರುವ ಮೂರು ಕೋಟಿ ರೂಪಾಯಿಗಳನ್ನು ಅಧಿಕಾರಿಗಳು ಖರ್ಚು ಮಾಡುವುದು ಅಷ್ಟೇ ಅಲ್ಲ ಅದಕ್ಕೆ ಸರಿಯಾಗಿ ಅವರ ಅಭಿವೃದ್ಧಿಯೂ ಕೂಡ ಆಗಬೇಕು. ಹಿಂದುಳಿದ ವರ್ಗದವರು ಮೇಲೆ ಬರಬೇಕು. ಈ ಇಲಾಖೆಯಲ್ಲಿರುವ ಅಧಿಕಾರಿಗಳು ಉದಾರತೆಯಿಂದ ದುಡಿದು ಇವರನ್ನು ಉದ್ಧಾರ ಮಾಡುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಈ ಬಗ್ಗೆ ಒಂದು ಸಣ್ಣ ವಿಷಯವನ್ನು ಹೇಳು ತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಜನರು ಕಾಲೇಜಿಗೆ ಹೋಗುವುದು ಕಡಿಮೆ. ಈ ವರ್ಷ ಹರಿಜನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪಾಸ್ ಮಾಡಿ ಪಿ.ಯು.ಸಿ.ಗೆ ಹೋಗುವ ಸಂದರ್ಭ ಬಂತು. ಆ ಕಾಲೇಜಿಗೆ ಸೇರಿದ ಒಂದು ಹಾಸ್ಟಲ್ ಇದೆ. ಅಲ್ಲಿಗೆ ಸೇರುವವರು ಒಂದು ತಿಂಗಳಿಗೆ 85 ರೂಪಾಯಿ ಗಳಿಂದ 150 ರೂಪಾಯಿಗಳವರೆಗೆ ಕೊಡಬೇಕು. ಕೋಟ್ಯಾಧೀಶರ ಮಕ್ಕಳೇ ಅಲ್ಲಿ ಇರುವುದು. ಕಾಲೇಜಿಗೆ ಸೇರಿದ ಹರಿಜನ ವಿದ್ಯಾರ್ಥಿಗಳಿಗೆ ಸರ್ಕಾರ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಕೊಡು ವುದು ಕೇವಲ 75 ರೂಪಾಯಿಗಳು. ಈ ಹರಿಜನ ವಿದ್ಯಾರ್ಥಿಗಳನ್ನು ಅಲ್ಲಿರುವ ಹರಿಜನ (ಜನರಲ್) ಹೈಸ್ಕೂಲ್ ಹಾಸ್ಟಲ್‌ಗೆ ಸೇರಿಸಲು ಸರ್ಕಾರದಿಂದ ಯಾವ ಆರ್ಡರ್ ಕೂಡ ಇಲ್ಲ. ಈ ವಿಚಾರವನ್ನು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯವರ ಗಮನಕ್ಕೆ ತಂದಾಗ ಅವರು ಒಂದು ರೀತಿಯ ನಿರ್ಲಕ್ಷ್ಯದಿಂದ ಏನೂ ಮಾಡುವುದಕ್ಕಾಗುವುದಿಲ್ಲ, ಕಾನೂನಿನಲ್ಲಿ ಅವಕಾಶವಿಲ್ಲವೆಂದು ಹೇಳಿದರು. ಬರೀ ಒಂದು ಕಾನೂನು ಇಟ್ಟುಕೊಂಡು ಕೆಲಸ ಮಾಡುವುದಾದರೆ ಹರಿಜನರ ಉದ್ಧಾರವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಹರಿಜನರ ಸಂಸ್ಥೆ ಉದ್ಧಾರವಾಗಬೇಕಾದರೆ ಕಾನೂನನ್ನು ಸ್ವಲ್ಪ ಸಡಿಲ ಮಾಡಬೇಕು. ಅಧಿಕಾರೀ ವರ್ಗದವರು, ಸರ್ಕಾರದವರು ಮತ್ತು ಈ ಇಲಾಖೆಯ ಮಂತ್ರಿಗಳು ಈ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳದಿದ್ದರೆ ಕಾಲೇಜಿನಲ್ಲಿ ಕಲಿಯುವ ಹರಿಜನ ಮಕ್ಕಳಿಗೆ ತೊಂದರೆಯಾಗುತ್ತದೆ. ಇನ್ನು ಮುಂದಾದರೂ ಈ ಹರಿಜನರ ಉದ್ಧಾರಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಮತ್ತು ಅಧಿಕಾರಿವರ್ಗದವರು ಕೊಡುತ್ತಾರೆಂದು ನಂಬುತ್ತೇನೆ. ಈಗತಾನೆ ಈ ಇಲಾಖೆಗೆ ಬಂದಿರುವ ಮಂತ್ರಿಗಳು, ಹಿಂದೆ ವ್ಯವಸಾಯದ ಮಂತ್ರಿಗಳಾಗಿದ್ದರೆಂದು ತಿಳಿದಿದ್ದೇನೆ, ನಮ್ಮ ಸಮಾಜದ ಮೇಲೆ ಅಭಿಮಾನ ಇಟ್ಟುಕೊಂಡು, ನಮ್ಮ ಸಮಾಜಕ್ಕೆ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಬಹುದೆಂದು ತಿಳಿದು ಈ ಇಲಾಖೆಯನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಡಲೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಈ ಇಲಾಖೆಗೆ ಬಂದ ಮಂತ್ರಿಗಳು ಬರೀ ಭಾಷಣಗಳನ್ನು ಮಾತ್ರ ಮಾಡಿದರೇ ಹೊರತು, ಇವರ ಉದ್ಧಾರಕ್ಕಾಗಿ ಯಾವ ಹೆಚ್ಚಿನ ಕೆಲಸಗಳನ್ನೂ ಮಾಡಿದ್ದು ಕಂಡುಬರಲಿಲ್ಲ. ಈ ಮಂತ್ರಿಗಳು ನಮ್ಮ ಸಮಾಜ ಕಲ್ಯಾಣದ ಬಗ್ಗೆ ಹೆಚ್ಚು ಲಕ್ಷ್ಯಕೊಟ್ಟು ಈಗ ಈ ಬಾಬಿಗೆ ಇಟ್ಟಿರುವ ಹಣವನ್ನು ಹರಿಜನರ ಉದ್ಧಾರಕ್ಕಾಗಿ ಖರ್ಚುಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇವರಿಗೆ ಬೇಕಾದ ಮನೆಗಳನ್ನು ಕಟ್ಟಿಸಿಕೊಡಬೇಕು. ಉಚಿತ ವಿದ್ಯಾಭ್ಯಾಸವನ್ನು ಕಲ್ಪಿಸಿಕೊಡಬೇಕು. ಸೊಸೈಟಿಗಳ ಮೂಲಕ

(ಶ್ರೀ ಎ. ರಾಮಚಂದ್ರ)

ಇವರಿಗೆ ಮೂರು ಸಾವಿರ ರೂಪಾಯಿಗಳವರೆಗೆ ಸಾಲವನ್ನು ಮನೆ ಕಟ್ಟಿಕೊಳ್ಳಲು ಕೊಡುತ್ತಾರೆ. ಆದರೆ ಸಾಲ ತೆಗೆದುಕೊಂಡವರಿಗೆ ವಾಪಸ್ ಕೊಡುವುದಕ್ಕೆ ಅನುಕೂಲವಿರುವುದಿಲ್ಲ. ಮೂರು ಕಂತುಗಳನ್ನು ಕೊಡುವುದು ನಿಲ್ಲಿಸಿದರೆ ಅವನ ಮನೆಯನ್ನು ಹರಾಜುಮಾಡುತ್ತಾರೆ. ಇದರಿಂದ ಹರಿಜನರ ಕೈಯಿಂದ ಮನೆಯನ್ನು ಕಿತ್ತುಕೊಂಡಂತೆ ಆಗುತ್ತದೆ. ಆದ್ದರಿಂದ ಸರ್ಕಾರದವರು ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಒಂದು ಸಾವಿರ ರೂಪಾಯಿಗಳನ್ನು ಸಹಾಯ ಧನದ ರೂಪದಲ್ಲಿ ಕೊಟ್ಟು ಹೆಚ್ಚು ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳಲು ಅನೇಕ ವಿಷಯಗಳಿವೆ. ಸೂಳ್ಯ ಕ್ಷೇತ್ರದಲ್ಲಿ ಬಹಳ ಜನ ಹರಿಜನರು ಇದ್ದಾರೆ. ಅಲ್ಲಿ ಹರಿಜನರ ಸ್ಥಿತಿ ಹೇಗೆ ಇದೆ ಎಂಬ ವಿಷಯವನ್ನು ತೋರಿಸಲಿಕ್ಕೆ ಮಂತ್ರಿವರ್ಯರನ್ನು ಬೇಕಾದರೆ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಅಜ್ಜಾವರ ಗ್ರಾಮದಲ್ಲಿ ಒಂದು ಕಡೆ ಸುಮಾರು ಅರ್ಧ ಎಕರೆ ಜಮೀನಿನಲ್ಲಿ 600 ಜನ ಕುಳಿತುಕೊಂಡಿದ್ದಾರೆ. ಅವರಿಗಾಗಿ ಒಂದು ಸರಿಯಾದ ಕಾಲೋನಿ ಮಾಡಿಲ್ಲ, ಬೇರೆಯವರಿಗೆ ಎಲ್ಲೋ ಒಂದು ಸ್ಥಳದಲ್ಲಿ ಮಾಡಿದ್ದಾರೆ. ಅದರಿಂದ ನಿಜವಾಗಿಯೂ ಪ್ರಯೋಜನವಿಲ್ಲ. ಆದ್ದರಿಂದ ಅಲ್ಲಿರತಕ್ಕ 600 ಜನರಿಗೆ ಆದಷ್ಟು ಬೇಗ ದರಖಾಸ್ತು ಮೂಲಕ ಭೂಮಿಯನ್ನು ಕೊಟ್ಟು ಅವರಿಗೆ ಮನೆಗಳ ಏರ್ಪಾಡು ಮಾಡಬೇಕೆಂದು ಮಂತ್ರಿವರ್ಯರನ್ನು ಪ್ರಾರ್ಥನೆ ಮಾಡಿ, ನನಗೆ ಕೊಟ್ಟ ಅಲ್ಪ ಸಮಯಕ್ಕೆ ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ತಮ್ಮಣ್ಣ (ಕುಣಿಗಲ್).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಸಮಾಜ ಕಲ್ಯಾಣ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದಂತಹ ಬೇಡಿಕೆಗಳನ್ನು ಇಟ್ಟಿದ್ದಾರೆ, ಇದನ್ನು ನಾನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನಾಡಬೇಕೆಂದು ಅಪೇಕ್ಷೆಪಟ್ಟಿದ್ದೇನೆ. ಇದುವರೆಗೂ ಮಾನ್ಯ ಮಿತ್ರರು ಹರಿಜನರ ಏಳಿಗೆಗೆ ಮತ್ತು ಗಿರಿಜನರ ಉದ್ಧಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಾನೂ ಕೂಡ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಅಪೇಕ್ಷೆ ಮಾಡುತ್ತಾ ಇದ್ದೇನೆ. ಹರಿಜನರ ಮತ್ತು ಗಿರಿಜನರ ಏಳಿಗೆ ಸುಮಾರು ಈ 20 ವರ್ಷಗಳಿಂದ ಏನೂ ಪ್ರಗತಿಯಾಗಿಲ್ಲ ಎಂದು ಹೇಳಿರುವುದು ಅಷ್ಟು ಒಳ್ಳೆಯದಲ್ಲ ಮತ್ತು ಅದು ವಾಸ್ತವಾಂಶವಲ್ಲ ಎಂದು ನಾನು ಮನಃಪೂರ್ವಕವಾಗಿ ಹೇಳುತ್ತೇನೆ. ನಮ್ಮ ಭಾರತ ಸ್ವತಂತ್ರವಾದ ಮೇಲೆ ಹರಿಜನ, ಗಿರಿಜನರ ಉದ್ಧಾರಕ್ಕಾಗಿ ನಮ್ಮ ಸರ್ಕಾರ ಎಷ್ಟು ದೂರ ಮುಂದೆ ಹೋಗಿ ಕೆಲಸ ಮಾಡಿದೆ ಎಂದರೆ, ಅವರುಗಳು ಇವತ್ತಿನ ದಿವಸ ನಮಗಾಗಿ ಏನು ಮಾಡಿದ್ದೀರಿ ಎಂದು ಕೇಳುವಂತಹ ಮಟ್ಟಕ್ಕೆ ಬಂದಿದ್ದಾರೆ. 20 ವರ್ಷಗಳ ಹಿಂದೆ ಇಷ್ಟರ ಮಟ್ಟಿನ ಶಕ್ತಿ ಅವರಲ್ಲಿ ಇರಲಿಲ್ಲ, ಇವತ್ತು ಹೇಳಬೇಕಾದರೆ ಇವತ್ತು ನಮ್ಮ ಮುಂದೆ ಇರುವಂತಹ ಉಪಾಧ್ಯಕ್ಷರು ಹರಿಜನರು, ಇದಕ್ಕಿಂತಲೂ ಹೆಚ್ಚಿನ ನಿದರ್ಶನ ಯಾವುದೂ ಬೇಕಾಗಿಲ್ಲ. ಅನ್ನಕ್ಕಾಗಿ ನಾವು ಕೈ ಒಡ್ಡುತ್ತೇವೆ, ಭೂಮಿಗಾಗಿ ಕೈ ಒಡ್ಡುತ್ತೇವೆ. ಭೂಮಿಯ ವ್ಯವಹಾರವನ್ನು ನೋಡಿಕೊಳ್ಳತಕ್ಕ ಖಾತೆಯ ಮಂತ್ರಿ ಒಬ್ಬರು ಹರಿಜನರು ಆಗಿದ್ದಾರೆ ಎಂದರೆ ಇದಕ್ಕಿಂತಲೂ ಹೆಚ್ಚೇನು ಆಗಬೇಕು ಎಂದು ಅನ್ನುವುದರಲ್ಲಿ ತಪ್ಪೇನು ? ಬಹಳ ದೂರ ಸರ್ಕಾರ ಸಾಧನೆ ಮಾಡಿದೆ, ಹರಿಜನ, ಗಿರಿಜನರ ವಿಷಯದಲ್ಲಿ ಅವರ ಕಲ್ಯಾಣಕ್ಕಾಗಿ, ಅವರ ಅಭಿವೃದ್ಧಿಗಾಗಿ ದುಡಿದಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೂ ಕೂಡ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಈ ಜನಾಂಗ ಹಿಂದುಳಿದಿದೆ ಎಂದು ಹೇಳಿದರೆ ತಪ್ಪಾಗಲಾರದು. ಏನು ಯೋಜನೆ ಹಾಕಿದರೂ ಕೂಡ ಮಾನಸಿಕವಾಗಿ ಬದಲಾವಣೆಯಾಗುವಂತಹ ಯೋಜನೆಯನ್ನು ಹಾಕಿ ಆ ಮೂಲಕವಾಗಿ ಸಾಧನೆ ಮಾಡಿಲ್ಲ ಎಂದು ಹೇಳಿದರೆ ಅದರಲ್ಲಿ ತಪ್ಪೇನೂ ಇಲ್ಲ. ಸವರ್ಣೀಯರು ಹರಿಜನರ ವಿಷಯದಲ್ಲಿ ಹೊಂದಾಣಿಕೆ, ಉತ್ಸಾಹ, ಪ್ರೀತಿಯನ್ನು ತೋರಿಸುತ್ತಾ ಇಲ್ಲ ಎಂದು ಅನ್ನುವುದು ಸರ್ವಥಾ ಅಸತ್ಯ ಎಂದು ಹೇಳಬಲ್ಲೆ. ಸವರ್ಣೀಯರು ಸದಾ ಹರಿಜನರ ವಿಷಯದಲ್ಲಿ ಸಹಾನುಭೂತಿ, ದಯೆ, ಕರುಣೆ ಉಳ್ಳವರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಯಾವ ಸವರ್ಣೀಯರೂ ಕೂಡ ಹರಿಜನರ ವಿಷಯದಲ್ಲಿ ನಿರ್ದಾಕ್ಷಿಣ್ಯವಾಗಿ ಅಥವಾ ಕಠೋರವಾಗಿ ವರ್ತನೆ ಮಾಡಿಲ್ಲ, ಸವರ್ಣೀಯರು ಹರಿಜನರ ಉದ್ಧಾರಕ್ಕಾಗಿ ದುಡಿಯುತ್ತಿರುವವರು ಬಹಳ ಜನ ಇದ್ದಾರೆ. ಹರಿಜನರ ಉದ್ಧಾರವಾದರೇನೇ ನಮ್ಮ ಭಾರತ ದೇಶ ತಲೆ ಎತ್ತಿ ನಿಲ್ಲುವಂತಹ ಶಕ್ತಿಯನ್ನು ಹೊಂದೀತು ಎಂದು ಹೇಳುತ್ತಾ ಇದ್ದಾರೆ. ಈಗ ಇಲ್ಲಿ ಮಾತನಾಡಿರುವಂತಹ ಸದಸ್ಯರು ಎಲ್ಲರೂ ಕೂಡ ಈಗ ಅವರಿಗೆ ಒದಗಿಸಿರುವ ಹಣ ಸಾಲದು ಎಂದು ಹೇಳಿದ್ದಾರೆಯೇ ಹೊರತು ಅವರಿಗೆ ಆಗಿರತಕ್ಕ ಸೌಲಭ್ಯಗಳೇನು ಎಂಬುದನ್ನು ಹೇಳಿರುವುದು ಬಹಳ ಕಡಿಮೆ. ಆದ್ದರಿಂದ ನಾನು ಹೇಳುವುದು ಇಷ್ಟೆ. ನಮ್ಮ ಸ್ನೇಹಿತರುಗಳು ಹೇಳಿರುವಂತೆ ಈಗ ತಾವು ಅವರ ಬಗ್ಗೆ ಒದಗಿಸಿರತಕ್ಕ ಹಣ ಬಹಳ ಸ್ವಲ್ಪ, ಅದು ಸಾಲದು, ಎಸ್ಟಾಬ್ಲಿಷ್‌ಮೆಂಟ್ ಕಳೆದು ಸುಮಾರು ಪರ್‌ಕ್ಯಾಪಿಟಾ ಎರಡು ರೂಪಾಯಿ ಬರುತ್ತದೆ. ಇದರಿಂದ ಯಾವುದನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಈ ಹಣವನ್ನು ಇನ್ನೂ ಕೂಡ ಜಾಸ್ತಿಯಾಗಿ ಕೊಡಬೇಕೆಂದು ಹೇಳುತ್ತಾ ಇದ್ದೇನೆ.

ಈ ಯೋಜನೆಗಳನ್ನು ಮಾಡುವಾಗ ಹತ್ತಾರು ವರ್ಷಗಳಿಂದ ಹರಿಜನರ ಏಳಿಗೆಯ ವಿಷಯದಲ್ಲಿ ಮಹತ್ತರವಾದ ಫಲವನ್ನು ನಿರೀಕ್ಷೆ ಮಾಡುತ್ತಾ ಇದ್ದೇವೆ. ಹರಿಜನರ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಸರ್ಕಾರದವರು ಇನ್ನೂ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳು ಇನ್ನೂ ಜಾಸ್ತಿಯಾಗಬೇಕು. ಹೆಣ್ಣು ಮತ್ತು ಗಂಡು ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಇನ್ನೂ ಹೆಚ್ಚಿನ ಗಮನವನ್ನು ಕೊಡಬೇಕು. ಹೆಣ್ಣು ಮಕ್ಕಳಿಗೆ ಬದಲಾಗಿ ಗಂಡುಮಕ್ಕಳಿಗೆ ಬಲಾತ್ಕಾರ ವಿದ್ಯಾಭ್ಯಾಸ 5 ವರ್ಷದಿಂದ 14 ವರ್ಷದವರೆಗೂ ಕೊಟ್ಟು ಹತ್ತಾರು ವರ್ಷಗಳಲ್ಲಿ ಅವರ ಏಳಿಗೆಯಾಗುವಂತೆ ಮಾಡಬೇಕೆಂದು ನನಗಂತೂ ಮಹತ್ತರವಾದ ಆಶೆ ಇದೆ.

ಕೆಲವು ಮಾನ್ಯ ಸದಸ್ಯರು ನಮ್ಮಲ್ಲೇ ಇನ್ನೂ ಭೇದ ಭಾವ ಇದೆ ಎಂದು ಹೇಳಿದರು. ಅದಕ್ಕೋಸ್ಕರವೇ ಹಾಸ್ಟೆಲುಗಳಲ್ಲಿ ಸವರ್ಣೀಯರ ಮಕ್ಕಳನ್ನೂ ಸೇರಿಸಬೇಕೆಂದು ಆಜ್ಞೆ ಮಾಡಿದ್ದಾರೆ, ಆದರೆ ಯಾರೂ ಕೂಡ ಸಾಕಷ್ಟು ಸಂಖ್ಯೆಯಲ್ಲಿ ಸೇರುತ್ತಾ ಇಲ್ಲ ಆದ್ದರಿಂದ ಹಣ ಲ್ಯಾಪ್ಸ್ ಆಗುತ್ತಾ ಇದೆ. ಸವರ್ಣೀಯರು ಮತ್ತು ಹರಿಜನರ ಮಕ್ಕಳು ಇಂತಹ ಜನರಲ್ ಹಾಸ್ಟೆಲ್‌ಗಳಲ್ಲಿ ಇರಬೇಕೆಂದು ಹಾಕಿರುವ ಯೋಜನೆ ಒಳ್ಳೆಯದು, ಸೂಕ್ತವಾಗಿದೆ, ಉದಾತ್ತವಾದ ಧ್ಯೇಯವನ್ನು ಇಟ್ಟುಕೊಂಡು ಮಾಡಿದ್ದಾರೆ. ಇದನ್ನು ಇನ್ನೂ ಕೂಡ ಬಲಪಡಿಸಬೇಕು ಎಂದು ಹೇಳುತ್ತೇನೆ. ಶ್ರೀಮಾನ್ ಮುನಿಸ್ವಾಮಯ್ಯನವರು ಒಂದು ವಿಷಯವನ್ನು ಹೇಳಿದರು, ನಾವು ಹರಿಜನರ ವಿಷಯವನ್ನು ಮಾತನಾಡುತ್ತಾ ಹೋದರೆ ಶತಮಾನಗಳ ಹಿಂದಿನಿಂದಲೂ ಸವರ್ಣೀಯರಿಗೂ ಹರಿಜನರಿಗೂ ಬಹಳ ನಿಕಟವಾದ ಸಂಪರ್ಕ ಇತ್ತು ಎಂಬುದು ಕಂಡುಬರುತ್ತದೆ. ಪಾಣಿಗ್ರಹಣ ಮಾಡತಕ್ಕ ಕಾಲದಲ್ಲಿ ಅರುಂಧತಿ ನಕ್ಷತ್ರವನ್ನು ತೋರಿಸುವ ಸಂಪ್ರದಾಯ ಅನುಸರಿಸುತ್ತಾ ಬಂದಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಶ್ರೀಮಾನ್ ನಾರಾಯಣಗೌಡರು ಹರಿಜನರ ವಿಚಾರದಲ್ಲಿ ಪ್ರೀತಿ, ವಿಶ್ವಾಸ ಉಳ್ಳವರಾಗಿದ್ದಾರೆ. ಆದರೂ ಕೂಡ ಶ್ರೀಮಾನ್ ರಾಚಯ್ಯನವರು ಈ ಖಾತೆಯನ್ನು ವಹಿಸಿದ್ದರೆ ಅವರ ಕಾಲದಲ್ಲಿ ಈ ಜನರ ಏಳಿಗೆಯನ್ನು ಕಣ್ಣಾರ ನೋಡಬಹುದಾಗಿತ್ತು ಎಂದು ನನ್ನ ಆಶೆಯಾಗಿದೆ.

ಇನ್ನು ಸಂಚಾರಿ ಮತ್ತು ಅರೆಸಂಚಾರಿ ಜನರ ವಿಷಯದಲ್ಲೂ ಕೂಡ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ; ಅವರನ್ನು ಕೇಳುವಂತಹ ಜನರೇ ಯಾರೂ ಇಲ್ಲ ಎಂದು ಹೇಳುತ್ತಾ ಇದ್ದೇನೆ. ಕೊನೆಯದಾಗಿ ಏನೂ ಪ್ರಾತಿನಿಧ್ಯವೇ ಇಲ್ಲದಿರತಕ್ಕ ಕುಂಬಾರ, ಗಾಣಿಗ, ನಾಯಿಂದ ಇಂತಹ ಜನರನ್ನು ಯಾವ ಗುಂಪಿಗೆ ಸೇರಿಸಬೇಕು ಎಂಬ ವಿಷಯವನ್ನೂ ಸರ್ಕಾರದವರ ಯೋಚನೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಇಷ್ಟು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

†ಶ್ರೀ ಎಚ್. ಪುಟ್ಟದಾಸ (ನಾತನೂರು).—ಮಾನ್ಯ ಸಭಾಪತಿಗಳೇ ಸಮಾಜ ಕಲ್ಯಾಣ ಸೇವೆಯ ಬಾಬಿಗೆ ಸಮ್ಮಂಧಪಟ್ಟ ಇಲಾಖೆಯ ಮಂತ್ರಿಗಳು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಮನವಿಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಹಾಗೆ ವಿರೋಧಿಸುವಾಗ ಕೆಲವು ವಿಷಯಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ವಿಚಾರವಾಗಿ ಈಗಾಗಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆದರೆ ಇಲ್ಲಿ ಹೇಳಿರತಕ್ಕ 2 ಕೋಟಿ 98 ಲಕ್ಷದ 65 ಸಾವಿರ ರೂಪಾಯಿಗಳು ಕೇವಲ ಹರಿಜನರಿಗೇ ವೆಚ್ಚವಾಗುತ್ತಿದೆ ಎಂಬ ಭಾವನೆ ಕೆಲವರಲ್ಲಿದ್ದಹಾಗೆ ಕಂಡುಬರುತ್ತದೆ. ಆದರೆ ಈ ಸಮಾಜ ಕಲ್ಯಾಣ ಬಾಬಿನಲ್ಲಿ ಯಾರು ಯಾರು ಸೇರುತ್ತಾರೆ ಎಂದರೆ ಯಾರು ಸಮಾಜಕ್ಕೆ ಬೇಡವಾಗಿದ್ದಾರೋ ಅಂಥಹರು ಮಾತ್ರ ಈ ಬಾಬಿನಲ್ಲಿ ಬರುತ್ತಾರೆ. ಇದರ ವ್ಯಾಪ್ತಿಯಲ್ಲಿ ಇನ್ನೂ ಯಾರು ಯಾರು ಸೇರುತ್ತಾರೆಂದರೆ ಯಾರ ಆರ್ಥಿಕ ಪರಿಸ್ಥಿತಿ ತೀರಾ ಭೀಕರವಾದ ಮಟ್ಟದಲ್ಲಿರುತ್ತದೆಯೋ ಅವರು, ಕೆಲವು ವಿಷಮಸನ್ನಿವೇಶಕ್ಕೆ ತುತ್ತಾದ ದುರ್ನಡತೆಯಲ್ಲಿರುವ ಹೆಣ್ಣುಮಕ್ಕಳೂ ಮತ್ತು ಜೈಲಿನಿಂದ ಹೊರಗೆ ಬಂದನಂತರ ಯಾರಿಗೆ ಜೀವನಕ್ಕೆ ಒಂದು ಗತಿಯಿರುವುದಿಲ್ಲವೋ ಅಂಥವರೆಲ್ಲರೂ ಇದರಲ್ಲಿ ಸೇರಿದ್ದಾರೆ. ಈ ಹಣದಲ್ಲಿ ಇವರೆಲ್ಲರ ಕಲ್ಯಾಣವೂ ಆಗಬೇಕಾಗಿದೆ; ಇಷ್ಟು ಜನರ ರಕ್ಷಣೆಯಾಗಬೇಕಾಗಿದೆ. ಹೀಗೆ ಹಲವಾರು ಪಂಗಡಗಳನ್ನು ಒಟ್ಟುಗೂಡಿಸಿ ಇವರೆಲ್ಲರಿಗೂ ಅನುಕೂಲವನ್ನು ಕಲ್ಪಿಸಿಕೊಡುತ್ತೇವೆಂದು ಸರ್ಕಾರದವರು ಹೇಳಿರತಕ್ಕದ್ದು ನನಗೆ ಹೇಗೆ ಕಂಡುಬರುತ್ತಿದೆ ಎಂದರೆ – ಒಂದು ದೊಡ್ಡ ಸಮುದ್ರದಲ್ಲಿ ಒಂದು ಚಿಳ್ಳೆ ಮೀನನ್ನು ಬಿಟ್ಟು ಅದನ್ನು ಎಲ್ಲರೂ ಕೈಹಾಕಿ ಹಿಡಿಯಿರಿ ಎಂದು ಹೇಳಿದಹಾಗಿದೆ ಇದು. ಈ ಹಿಂದೆ ಮಾತನಾಡಿದ ಒಬ್ಬ ಮಾನ್ಯ ಸದಸ್ಯರು ಇವರಿಗೆ ಕೊಟ್ಟಿರತಕ್ಕ ದುಡ್ಡೆಲ್ಲಾ ಖರ್ಚಾಗಿದೆ ಎಂದು ಹೇಳಿದರು. ಇನ್ನೊಬ್ಬ ಮಾನ್ಯ ಸದಸ್ಯರು ಸರ್ಕಾರದವರು ಹರಿಜನರ ಉದ್ಧಾರಕ್ಕೆ ಈ ಹಣ ನಮಗೆ ಸಾಲದು ಎನ್ನುವಷ್ಟರಮಟ್ಟಿಗೆ ಅವರ ಅಭಿವೃದ್ಧಿಗೆ

(ಶ್ರೀ ಎಚ್. ಪುಟ್ಟದಾಸ)

ಹಣವನ್ನು ಒದಗಿಸಲಾಗಿದೆ ಎಂದು ಹೇಳಿದರು. ಆದರೆ ಈ ಬಾಬನ್ನು ಅವರ ಕೈಗೆ ಕೊಟ್ಟಿದ್ದರೇನಾದರೂ ಉದ್ಧಾರವಾಗುತ್ತಿದ್ದರೇನೋ ಅದು ಹೇಳಲಾರೆ. ನಮ್ಮ ಕಳೆದ 20 ವರ್ಷಗಳ ಅನುಭವದಲ್ಲಿ ನಮ್ಮ ಹರಿಜನರ ಅಭಿವೃದ್ಧಿಯ ಬಗ್ಗೆ ಸರ್ಕಾರದವರೇನೂ ಅಂಥಾ ಒಂದು ಬೆನ್ನುತಟ್ಟಿಕೊಳ್ಳುವ ಕಾರ್ಯವನ್ನು ಸಾಧಿಸಿಲ್ಲ. ಹಿಂದೆ ಇದ್ದ ಶ್ರೀ ಸಿ. ಆರ್. ರೆಡ್ಡಿಯವರೂ ಮತ್ತು ಗೋಪಾಲಸ್ವಾಮಿ ಅಯ್ಯರ್ ಅವರೂ ಶ್ರಮಿಸಿ ಸಾಧಿಸಿದ ಫಲದಿಂದ ಇಂದು ಇವರಿಗೆ ಸ್ವಲ್ಪ ಶಕ್ತಿ ಬಂದಿದೆ. ಇದರಲ್ಲಿ ಸರ್ಕಾರದವರ ಸಾಹಸವೇನೂ ಇಲ್ಲ. ಇನ್ನು ನಮ್ಮ ರಾಜ್ಯಾಂಗದಲ್ಲಿ ಹರಿಜನರ ಉದ್ಧಾರಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಅನೇಕ ವಿಚಾರಗಳನ್ನು ಅದರಲ್ಲಿ ಹೇಳಲಾಗಿದೆ. ಆದರೆ ಇಲ್ಲಿಯವರೆಗೂ ಇದನ್ನೊಂದು ಜಾತೀಯ ಪಶ್ನೆಯನ್ನಾಗಿ ಪರಿಗಣಿಸಲಾಗುತ್ತಿದೆಯೇ ವಿನಾ ಇದನ್ನೊಂದು ರಾಷ್ಟ್ರೀಯ ಪ್ರಶ್ನೆಯನ್ನಾಗಿ ಯಾರೂ ಪರಿಗಣಿಸುತ್ತಿಲ್ಲ. ಇದನ್ನು ಕೆಲವು ಮಂದಿ ಹರಿಜನ ಸದಸ್ಯರಾಗಲೀ ಅಥವಾ ಒಬ್ಬಿಬ್ಬರು ಹರಿಜನ ಮಂತ್ರಿಗಳಾಗಲಿ ಸಾಧಿಸುತ್ತೇವೆಂದು ಪೇಳತಕ್ಕ ಕಾರ್ಯವಲ್ಲ ಇದು. ಹಾಗೆ ಸಾಧಿಸುವುದಕ್ಕೆ ಸಾಧ್ಯವೂ ಇಲ್ಲ. ಈ ದಿವಸ ಪ್ರತಿಯೊಂದು ತರಗತಿಯ ಹಾಗೂ ದರ್ಜೆಯ ನೌಕರಿಗಳಲ್ಲಿ ಇವರಿಗೆ ಶೇ 18 ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ರಾಜ್ಯಾಂಗದಲ್ಲಿ ಹೇಳಿದೆ. ಹೀಗೆ ಏನು ಒಂದನ್ನು ರಾಜ್ಯಾಂಗದಲ್ಲಿ ಹೇಳಿದ್ದಾರೋ ಅದು ರಾಜ್ಯಾಂಗದಲ್ಲೇ ಉಳಿದಿದೆ. ಅದನ್ನು ಜಾರಿಗೆ ತರುವುದಕ್ಕೆ ತಕ್ಕ ಸರ್ವೀಸ್ ರೂಲ್ಸ್‌ಗಳನ್ನು ಸರ್ಕಾರದವರಿನ್ನೂ ರಚಿಸಿಲ್ಲ. ಆದ್ದರಿಂದ ರಾಜ್ಯಾಂಗದಲ್ಲಿ ಹೇಳಿದ್ದುದು ಜಾರಿಗೆ ಬಂದಹಾಗೆ ಆಗಲಿಲ್ಲ.

ಈ ಒಂದು ವಿಚಾರವನ್ನು ನಮ್ಮ ಸರ್ವೀಸ್ ರೂಲ್ಸ್ ಮತ್ತು ರೆಗ್ಯುಲೇಷನ್‌ಗಳಲ್ಲಿ ಸೇರಿಸದಿದ್ದರೆ ಅದನ್ನು ಜಾರಿಗೆ ತರುವುದಕ್ಕೆ ಅವಕಾಶವೇ ಇರುವುದಿಲ್ಲ. ಎಲ್ಲಾ ದರ್ಜೆಯ ಸರ್ವೀಸ್ ಕಂಡೀಷನ್‌ಗಳಲ್ಲಿಯೂ ಇವರಿಗೆ ರಾಜ್ಯಾಂಗಬದ್ಧವಾಗಿ ಕೊಡಬೇಕಾದ ಶೇಕಡ 18 ರಷ್ಟು ಸ್ಥಾನಗಳನ್ನು ಕೊಟ್ಟಿರುವುದಿಲ್ಲ. ಇಲ್ಲಿಯವರೆಗೂ ನಮ್ಮ ಸರ್ಕಾರದವರಿನ್ನೂ ಕ್ಲಾಸಿಫಿಕೇಷನ್ ಆಫ್ ಪೋಸ್ಟ್‌ಗಳನ್ನು ಮೈಂಟೈನ್ ಮಾಡಿಲ್ಲ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಿಲ್ಲ ಅಂದಮೇಲೆ ಇನ್ನು ಇವರಿಗೆ ಶೇಕಡ 18 ರಷ್ಟು ಸ್ಥಾನಗಳನ್ನು ಎಲ್ಲಾ ದರ್ಜೆಯ ನೌಕರಿಗಳಲ್ಲೂ ಕೊಡುವುದಕ್ಕಾದರೂ ಹೇಗೆ ಸಾಧ್ಯವಿದೆ ? ಇದರ ಜೊತೆಗೆ ಅನೇಕ ಇಲಾಖೆಗಳಲ್ಲಿ ಟೆಂಪೊರರಿಯಾಗಿ ಅನೇಕರನ್ನು ಕೆಲಸಕ್ಕೆ ನೇಮಿಸಿಕೊಂಡಿರುತ್ತಾರೆ. ಇದರಿಂದಲೂ ಹರಿಜನರಿಗೆ ತುಂಬಾ ಅನ್ಯಾಯವಾಗುತ್ತಿದೆ. ಆದರೆ ಈ ಹಿಂದೆ ಸರ್ಕಾರದವರು ಒಂದು ಘೋಷಣೆಯನ್ನು ಹೊರಡಿಸಿ— ಇನ್ನು ಮುಂದೆ ಹರಿಜನರು ನೌಕರಿಗಳಿಗಾಗಿ ಅಲೆಯಬೇಕಾದುದಿಲ್ಲ. ನೌಕರಿಗಳೇ ಅವರನ್ನು ಅವರ ಮನೆಯಬಾಗಿಲಿಗೆ ಹುಡುಕಿಕೊಂಡು ಹೋಗುವಂಥ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದ್ದರು. ಬಹುಶಃ ಆ ನೌಕರಿಗಳು ಹರಿಜನರನ್ನು ಹುಡುಕಿಕೊಂಡು ಹೋಗಿದ್ದಾಗ ಅವರು ಅವರ ಮನೆಯ ಬಾಗಿಲಲ್ಲಿ ಇದರ ಕಣ್ಣಿಗೂ ಬೀಳದೆ, ಕೈಗೂ ಸಿಕ್ಕದೆ ತಪ್ಪಿಸಿಕೊಂಡಿದ್ದರಿಂದ ಅವು ಹಾಗೇ ವಾಪಸ್ಸು ಬಂದವೊ ಏನೋ ಅದನ್ನೂ ಸಹ ಹೇಳುವುದಕ್ಕಾಗುವುದಿಲ್ಲ.

ಇನ್ನು ಅವರಿಗೆ ಕೊಡುತ್ತಿರುವ ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ ; ಇಲ್ಲಿಯವರೆಗೂ ಇವರಿಗೆ ಕೊಡುತ್ತಿರುವ ವಿದ್ಯೆ ಏನಿದ್ದರೂ ಅದು ಇವರಿಗೊಂದು ಜೀವನಕ್ಕೆ ನೌಕರಿಯನ್ನು ದೊರಕಿಸಲು ಮಾತ್ರ ಸಾಧ್ಯವೇ ವಿನಾ ಇವರನ್ನು ನಿಜವಾದ ವಿದ್ಯಾವಂತರನ್ನಾಗಿ ಮಾಡತಕ್ಕ ಶಕ್ತಿ ಅದರಲ್ಲಿಲ್ಲ. ನಿಜವಾಗಿಯೂ ಹೇಳುವುದಾದರೆ, ಈ ವಿದ್ಯಾಭ್ಯಾಸದಲ್ಲಿ ಯಾರಿಗೆ ಒಂದು ಹೆಚ್ಚಿನ ಅಭಿಲಾಷೆ, ಅಭಿರುಚಿ ಇರುತ್ತದೆಯೋ ಅಂಥವರಿಗೆ ಮಾತ್ರ ಪ್ರವೇಶಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಂಥ ಆಸಕ್ತಿಯಿಲ್ಲದವರಿಗೂ ಇದರಲ್ಲಿ ಅವಕಾಶ ಕಲ್ಪಿಸುವುದಕ್ಕೆ ಇದೇನೂ ಒಂದು ಕಮರ್ಷಿಯಲ್ ಬಿಜಿನೆಸ್ಸಲ್ಲಾ ಇದು. ಹೀಗಾಗಿ ಈ ದಿವಸ ನಿಜವಾಗಿಯೂ ಯಾರಿಗೆ ಈ ವಿದ್ಯಾಭ್ಯಾಸದಲ್ಲಿ ಒಂದು ವಿಶೇಷ ಆಸಕ್ತಿ ಇದೆಯೋ ಅಂಥವರಿಗೆ ಹಾಸ್ಟಲುಗಳನ್ನು ನಡೆಸಲು ಅವಕಾಶ ಸಿಗುತ್ತಿಲ್ಲ. ಈ ದಿವಸ ಅನೇಕರು ವಾಲಂಟಿಯರ್ ಆಗಿ ಇವುಗಳನ್ನು ನಡೆಸುತ್ತೇವೆ ಎಂದು ಮುಂದೆ ನುಗ್ಗುತ್ತಿದ್ದಾರೆ. ಆದುದರಿಂದ ಈ ವಿಚಾರದಲ್ಲಿ ಸಮಾಜ ಕಲ್ಯಾಣ ಸಚಿವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ಹೇಳುತ್ತಿದ್ದೇನೆ. ಕೆಲವರು ಈ ದಿವಸ ಈ ಹರಿಜನರ ಹಾಸ್ಟಲನ್ನು ಒಂದು ಕಮರ್ಷಿಯಲ್ ಬಿಜಿನೆಸ್‌ನಂತೆ ನಡೆಸುತ್ತಿದ್ದಾರೆ. ಇಂಥವರನ್ನು ದೂರ ಇಡಬೇಕು. ಇಂಥವರಿಗೆ ಒಂದು ಘೋರ ಶಿಕ್ಷೆಯನ್ನು ವಿಧಿಸತಕ್ಕಂಥ ಶಾಸನವನ್ನು ಈ ಅಧಿವೇಶನದಲ್ಲಿ ಸಾಧ್ಯವಾಗದಿದ್ದರೆ ಮುಂದಿನ ಅಧಿವೇಶನದಲ್ಲಾದರೂ ತರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿವಸ ಹರಿಜನರನ್ನು ಶೋಷಣೆ ಮಾಡತಕ್ಕಂಥ ಹರಿಜನರು ಇಲ್ಲದೆ ಇಲ್ಲ. ಇಂಥವರನ್ನು ಕ್ರೂರ ಶಿಕ್ಷೆಗೆ ಗುರಿಪಡಿಸಬೇಕು.

ಇನ್ನು ಹರಿಜನರ ಹಾಸ್ಟಲಿಗೆ ಸರಿಯಾಗಿ ವೈದ್ಯಕೀಯ ಅನುಕೂಲಗಳನ್ನು ಕೊಡುತ್ತಿಲ್ಲ. ಅಲ್ಲಿ ಅನೇಕರು ಕಂಟೇಜಿಯಸ್ ಡಿಸೀಜ್‌ಗಳಿಗೆ ಗುರಿಯಾಗುತ್ತಿದ್ದಾರೆ. ಹಾಗೇ ಇವರಿಗೆ ಲೈಬ್ರೆರಿಗಳ ಸೌಲಭ್ಯವನ್ನೂ ಸಹಾ ಒದಗಿಸಿಲ್ಲ. ಇದನ್ನೆಲ್ಲಾ ನೋಡಿದರೆ ಇವರ ವಿದ್ಯಾಭ್ಯಾಸದ ಬಗ್ಗೆ ಸರ್ಕಾರ ಎಷ್ಟು ತೀವ್ರತೆಯಿಂದ ಕಾರ್ಯಕ್ರಮ ಕೈಗೊಂಡಿದೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಬಹುಶಃ 1960ರಲ್ಲೋ ಅಥವಾ 1961ರಲ್ಲೋ ಈ ಹರಿಜನ್ ಹಾಸ್ಟಲುಗಳನ್ನು ಯೂನಿವರ್ಸಿಟಿಗೆ ವರ್ಗಾಯಿಸಲಾಯಿತು. ಆದರೆ ಇವುಗಳನ್ನು ಮೈಂಟೈನ್ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲವೆಂದು ಹೇಳಿದುದರಿಂದ ಮತ್ತೆ ಇವುಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕಾಯಿತು. ಆಗ ಸರ್ಕಾರದವರು ಈ ಹಾಸ್ಟಲುಗಳನ್ನು ಟೆಕ್ನಿಕಲ್ ಹಾಸ್ಟಲ್ಸ್ ಫಾರ್ ಹರಿಜನ್ಸ್ ಅಂತ ಬದಲಾವಣೆ ಮಾಡಿದರು. ಹಾಗೆ ಬದಲಾವಣೆ ಮಾಡಿದನಂತರ ಸರ್ಕಾರದವರು ಪ್ರತಿಯೊಬ್ಬ ಹರಿಜನ ವಿದ್ಯಾರ್ಥಿಗೂ 20 ರೂಪಾಯಿಗಳ ಗ್ರಾಂಟನ್ನು ಕೊಡುತ್ತಿದ್ದರು. ಆದರೆ ಆ ಹುಡುಗರಿಗೆ ಇಂಡಿಯಾ ಸರ್ಕಾರದಿಂದ ಸ್ಕಾಲರ್‌ಷಿಪ್ ಬಂದಮೇಲೆ ಅದನ್ನು ನಿಲ್ಲಿಸಿದರು. ಅಷ್ಟೇ ಅಲ್ಲ ಆ ಹುಡುಗರಿಂದ ಬಿಲ್ಡಿಂಗ್ ಗ್ರಾಂಟ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಛಾರ್ಜು ಎಂತ ಪ್ರತಿಯೊಬ್ಬ ಹುಡುಗನಿಂದಲೂ ತಿಂಗಳಿಗೆ 5 ರೂಪಾಯಿಗಳನ್ನು ಹಿಡಿಯುತ್ತಾ ಬಂದರು. ಹೀಗೆ ಆ ಹಾಸ್ಟಲುಗಳು ಅಕ್ಷರಶಃ ಹುಡುಗರಿಂದಲೇ ನಡೆಸಲ್ಪಡುತ್ತಿದ್ದವು ಎಂಬುದು ಇದರಿಂದ ಗೊತ್ತಾಗುತ್ತದೆ. ಹೀಗೆ ಮಾಡಿರುವಾಗ ಸರ್ಕಾರದವರು ಯಾವ ವಿಚಾರದಲ್ಲಿ ಬೆನ್ನುತಟ್ಟಿಕೊಳ್ಳುವುದಕ್ಕೆ ಅವಕಾಶವಿದೆ ?

ಇನ್ನು ಇವರ ಎಕನಾಮಿಕ್ ಕಂಡೀಷನ್ ವಿಚಾರಕ್ಕೆ ಬಂದರೆ, ಇದನ್ನು ಹೇಳತೀರದಾಗಿದೆ. ಆದುದರಿಂದ ಈ ದಿವಸ ಪಂಜಾಬಿನಲ್ಲಿ ಹೇಗೆ ಅಲ್ಲಿ ಒಂದು ಫೈನಾನ್‌ಷಿಯಲ್ ಕಾರ್ಪೊರೇಷನ್ ಅಂತ ಮಾಡಿ ಅದರ ಮೂಲಕ ಎಲ್ಲರಿಗೂ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆಯೋ ಹಾಗೇ ಇಲ್ಲಿಯೂ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲಿ ಅವರು ತಲಾ ಒಂದಕ್ಕೆ 500 ರೂಪಾಯಿಗಳಿಂದ 5,000 ರೂಪಾಯಿಗಳವರಿಗೆ ಧನ ಸಹಾಯ ಒದಗಿಸುತ್ತಿದ್ದಾರೆ. ಅದನ್ನು ಇಲ್ಲಿಯೂ ಜಾರಿಗೆ ತರವುದು ಒಳ್ಳೆಯದು ಎಂದು ಹೇಳುತ್ತೇನೆ. ಇನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಬೇಸಾಯ ಮಾಡಲು ಯೋಗ್ಯವಾದ ಭೂಮಿ ಇದೆಯೋ ಅದರಲ್ಲಿ ಶೇಕಡ 50ರಷ್ಟನ್ನು ಹರಿಜನರಿಗೆ ಕೊಡಬೇಕೆಂಬ ಒಂದು ಸರ್ಕುಲರ್ ಇತ್ತು. ಅದನ್ನು ಸರ್ಕಾರದವರು ಪಾಲಿಸುತ್ತಿಲ್ಲ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳು ಇದರ ಕಡೆಗೆ ತೀವ್ರ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಆಮೇಲೆ ಅಪ್‌ಸೆಟ್ ಪ್ರೈಸ್ ಎಂದು ಏನಿದೆಯೋ ಅದನ್ನು ತಪ್ಪಿಸಬೇಕು. All the lands should be given free of cost. ಸೋಷಿಯಲ್ ವೆಲ್‌ಫೇರನ್ನು It is a matter of touchables ಎಂದು ಹೇಳಬಹುದು. ಅವರ ಬಗ್ಗೆ ಶ್ರೀ ಗೋಪಾಲಸ್ವಾಮಿ ಮತ್ತು ಶ್ರೀ ಸಿ. ಆರ್. ರೆಡ್ಡಿಯವರು ಎಷ್ಟು ಪರಿಣಾಮಕಾರಿಯಾಗಿ ಕೆಲಸಮಾಡಿದ್ದಾರೆಂದು ಹೇಳುತ್ತೇನೆ. ಒಂದು ಉದಾಹರಣೆ ಮಾತ್ರ ಹೇಳಿದೆ. ಆದ್ದರಿಂದ ಹರಿಜನರ ಪ್ರಗತಿಯನ್ನು ಹರಿಜನರೇ ಬಹಳ ತೀವ್ರಗತಿಯಿಂದ ಮಾಡುವುದಕ್ಕಾಗುವುದಿಲ್ಲ.

ಆಮೇಲೆ ಇವರು ಅನ್‌ಟಚಬಿಲಿಟಿ ಅಫೆನ್ಸಸ್ ಆಕ್ಟನ್ನು ಜಾರಿಗೆ ತರುವ ಸಂದರ್ಭದಲ್ಲಿ ಈಗಿನ ಪೋಲೀಸ್ ವ್ಯವಸ್ಥೆ ಏನಿದೆಯೋ ಅದು ಅಷ್ಟು ಎನ್‌ಫೋರ್ಸ್‌ಮೆಂಟ್ ಧಾರಿಯಲ್ಲ. ಅದಕ್ಕಾಗಿ ಸ್ಪೆಷಲ್ ಪೋಲೀಸ್ ಸ್ಕ್ವ್ಯಾಡ್ ಇರಬೇಕೆಂದು ನಾನು ಸಲಹೆ ಮಾಡುತ್ತೇನೆ.

ಆಮೇಲೆ ಸಮಾಜ ದೃಷ್ಟಿಯಲ್ಲಿ ಪ್ರತಿಯೊಬ್ಬ ಮಾನವನೂ ಸಾಮಾನ್ಯವಾಗಿ ಪ್ರೈಮರಿ ಎಜುಕೇಷನ್ನಿನಲ್ಲಿಯೇ ಮಕ್ಕಳಿಗೆ ಸರಿಯಾದ ಪಾಠಪ್ರವಚನಗಳನ್ನು ಬೋಧಿಸುವ ಕ್ರಮವನ್ನು ಕೂಡಲೇ ಜಾರಿಗೆ ತರಬೇಕೆಂಬುದಾಗಿ ಹೇಳುತ್ತೇನೆ.

ಇನ್ನು ಸ್ವೀಪರ್ಸ್ ಮತ್ತು ಸ್ಕಾವೆಂಜರ್ಸ್ ವಿಷಯವನ್ನು ಯಾರೂ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಆ ಜನಾಂಗದವರು ಸ್ವಲ್ಪಮಟ್ಟಿಗಾದರೂ ಚಟುವಟಿಕೆಯಾಗಿರಬೇಕು, ಅದಕ್ಕೋಸ್ಕರ ಆ ಜನಾಂಗವನ್ನು ಚಟುವಟಿಕೆಯಾಗಿ ಇಡತಕ್ಕ ಪ್ರಯತ್ನವನ್ನು ಈ ಸರ್ಕಾರದವರು ಯಾವತ್ತೂ ಮಾಡಲಿಲ್ಲ.

ಇನ್ನು ಅನಾಥ ಮಕ್ಕಳ ವಿಷಯ. ಅವರೆಲ್ಲರೂ ನಿರಾಶ್ರಿತರಾಗಿ ಅಂಡರ್ ಲಾಕ್ ಅಂಡ್ ಕೀ ಇದ್ದಾರೆ. ಅವರೆಲ್ಲರನ್ನೂ ಒಂದೆಡೆಯಲ್ಲಿಯೇ ಇರಿಸಿರುತ್ತಾರೆ. ಆದರಿಂದ ಅವರ ಕಲ್ಯಾಣ ಅಷ್ಟು ಸುಗಮವಾಗಿ ನಡೆಯಲಾರದು. ಅಲ್ಲದೆ ರಿಮ್ಯಾಂಡ್ ಹೋಂನಲ್ಲಿ ದಾರಿ ತಪ್ಪಿದ ಹೆಣ್ಣುಮಕ್ಕಳನ್ನು ವರ್ಷಾಂತರದವರೆಗೂ ಇಟ್ಟುಕೊಂಡಿದ್ದಾರೆ. ಅವರ ಪುನರುದ್ಧಾರದ ಬಗ್ಗೆ ಸರ್ಕಾರದವರು ಯೋಚನೆಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—What time would the Hon'ble Minister require for his reply ?

Sri G. NARAYANA GOWDA.—I may require about 40 Minutes.

Mr. SPEAKER.—This is a special kind of Demand. Even under the Constitution, the members are allotted special seats. I think, I will allow a little more time so that some more members may participate in the debate.

ಶ್ರೀ ಜಿ. ಬಸವಣ್ಣಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಸಚಿವರು ಮಂಡಿಸಿರುವ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಕೆಲವೊಂದು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಬಳ್ಳಾರಿ ಕ್ಷೇತ್ರದ ಮಾನ್ಯ ಸದಸ್ಯರೊಬ್ಬರು ದಿನಾಂಕ 29-6-67ರಲ್ಲಿ ಭಾಷಣ ಮಾಡುತ್ತಾ ಮತಾಂತರದ ಭೂತಗಳಿಂದ ಹರಿಜನ ಪ್ರಗತಿಗೆ ಧಕ್ಕೆಯಾಗಿದೆ ಎಂಬುದಾಗಿ ಹೇಳಿದರು. ಮತಾಂತರದ ಭೂತಗಳು ಎಂದು ಮಾನ್ಯ ಸದಸ್ಯರು ಹೇಳಿದಾಗ ಅವು ಯಾವ ವರ್ಗಕ್ಕೆ ಸೇರಿದುವು ಎಂಬುದನ್ನು ವಿಶದಪಡಿಸಿಲ್ಲ. ಇತರ ಸದಸ್ಯರ ಬಗ್ಗೆ ಭೂತಗಳು ಎಂಬುದಾಗಿ ಈ ಸಭೆಯಲ್ಲಿ ಉಪಯೋಗಿಸಿರುವುದು ಸಮಯೋಚಿತವಾದುದಲ್ಲ, ಅದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಇನ್ನುಮುಂದೆ ಅಂತಹ ಮಾತುಗಳನ್ನು ಇಂತಹ ಸಭೆಯಲ್ಲಿ ಯಾರೂ ಉಪಯೋಗಿಸದೇ ಇರಬೇಕೆಂದು ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಈ ರಾಷ್ಟ್ರದಲ್ಲಿ ರಾಷ್ಟ್ರದ ಬೆನ್ನುಮೂಳೆಯಂತಿರುವ ರೈತರ ಬೆನ್ನೆಲುಬುಗಳನ್ನು ಮುರಿಯುತ್ತಿದ್ದಾರೆ. ಸಮಾಜದಲ್ಲಿ ಹರಿಜನರು ಬಹಳವಾಗಿ ಕೆಳವರ್ಗಕ್ಕೆ ಸಿಕ್ಕಿದ್ದಾರೆ ಎಂದು ಮಾತನಾಡಿದರು. ಅದನ್ನು ನಾನು ಒಪ್ಪುವುದಿಲ್ಲ. ಮೈಸೂರು ಸರ್ಕಾರ ನಿಮ್ನವರ್ಗದ ಪ್ರಗತಿಗೋಸ್ಕರ ಇತರೇ ರಾಜ್ಯಗಳಿಗಿಂತ ಹೆಚ್ಚಿನ ಸಹಕಾರವನ್ನು ನೀಡಿದೆ ಎಂಬುದಾಗಿ ಹೇಳಿದರೆ ಅದೇನೂ ಅಪ್ಪಾಗಿ ಅತಿಶಯೋಕ್ತಿಯಾಗಲಾರದು. ಇಂಥಾದ್ದರಲ್ಲಿ ಈರೀತಿ ನಿಮ್ನವರ್ಗದವರು ಬೆನ್ನೆಲುಬುಗಳನ್ನು ಮುರಿಯುತ್ತಿದ್ದಾರೆ, ಹಾಗೆ, ಹೀಗೆ ಎಂಬುದಾಗಿ ಮಾತನಾಡುವುದು ನಿಜವಾಗಿ ಒಪ್ಪತಕ್ಕದ್ದಲ್ಲ. ಪರಿಶಿಷ್ಟವರ್ಗದಲ್ಲಿ ಸುಮಾರು 48 ಜಾತಿಯ ಜನಗಳು ಇದ್ದಾರೆ. ಅವರೆಲ್ಲರ ಸರ್ವತೋಮುಖ ಪ್ರಗತಿಯ ವಿಚಾರದಲ್ಲಿ ಸರ್ಕಾರ ಸಾಕಷ್ಟು ಯೋಚಿಸಬೇಕು. ಕಳೆದ 20 ವರ್ಷಗಳಿಂದಲೂ ಕೇವಲ ಒಂದೆರಡು ಕೋಮುಗಳು ಮಾತ್ರ ಪ್ರಗತಿಪಥದಲ್ಲಿ ಮುಂದುವರಿಯುತ್ತಿವೆ. ಅದೇ ರೀತಿಯಾಗಿ ಈ ಈ ಸಮಯದಲ್ಲಿ ಬೋವಿ, ಭಜಂತ್ರಿ ಜನಾಂಗದವರೂ ಇದ್ದಾರೆ. ಭೋವಿ ಜನಾಂಗಗಳ ವಿಷಯವನ್ನು ಹೇಳುವುದಾದರೆ, ಬೋವಿ ಜನಾಂಗದವರು ಸಾವಿರಾರು ವರ್ಷಗಳಿಂದಲೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಹೆಚ್ಚಿಗೆ ದುಡಿದಿದ್ದಾರೆ. ಈ ಸಮಾಜದವರೇ ರಸ್ತೆ, ಕೆರೆ-ಕುಂಟೆ ಮತ್ತು ಕಾಲುವೆಗಳನ್ನು ಮಾಡುವ ಮುಂತಾದ ಇತರೇ ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ಹೆಚ್ಚು ಶ್ರಮಿಸಿ ಆ ಸಮಾಜದ ಪ್ರಗತಿಗೋಸ್ಕರ ದುಡಿಯುತ್ತಿರುವುದು ಪ್ರಶಂಸನೀಯವಾಗಿದೆ. ಸುಮಾರು 8 ಲಕ್ಷ ಇರುವ ಈ ಜನಾಂಗದಲ್ಲಿ ಸಾವಿರಕ್ಕೆ ಒಬ್ಬರೂ ಅನುಕೂಲಸ್ಥರು ಇಲ್ಲ. ವಿದ್ಯಾವಂತರಿಲ್ಲ. ವಿದ್ಯಾವಂತರು ಅಲ್ಪಸ್ವಲ್ಪ ಇದ್ದರೂ ಯಾವ ಸಹಕಾರ ಸೌಲಭ್ಯಗಳು ಅವರಿಗೆ ಇಲ್ಲದಿರುವುದು ನನಗೆ ಬಹಳ ಆಶ್ಚರ್ಯವಾಗಿದೆ. ಆದ್ದರಿಂದ ಪರಿಶಿಷ್ಟವರ್ಗದಲ್ಲಿ ಉಳಿದಿರತಕ್ಕ ಇನ್ನು 46 ಜನಾಂಗಗಳ ಪ್ರಗತಿಗೋಸ್ಕರ ಈ ಸರ್ಕಾರ ಹಾಗೂ ಸಮಾಜ ಕಲ್ಯಾಣಶಾಖೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳುತ್ತೇನೆ. ಅದನ್ನು ಈ ಸಭೆಯ ಮುಂದೆಯೂ ತರುತ್ತಿದ್ದೇನೆ. ಮಿಗಿಲಾಗಿ ಮೈಸೂರು ಸರ್ಕಾರ ಹರಿಜನ ಪ್ರಗತಿಗೆ ಏನೂ ಸಹಾಯಮಾಡಲಿಲ್ಲ, ಅವರ ಬೆನ್ನೆಲುಬನ್ನು ಮುರಿದಿದ್ದಾರೆ ಎಂದು ಕೆಲವರು ಹೇಳಿದ್ದಾರೆ. ಅದು ತಪ್ಪು ಅಭಿಪ್ರಾಯ. ಮೈಸೂರು ಸರ್ಕಾರ ಯಾವಯಾವ ರೂಪದಲ್ಲಿ ಯಾವ್ಯಾವ ರೀತಿಯಲ್ಲಿ ಹರಿಜನರಿಗೆ ಸಹಾಯಮಾಡಿದೆ ಎಂಬುದನ್ನು ನಾನು ಕೆಲವು ಅಂಕಿಅಂಶಗಳಿಂದ ತಿಳಿಸಲಿಚ್ಛಿಸುತ್ತೇನೆ. ಹರಿಜನರ ವಿದ್ಯಾಭಿವೃದ್ಧಿಗೋಸ್ಕರ ಅವರು ಸಾರ್ಥಕವಾದ ರೀತಿಯಲ್ಲಿ ಮುಂದುವರಿಯಲಿ ಎಂಬ ಉದ್ದೇಶದಿಂದ (1961ನೇ ವರದಿ ಪ್ರಕಾರ) 119 ಸರ್ಕಾರಿ ಹಾಸ್ಟಲುಗಳನ್ನು, 63 ಏಡೆಡ್ ಹಾಸ್ಟಲುಗಳನ್ನು, ಅದೂ ಅಲ್ಲದೆ ಮಿಡಲ್ ಸ್ಕೂಲುಗಳಿಂದ ಹೆಚ್ಚಿಗೆ ಕಾಲೇಜು ವ್ಯಾಸಂಗದಲ್ಲಿ ಶೈಕ್ಷಣಿಕ ರಂಗದಲ್ಲಿ ಅವರಿಗೆ ಸ್ಕಾಲರ್‌ಷಿಪ್‌ಗಳನ್ನೂ ಮತ್ತು ಇತರೇ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ. ಅಲ್ಲದೆ ಅವರ ವಿದ್ಯಾರ್ಜನೆ ಮುಗಿದತಕ್ಷಣ ಅವರಿಗೆ ಉದ್ಯೋಗ ರಂಗದಲ್ಲಿ ಅವಕಾಶ ನೀಡಲಾಗಿದೆ. ಉದ್ಯೋಗ ರಂಗದಲ್ಲಿ ಕ್ಲಾಸ್ ಒನ್ ಆಫೀಸರ್ಸ್ 30 ಜನರು ಇದ್ದಾರೆ, ಗೆಜೆಟೆಡ್ ಆಫೀಸರ್ಸ್ 200ಕ್ಕೆ ಮೇಲ್ಪಟ್ಟು ಇದ್ದಾರೆ, ಕ್ಲಾಸ್ 3 ಆಫೀಸರ್ಸ್ 10 ಸಾವಿರಕ್ಕಿಂತಲೂ ಜಾಸ್ತಿ ಇರುತ್ತಾರೆ. ರೈತರ ಪ್ರಗತಿಗೋಸ್ಕರ 110 ವ್ಯವಸಾಯ ಕಾಲೋನಿಗಳನ್ನು ಮಾಡಿಕೊಟ್ಟಿದ್ದಾರೆ. ಇಷ್ಟೊಂದು ಸಹಾಯ ಸೌಲಭ್ಯಗಳನ್ನು ಮಾಡಿಕೊಟ್ಟರೂ ಸರ್ಕಾರದವರನ್ನು ದೂರುವುದು ನಿಜವಾಗಿಯೂ ಯೋಗ್ಯವಾದುದಲ್ಲವೆಂದು ನನ್ನ ಹರಿಜನ ಸ್ನೇಹಿತರಿಗೆ ಹೇಳುತ್ತೇನೆ. ಆದರೆ ಹರಿಜನ ಪ್ರಗತಿ ಇನ್ನೂ ಸರ್ವತೋಮುಖವಾಗಿ ಬೆಳೆಯಬೇಕು ಎಂಬುದಾಗಿ ಹೇಳುವವನಲ್ಲಿ ನಾನೂ ಒಬ್ಬ. ಸಮಾಜ ಕಲ್ಯಾಣ ಇಲಾಖೆ

ಬಡ್ಜೆಟ್ಟಿನಲ್ಲಿ ಏನು ಹಣವನ್ನು ಮೀಸಲಾಗಿಟ್ಟಿದ್ದಾರೋ ಅದು ಏನೇನೂ ಸಾಲದು, ಇನ್ನೂ ಹೆಚ್ಚು ಹಣವನ್ನು ಆ ಬಾಬಿಗೆ ಅಂದರೆ ನಿಮ್ನ ವರ್ಗದ ಒಟ್ಟು ಜನಾಂಗಕ್ಕೆ ಮೀಸಲಾಗಿಡಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆ ರೀತಿ ಹೇಳುವವರಲ್ಲಿ ನಾನೇ ಮೊದಲನೆಯವನು ಪ್ರತಿಯೊಂದು ಜನಾಂಗಕ್ಕೂ ಅದೇ ಉದಾರಭಾವದಿಂದ ಸಹಾಯ ದೊರಕಲಿ ಎಂದು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. 43 ಜನಾಂಗದವರ ಪರವಾಗಿ ನಿಸ್ವಾರ್ಥದಿಂದ ಸೇವೆ ಸಲ್ಲಿಸಿ ಕೆಲಸ ಮಾಡುವ ಪ್ರತಿನಿಧಿಗಳ ಮುಖ್ಯಸ್ಥರು ಬೇಕಾಗಿದೆ. ಎಡಗೈ ಬಲಗೈ ಇವರು ಭೋವಿಗಳು, ಇವರು ಛಣಜಾರರು ಎಂಬ ಭೇದವಿಲ್ಲದೆ ನಿಜವಾಗಿ ದುಡಿಯುವವರಾಗಿರಬೇಕು. ಅಂತಹ ವ್ಯಕ್ತಿಗಳು ಈಗ ಮುಂದೆ ಬರಬೇಕಾಗಿದೆ. ಅಂತಹವರನ್ನು ಸಾಕಷ್ಟು ಪ್ರೋತ್ಸಾಹಿಸಬೇಕು. ಮಾನ್ಯ ಶ್ರೀ ಶ್ರೀಕಂಠಯ್ಯನವರು ಮತ್ತು ಶ್ರೀ ತಮ್ಮಯ್ಯನವರು ಹೇಳಿದಂತೆ ನಮ್ಮ ರಾಷ್ಟ್ರದಲ್ಲಿ ಇನ್ನೂ ಇತರ ಅನೇಕ ಕೋಮುವಾರು ಜನಾಂಗದವರು ಬಹಳವಾಗಿ ಹಿಂದುಳಿದಿದ್ದಾರೆ. ಅವರಲ್ಲಿ ಕೆಲವರು ಬೇಡ, ಬೆಸ್ತ, ವಾಲ್ಮೀಕಿ ಮತ್ತು ದೋಭಿ ಜನಾಂಗದವರು. ಆ ಜನಾಂಗದವರಿಗೂ ಸರ್ಕಾರದವರು ಕೂಡಲೇ ಸಾಕಷ್ಟು ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ರಾಜ್ಯಾಂಗದಲ್ಲಿ ನಮೂದಿಸಿದಂತೆ ಪರಿಶಿಷ್ಟ ವರ್ಗವನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯನ್ನು ನಾನು ವಿರೋಧಿಸುತ್ತಾ ನಾಲ್ಕಾರು ಮಾತುಗಳನ್ನು ಹೇಳಬಯಸುತ್ತೇನೆ. ಈಗತಾನೆ ಮಾನ್ಯ ಸದಸ್ಯರೊಬ್ಬರು ಹೇಳಿದರು ಹರಿಜನರಿಗೆ ಬೇಕಾದಷ್ಟು ಅನುಕೂಲತೆಗಳನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ; ಬೇಕಾದಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ ಎಂದು. 20 ವರ್ಷಗಳ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಹರಿಜನರಲ್ಲಿ ಬೇಕಾದಷ್ಟು ಸುಧಾರಣೆಗಳನ್ನು ಮಾಡಿದ್ದಾರೆ, ಎಂದು ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಇನ್ನು ಕೆಲವು ಮಹನೀಯರು ಹರಿಜನರಿಗೆ ಮನೆಕಟ್ಟುವ ವ್ಯವಸ್ಥೆ ಏನಿದೆಯೋ ಅದಕ್ಕೆ 700 ರೂಪಾಯಿಗಳಾದರೆ ಸಾಕು ಎಂದು ಹೇಳಿದರು. ಈ 700 ರೂಪಾಯಿಗಳಿಂದ ಮಾನ್ಯ ಸದಸ್ಯರ ಮನೆಯಲ್ಲಿ ಒಂದು ಕೋಳಿ ಗೂಡನ್ನು ಕಟ್ಟಬೇಕೆಂದು ಕಾಣುತ್ತದೆ.

ಇನ್ನು ಎರಡನೆಯದಾಗಿ ಹೇಳಬೇಕೆಂದರೆ ಮಲೆನಾಡು ಪ್ರದೇಶದಲ್ಲಿ ಈಗ ಇರತಕ್ಕಂಥ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡರೆ, ಹರಿಜನರಿಗೆ ಅಲ್ಲಿ ಮಲಗುವುದಕ್ಕೆ ಮನೆಯಿಲ್ಲ, ಊಟಕ್ಕೆ ಸೌಕರ್ಯವಿಲ್ಲ. ಅಲ್ಲಿ ಹರಿಜನರು ಹುಟ್ಟುವಾಗ ಸಾಲದಲ್ಲಿ ಹುಟ್ಟಿ ಜೀವನ ಪರ್ಯಂತರವೂ ಸಾಲದಲ್ಲೇ ಒದ್ದಾಡಿ ಸಾಯುವಾಗ ಸಾಲದಲ್ಲಿ ಸಾಯುವ ಪರಿಸ್ಥಿತಿ ಇದೆ. ಇದಕ್ಕೆ ಕಾರಣ ಏನಪ್ಪಾ ಎಂದರೆ ಜೀತ ಮಾಡುವುದು ಇವಕ್ಕೆ ಒಂದು ಕಾರಣ. ಜೀತಮಾಡುವುದು ಹೋಗದ ಹೊರತು ಈ ದೇಶದಲ್ಲಿರತಕ್ಕ ಹಿಂದುಳಿದ ಜನಾಂಗಕ್ಕೆ ಕ್ಷೇಮವಿಲ್ಲ ಎಂದು ನಾನು ಹೇಳುತ್ತೇನೆ. ಈ ಜನರ ಅವಸ್ಥೆ ಹೇಗಿದೆ ಎಂದರೆ 20 ವರ್ಷಗಳ ಕಾಂಗ್ರೆಸ್ಸಿನವರು ಆಡಳಿತದಲ್ಲಿ, "A swan in the pure water and a swine in the gutter" ಎಂದು ಹೇಳಿ ಬಹುಶಃ ಇದು ಬಹಳ ಜನಗಳಿಗೆ ಅರ್ಥವಾಗುತ್ತದೆ. ಹರಿಜನರು ಹಿಂದೆ ಯಾವ ಸ್ಥಿತಿಯಲ್ಲಿದ್ದರೋ ಅದೇ ಸ್ಥಿತಿಯಲ್ಲಿ ಈಗಲೂ ಇದ್ದಾರೆ. ಹರಿಜನರ ಉದ್ಧಾರವನ್ನು ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಅವರ ಉದ್ಧಾರಕ್ಕಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೋ ಅವುಗಳು ಒಂದೂ ಸರಿಯಾದ ರೀತಿಯಲ್ಲಿ ಕಾರ್ಯಗತವಾಗುತ್ತಾ ಇಲ್ಲ. ಈಗ ನಾನು ಒಂದು ಉದಾಹರಣೆಯನ್ನು ಹೇಳುತ್ತೇವೆ. ಬೀರಪ್ಪ ಕಮಿಟಿಯ ವರದಿಯ ಪ್ರಕಾರ 1-1-1957ರಲ್ಲಿ ಕ್ಲಾಸ್ 1 ಆಫೀಸರುಗಳ ಹುದ್ದೆಗಳು 670 ಇದ್ದುವು. ಅದರಲ್ಲಿ 1961ನೇ ಇಸವಿಯಲ್ಲಿ 13 ಹುದ್ದೆಗಳು ಭರ್ತಿಯಾಗಿವೆ. ಈ ಒಂದು ನಿದರ್ಶನದಿಂದಲೇ ಹರಿಜನರು ಬೇಕಾದಷ್ಟು ಮುಂದುವರಿದಿದ್ದಾರೆ; ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ, ಎಂದು ಹೇಳುವುದು ತಪ್ಪು ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಹಾಗೇನೇ ಪ್ರತಿಯೊಂದು ಇಲಾಖೆಯಲ್ಲಿಯೂ ಅಂದರೆ 27 ಇಲಾಖೆಗಳಲ್ಲಿಯೂ ಹರಿಜನರನ್ನು 100ಕ್ಕೆ 18ರಂತೆ ಇದುವರೆಗೂ ತೆಗೆದುಕೊಂಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಹರಿಜನರ ಅಭಿವೃದ್ಧಿಯ ಬಗ್ಗೆ ಎಲ್ಲರಿಗೂ ಆಸಕ್ತಿ ಇದೆ ಎಂದು ಎಲ್ಲರೂ ಬಾಯಲ್ಲಿ ಹೇಳುತ್ತಾರೆಯೇ ವಿನಾ ಅದು ಕಾರ್ಯಗತವಾಗಿದೆಯೇ ಎಂದು ನೋಡುವುದಿಲ್ಲ. ಆದ್ದರಿಂದ ನಾನು ಕೇಳುವುದೇನೆಂದರೆ ಸರ್ಕಾರದವರು ಹರಿಜನರ ಅಭಿವೃದ್ಧಿಯನ್ನು ಎಷ್ಟರಮಟ್ಟಿಗೆ ಸಾಧಿಸಬೇಕಾಗಿತ್ತೋ ಅಷ್ಟರಮಟ್ಟಿಗೆ ಸಾಧಿಸಿದ್ದಾರೆಯೇ ಎಂದು. ನಾನು ಇನ್ನೂ ಹೆಚ್ಚು ಹೇಳಬೇಕೆಂದರೆ ಮಲೆನಾಡಿನಲ್ಲಿ ಇರತಕ್ಕ ಜನಗಳಿಗೆ ಇಲ್ಲಿಯವರೆವಿಗೂ ಸರ್ಕಾರದವರು ಒಂದು ಎಕರೆ ಜಮೀನನ್ನು ಕೊಟ್ಟಿದ್ದರೆ ನಾನು ಅವರಿಗೆ ಶರಣಾಗತವಾಗುತ್ತೇನೆ. ಒಬ್ಬೊಬ್ಬ ರೈತನಿಗೂ ಒಂದೊಂದು ಊರಿನಲ್ಲಿಯೂ ಇಂಥಾ ಒಂದು ಪರಿಸ್ಥಿತಿ ಇರುವಾಗ ಹರಿಜನರ ಉದ್ಧಾರ ಹೇಗಾಗುತ್ತದೆ ಸ್ವಾಮಿ?

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಇನ್ನೂ ಎಷ್ಟು ವರ್ಷಗಳ ಕಾಲ ಅವರನ್ನು ಹರಿಜನರೆಂದು ಕರೆಯಬೇಕೆಂಬುದಕ್ಕೆ ಒಂದು ಕಂಡೀಷನ್ ಕೊಡಲಿ, ಇಷ್ಟು ವರ್ಷಗಳ ತನಕ ಹರಿಜನರೆಂದು ಕರೆಯಲಿ ಆಮೇಲೆ ಉತ್ತಮರು ಎಂದು ಕರೆಯಲಿ, ಎಂದು ಸರ್ಕಾರದವರು ಒಂದು ಅವಧಿಯನ್ನು ಗೊತ್ತುಮಾಡಲಿ.

ಇನ್ನು ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರುಗಳು ದುಡ್ಡು ತಿನ್ನುತ್ತಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದು ಆಗುತ್ತಿದೆ. ಬೇರೆಯವರನ್ನು ನೇಮಕ ಮಾಡಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇವೊತ್ತು ನಾನು ತಮ್ಮ ಮುಂದೆ ಹೇಳುತ್ತೇನೆ. ಎಷ್ಟು ಜನ ಸವರ್ಣೀಯ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರು ಇದ್ದಾರೆ ಅವರೆಲ್ಲರೂ ಹಳ್ಳಿಗಳಿಗೆ ಹೋಗಿ ಏನು ರಿಪೋರ್ಟ್ ತೆಗೆದುಕೊಂಡಿದ್ದಾರೆಯೋ ಅದು ಸರಿಯಾಗಿದೆಯೇ? ಇವತ್ತು ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಈ ಸೆನ್ಸಸ್ ಲೆಕ್ಕವನ್ನು ನೋಡಿದರೆ ಹರಿಜನರ ಸಂಖ್ಯೆಯನ್ನು ಅರ್ಧ ಕಡಿಮೆ ಮಾಡಿದ್ದಾರೆ. ಸೆನ್ಸಸ್ ಸರಿಯಾಗಿ ತೆಗೆದುಕೊಂಡಿಲ್ಲ ಎಂದು ನಾನು ಸಮರ್ಥಿಸುತ್ತೇನೆ. ಬೇಕಾದರೆ ನನ್ನ ಒಂದು ಕ್ಷೇತ್ರದಲ್ಲಿ ನಡೆದಿರತಕ್ಕ ವಿಷಯವನ್ನು ನಾನು ಹೇಳುತ್ತೇನೆ. ಚುನಾವಣೆ ನಡೆಯತಕ್ಕ ಕಾಲದಲ್ಲಿ ಸಾವಿರಾರು ಜನ ಹರಿಜನರು ಮತದಾನ ಮಾಡತಕ್ಕ ಸಂದರ್ಭದಲ್ಲಿ ಅವರಿಗೆ ಅವಕಾಶ ಸಿಕ್ಕದೆ ಇರುವ ಸಂದರ್ಭವನ್ನು ನಾನು ನೋಡಿದ್ದೇನೆ. ಕಾಲಾವಕಾಶ ಇಲ್ಲದೆ ನನಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಬೋಳಾ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಇವೊತ್ತು ಸರ್ಕಾರದವರು ಈ ಸಭೆಯ ಮುಂದೆ ಸಮಾಜ ವಿಕಾಸ ಯೋಜನೆಯ ಬೇಡಿಕೆಯನ್ನು ಮಂಡಿಸಿದ್ದಾರೆ. ಈ ಬೇಡಿಕೆ ಒಳ್ಳೆಯ ಬೇಡಿಕೆಯಾಗಿದ್ದರೂ ಕೂಡ ಈ ಸಮಾಜ ವಿಕಾಸ ಯೋಜನೆಯಿಂದ ನಿಜವಾಗಿಯೂ ಹರಿಜನರನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಬಹಳ ತೊಂದರೆಗಳುಂಟು. ನಾನು ಇದನ್ನು ವಿರೋಧಿಸುತ್ತೇನೆ. ಈ ಸಮಾಜ ವಿಕಾಸ ಯೋಜನೆಯಲ್ಲಿ ಅನೇಕ ಕೆಲಸಗಳನ್ನು ಮಾಡಲು ಯೋಜನೆಯನ್ನು ಮಾಡಿದ್ದಾರೆ. ಈ ಯೋಜನೆಗಳು ಹೆಚ್ಚು ಸರಿಯಾಗಿ ಕಾರ್ಯಗತವಾಗದೇ ಇರುವುದರಿಂದ ಇದರಲ್ಲಿ ಖರ್ಚು ಮಾಡುವ ಹಣ ಸಾರ್ಥಕವಾಗಿಲ್ಲ ಎಂದು ನಾನು ಈ ಸಭೆಯ ಮುಂದೆ ಹೇಳಬೇಕೆಂದಿದ್ದೇನೆ.

ಮೊದಲನೆಯದಾಗಿ ಈ ಯೋಜನೆಯಲ್ಲಿ ಹರಿಜನರಿಗಾಗಿ ಮನೆಗಳನ್ನು ಕಟ್ಟಿಕೊಡುತ್ತಿದ್ದಾರೆ. ಈ ಮನೆಗಳನ್ನು ಕಟ್ಟುವಾಗ ಅವರಿಗೆ ಬೇಕಾದ ಸ್ಥಳದಲ್ಲಿ ಕಟ್ಟುವುದಿಲ್ಲ, ಅವುಗಳನ್ನು ಅವರಿಗೆ ಕೊಡುವುದಿಲ್ಲ; ಒಂದೇ ಕಡೆ ಹೆಚ್ಚಿನ ಮನೆಗಳನ್ನು ಕಟ್ಟುತ್ತಾರೆ. ಆ ಮನೆಗಳನ್ನು ಹೆಚ್ಚಿಗೆ ಗ್ರಾಮಗಳಲ್ಲಿ ಕೃಷಿ ಮಾಡುವವರಿಗೆ ಕೊಡುತ್ತಾರೆ. ಆಗ ಅವರು ಕೃಷಿ ಕೆಲಸ ಮಾಡುವುದನ್ನು ಬಿಟ್ಟು ಹೊಸದಾಗಿ ಮನೆಗಳನ್ನು ಕೊಡುವ ಜಾಗದಲ್ಲಿ ಬಂದು ನಿಲ್ಲಬೇಕಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ, ಕಾರ್ಕಳದಲ್ಲಿ ಒಂದು ಕಡೆ ಹರಿಜನರಿಗಾಗಿ ಮನೆಗಳನ್ನು ಕಟ್ಟಿದರು. ಅದನ್ನು ಒಂದು ಕಾಲನಿಯಾಗಿ ಮಾಡಿದರು. ಆ ಮನೆಗಳಿಗೆ ಹೆಂಚನ್ನು ಹಾಕಿ ಕಟ್ಟಿದರು. ಆ ಸ್ಥಳ ಕೃಷಿಗೆ ಯೋಗ್ಯವಾದ ಸ್ಥಳವಲ್ಲ. ಅಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. ಅಲ್ಲಿ ಸಾಕಷ್ಟು ಮಳೆ ಇಲ್ಲ. ಅಂಥಾ ಸ್ಥಳವನ್ನು ಸೆಲೆಕ್ಟ್ ಮಾಡಿ ಅಲ್ಲಿ ಕಾಲನಿ ಮಾಡಿ ಮನೆಗಳನ್ನು ಕಟ್ಟಿ ಹರಿಜನರಿಗೆ 1962ನೇ ಇಸವಿಯಲ್ಲಿ ಕೊಟ್ಟರು. ಅದು ರೇಡಿಯೋದಲ್ಲಿ ಕೂಡ ಪ್ರಚಾರವಾಗುತ್ತಿತ್ತು. ಆ ಸ್ಥಳದಲ್ಲಿರತಕ್ಕ ಹರಿಜನರು ಕಾಯಿಪಲ್ಯವನ್ನು ಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಒಂದು ದೊಡ್ಡ ಪ್ರಚಾರವಾಯಿತು. ಆಮೇಲೆ 1967ನೇ ಇಸವಿಯಲ್ಲಿ ನೋಡುವುದಾದರೆ ಆ ಸ್ಥಳದಲ್ಲಿ ಒಬ್ಬ ಹರಿಜನರೂ ಕೂಡ ಇಲ್ಲ. ಪ್ರತಿಯೊಬ್ಬರೂ ಕೂಡ ಆ ಮನೆಗಳನ್ನು ಮಾರಿಬಿಟ್ಟಿದ್ದಾರೆ. ಇಷ್ಟು ಮಾತ್ರವಲ್ಲ. ವಿಷಾದದಿಂದ ಹೇಳಬೇಕಾಗಿದೆ, ಅಲ್ಲಿ ಹೆಂಚು ಹಾಕಿದ ಮನೆಗಳಲ್ಲಿ ಒಂದು ಹೆಂಚೂ ಕೂಡ ಇಲ್ಲ. ಇದಕ್ಕೆ ಕಾರಣವೇನೆಂದರೆ ಕೃಷಿ ಮಾಡುವವರನ್ನು ಒಂದು ಕ್ಷೇತ್ರವನ್ನು ಬಿಡಿಸಿ ಎಲ್ಲೋ ಒಂದು ಕಡೆ ಹಾಕಿ ಒಂದು ಯೋಜನೆಯನ್ನು ಮಾಡಿದ್ದರಿಂದ ಅವರಿಗೆ ತೊಂದರೆ ಬಂತು. ಆದ್ದರಿಂದ ಮುಖ್ಯವಾಗಿ ಹಳ್ಳಿಗಳಲ್ಲಿರುವ ಹರಿಜನರಿಗೆ ಅವರು ಎಲ್ಲೆಲ್ಲಿರುತ್ತಾರೆಯೋ ಅಲ್ಲಿಯೇ 3 ಎಕರೆ 4 ಎಕರೆ ಜಮೀನನ್ನು ಕೊಟ್ಟು, ಸಾಲಕೊಟ್ಟು, ಅವರಿಗೆ ನೀರಿನ ಸೌಕರ್ಯ, ಮತ್ತು ವಸತಿ ಸೌಕರ್ಯವನ್ನು ಒದಗಿಸಿಕೊಟ್ಟು ಅವರು ಅಲ್ಲಿ ನಿಲ್ಲುವ ಹಾಗೆ ಮಾಡಬೇಕು. ಇಲ್ಲದೇ ಹೋದರೆ ಅವರ ಅಭಿವೃದ್ಧಿಯಾಗುವುದಿಲ್ಲ. ಸಮಾಜ ವಿಕಾಸ ಯೋಜನೆಗೆ ಕೊಟ್ಟಂತಹ ಹಣ ದುರುಪಯೋಗವಾಗದೆ ಅದರಿಂದ ಹರಿಜನರ ಅಭಿವೃದ್ಧಿಯಾಗುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ. ನಮ್ಮ ಕಡೆಯಲ್ಲಿ ಯಾವುದಾದರೂ ಸರ್ಕಾರದ ಯೋಜನೆಯ ಉದಾಹರಣೆಯನ್ನು ಕೊಡುವಾಗ ಮಾಡಲ್ ಹೌಸ್ ಕಾಲೋನಿಯ ಉದಾಹರಣೆಯನ್ನು ಕೊಡುತ್ತಾರೆ.

6-00 P.M.

ಇನ್ನು ನಾನು ಹರಿಜನರ ಹಾಸ್ಟಲುಗಳ ವಿಷಯದಲ್ಲಿ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಅನೇಕ ಖಾಸಗಿಯವರು ಹರಿಜನ ಹಾಸ್ಟಲ್ ನಡೆಸುತ್ತಿದ್ದಾರೆ. ನಾನೂ ಸಹ ಒಂದು ಹಾಸ್ಟಲ್ ನಡೆಸುವುದಕ್ಕೆ ಸಂಬಂಧಪಟ್ಟವನು ಆಗಿರುವುದರಿಂದ ಈ ವಿಚಾರವನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಮೊದಲು ನಮ್ಮ ಜಿಲ್ಲೆಯು ಮದ್ರಾಸ್ ರಾಜ್ಯದಲ್ಲಿತ್ತು. ಮದ್ರಾಸ್ ರಾಜ್ಯದಲ್ಲಿ ದ್ದಾಗ್ಗೆ ನಮ್ಮ ಹಾಸ್ಟಲ್ಲುಗಳಿಗೆ ಬೋರ್ಡಿಂಗ್ ಗ್ರ್ಯಾಂಟ್ ಎಂದು ಕೊಡುತ್ತಿದ್ದರು. ಒಬ್ಬ ಮೆಂಬರನಿಗೆ 18 ರೂಪಾಯಿನಂತೆ ಕೊಡುತ್ತಿದ್ದರು. ಇದು ಬಹಳ ವರ್ಷಗಳ ಹಿಂದೆ ಇದ್ದಿತು. ಈಗ ವಿದ್ಯಾರ್ಥಿಯೊಬ್ಬನ ಬೋರ್ಡಿಂಗ್ ಖರ್ಚು ನಾಲ್ಕು ಪಾಲು ಹೆಚ್ಚಾಗಿದೆ 18 ರೂಪಾಯಿ ಇದ್ದುದನ್ನು 25 ರೂಪಾಯಿ ಮಾಡಿದ್ದಾರೆ. ಈಗ ಸರಕಾರ ಇದನ್ನು ಸಹ ಕೊಡುವುದಿಲ್ಲ. ಅನೇಕ ಕಾಗದ ಪತ್ರ ಬರೆದರೂ ಕೂಡ ಹಣ ಕೊಡುತ್ತಿಲ್ಲ. ಹಣ ಕೊಡದೇ ಇದ್ದರೆ ಇಂಥ ಹಾಸ್ಟಲ್ ಮ್ಯಾನೇಜ್‌ಮೆಂಟ್ ಮಾಡಲು ಸಾಧ್ಯವಿಲ್ಲ ಅದನ್ನು ನಾವು ಕೈ ಬಿಡುತ್ತೇವೆಂದು ಹೇಳಿ ಹೆದರಿಸಿದ್ದೇನೆ. 1965-66ನೇ ವರ್ಷದ ಬೋರ್ಡಿಂಗ್ ಗ್ರ್ಯಾಂಟ್ ಇಪ್ಪರವರಗೆ ಕೊಟ್ಟಿಲ್ಲ. 1966-67ನೇ ಸಾಲಿನ ಹಣ ನಮಗೆ ಬಂದರೂ ಹಿಂದಿನ ವರ್ಷದ್ದು ನಮಗೆ ಇನ್ನೂ ಬರಲಿಲ್ಲ. ಈ ರೀತಿ ಸಮಾಜ ಕಲ್ಯಾಣ ಮಾಡತಕ್ಕಂಥ ಒಳ್ಳೇ ಸಂಸ್ಥೆಗಳಿಗೆ ಸರಕಾರ ಸಹಕಾರವಮಾಡದೇ ಇದ್ದರೆ ಇಂಥ ಸಂಸ್ಥೆಗಳನ್ನು ನಡೆಸುವುದನ್ನು ನಿರ್ವಹಿಸುವುದನ್ನು ನಾವು ಕೈ ಬಿಡಬೇಕಾಗುತ್ತದೆ ಎಂಬುದನ್ನು ಸರಕಾರದ ಗಮನಕ್ಕೆ ತಂದು, ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ಬಸವರಾಜ (ಕೃಷ್ಣರಾಜನಗರ).—ಮಾನ್ಯ ಸಭಾಪತಿಗಳೇ, ಸಮಾಜ ಕಲ್ಯಾಣ ಶಾಖೆಗೆ ಇರತಕ್ಕಂಥ ಈ ಬೇಡಿಕೆಯನ್ನು ವಿರೋಧಿಸಿ ನನ್ನ ಮಾತು ಪ್ರಾರಂಭಿಸುತ್ತೇನೆ. ಸಮಾಜ ಕಲ್ಯಾಣ ಮಾಡಬೇಕು ಎಂಬುದನ್ನು ಯಾರೂ ವಿರೋಧಿಸುವುದಿಲ್ಲ. ಆದರೆ ಈ ಸಮಾಜ ಕಲ್ಯಾಣ ಖಾತೆಯಲ್ಲಿ ಇರತಕ್ಕಂಥ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾರ್ಯಕ್ರಮ ಇಟ್ಟುಕೊಂಡು ಕೆಲಸ ಮಾಡುವುದನ್ನು ನೋಡಿದರೆ ಇದರಲ್ಲಿ ಜಾತೀಯತೆ ಇದೆ ಎಂದು ಕಂಡುಬರುತ್ತದೆ. ಈ ಜಾತೀಯತೆಯನ್ನು ನಿರ್ನಾಮ ಮಾಡಿ ಬೇರೆ ವ್ಯವಸ್ಥೆ ಮಾಡಬೇಕು, ಇರತಕ್ಕಂಥ ಧೋರಣೆ ಬದಲಾವಣೆ ಮಾಡಬೇಕು ಅಂದರೆ ಸಮಾಜ ಕಲ್ಯಾಣವನ್ನು ಈ ಇಲಾಖೆ ಮುಂದುವರಿಸಿಕೊಂಡು ಹೋಗುತ್ತದೆ ಎಂದು ನನ್ನ ಭಾವನೆ. ನಮ್ಮ ರಾಜ್ಯದಲ್ಲಿರ ತಕ್ಕಂಥ ಎರಡು ಕೋಟಿ ಮೂವತ್ತೈದು ಲಕ್ಷ ಪ್ರಜಾಸಂಖ್ಯೆಯಲ್ಲಿ ನೂರಕ್ಕೆ ಎಂಭತ್ತು ಭಾಗ ಹಳ್ಳಿಗಾಡಿನಲ್ಲಿ ಇರುತ್ತಾರೆ. ಇದರಲ್ಲಿ ಬಹುಪಾಲು ಜನರು ವ್ಯವಸಾಯದ ಅಂದರೆ ಬೇಸಾಯದ ಕೂಲಿಕಾರರು ಆಗಿದ್ದಾರೆ. ಈ ಕೂಲಿಕಾರರಲ್ಲಿ ಬಹುಪಾಲು ಜನರು ಹರಿಜನರು ಆಗಿದ್ದಾರೆ. ಇಂಥವರ ಸಮಾಜ ಕಲ್ಯಾಣ ಅವರ ಉದ್ಧಾರ ಮಾಡಬೇಕಾದುದು ಬಾಕಿ ಕೋಮಿನವರಿಗೆ ಸೇರಿದ್ದು. ಇವರ ಉದ್ಧಾರ ಮಾಡಬೇಕೆಂದು ಇಟ್ಟುಕೊಂಡು ಇವತ್ತಿನ ದಿವಸ ನಾವು ಜಾತಿಯಮೇಲೆ ಇವರು ಹರಿಜನರು ಇವರು ಗಿರಿಜನರು ಎಂದು ಜಾತೀಯತೆಯ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಈ ಭಾವನೆಯಿಂದ ಚರ್ಚೆ ಮಾಡಿದರೆ ಇತರ ಕೋಮಿನವರಮೇಲೆ ಇದರಿಂದ ದುಷ್ಪರಿಣಾಮವಾಗುತ್ತ ದೆಂದು ಹೇಳುತ್ತೇನೆ. ಕ್ಯಾಸ್ಟ್ ಬದಲು ಇದೊಂದು ಕ್ಲಾಸ್ ಎಂದು ಇಟ್ಟುಕೊಂಡರೆ ಕಾರ್ಮಿಕರ ಉದ್ಧಾರವಾಗಬೇಕು ಎಂದು ಚಳವಳಿ ಯಾವ ರೀತಿ ನಡೆಯುತ್ತದೆಯೋ ಅದೇ ಮಾದರಿಯ ರೈತರ ಚಳವಳಿ ನಡೆದರೆ ಅವರ ಉದ್ಧಾರವಾಗುತ್ತದೆ. ಇತರ ಕೋಮಿನ ರೈತ ವರ್ಗಕ್ಕೆ ಸೇರಿಕೊಂಡು ಈ ಸಮಾಜದವರ ಉದ್ಧಾರ ಹಳ್ಳಿಗಾಡಿನಲ್ಲಿ ಒಂದು ಹೊಸ ರೂಪದಲ್ಲಿ ಉದ್ಧಾರವಾಗುತ್ತಿತ್ತು ಎಂದು ಕಾಣುತ್ತದೆ. ಜಾತೀಯತೆ ವಿಷಯದಲ್ಲಿ ವಾದ ಮಾಡುವುದು ಸೂಕ್ತವಲ್ಲ. ಕೇಂದ್ರ ಸರಕಾರದವರು 1950ರಲ್ಲಿ ಅಗ್ರೇರಿಯನ್ ರಿಫಾರ್ಮ್ಸ್ ಕಮಿಟಿ ಎಂದು ಮಾಡಿದ್ದರು. ಅದನ್ನು ನಮ್ಮ ಸರಕಾರ ಮರೆತಂತೆ ಕಾಣುತ್ತದೆ. ಸದರಿ ಕಮಿಟಿಯು ಬೇಸಾಯ ಕೂಲಿಗಾರರ ಬಗ್ಗೆ ತಿಳಿಸುತ್ತ—

> "To leave out the problem of agricultural labour in any scheme of agrarian reforms is to leave unattended a weeping wound in the agrarian system of the country."

ಎಂದು ಹೇಳಿರುತ್ತೆ. ಪಟ್ಟಣದಲ್ಲಿ ಕಾರ್ಮಿಕ ವರ್ಗದವರ ಚಳವಳಿ ಇರುತ್ತದೆ. ಹಳ್ಳಿಗಾಡಿನಲ್ಲಿ ರೈತರೇ ಹೆಚ್ಚಾಗಿ ಇರುವುದರಿಂದ ಅವರ ಸಮಾಜ ಕಲ್ಯಾಣ ಮಾಡುವುದಕ್ಕೆ ಜಾತೀಯತೆ ಬಿಟ್ಟು ಅದೊಂದು ವರ್ಗ ಎಂದು ಭಾವಿಸಿಕೊಂಡರೆ ಇಂದು ನಮ್ಮ ದೇಶದಲ್ಲಿ ಅಸ್ಪೃಶ್ಯತೆಯ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಈ ವರ್ಗದಲ್ಲಿ ಕಾಂಗ್ರೆಸ್ ಪಕ್ಷ ವಿರೋಧ ಪಕ್ಷ ಎಂದು ಹೇಳಲು ಅವಕಾಶ ವಿರುತ್ತಿರಲಿಲ್ಲ. ಅಗ್ರಿಕಲ್ಚರಲ್ ಪ್ರೊಡಕ್ಷನ್ ಮೇಲೆ ದುಷ್ಪರಿಣಾಮ ಆಗದೇನೇ ಆಹಾರ ಉತ್ಪತ್ತಿ

(ಶ್ರೀ ಎಂ. ಬಸವರಾಜ)

ಹೆಚ್ಚಾಗುತ್ತಿತ್ತು. ಸಮಾಜದಲ್ಲಿ ಒಳ್ಳೇ ಪರಿಣಾಮ ಉಂಟುಮಾಡುತ್ತಿತ್ತು, ಸಮಾಜದಲ್ಲಿ ಒಂದು ಸುವ್ಯವಸ್ಥೆಯಾಗುತ್ತಿತ್ತು ಎಂದು ಹೇಳುತ್ತೇನೆ.

ಇನ್ನು ಈ ಹಿಂದುಳಿದ ವರ್ಗದವರಿಗೆ ಕೊಡತಕ್ಕಂಥ ಕೆಲವು ಸವಲತ್ತುಗಳನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಹಳ್ಳಿಗಾಡಿನಲ್ಲಿ ಹರಿಜನರು ಬರುವುದರಿಂದ ಅವರನ್ನೇ ತೆಗೆದುಕೊಳ್ಳೋಣ. ಒಂದು ಎಕರೆ ಐದು ಎಕರೆ ಭೂಮಿ ಎಷ್ಟು ಜನರಿಗೆ ಕೊಟ್ಟಿರುತ್ತೀರಿ? ಭೂಮಿ ಇಟ್ಟುಕೊಂಡು ಬೇಸಾಯ ಮಾಡತಕ್ಕಂಥವರು ಹರಿಜನರಲ್ಲಿ ಒಬ್ಬರೂ ಇಲ್ಲ. ಅವರ ಹೆಸರಿನಲ್ಲಿ ಭೂಮಿ ಪಡೆದು ಐಶ್ವರ್ಯವಂತರು ಹರಿಜನರನ್ನು ಎಕ್ಸ್‌ಪ್ಲಾಯಿಟ್ ಮಾಡಿ ಸವರ್ಣೀಯರು ಅಂಥ ಭೂಮಿ ಪಡೆದುಕೊಂಡಿದ್ದಾರೆ. ಹರಿಜನರು ಯಾವ ರೀತಿಯಿಂದಲೂ ಮುಂದೆ ಹೋಗಿಲ್ಲ. ಮನೆ ಕಟ್ಟುವುದಕ್ಕಾಗಿ ಇನ್ನೂರು ರೂಪಾಯಿ ಬೆಲೆಬಾಳುವ ಮರಮುಟ್ಟು ಹರಿಜನರಿಗೆ ಕೊಡತಕ್ಕ ಒಂದು ವ್ಯವಸ್ಥೆ ಇದೆ. ಆದರೆ ಹುಣಸೂರು ರೇಂಜ್ ಆಫೀಸ್‌ನಲ್ಲಿ ಬಂದು ಎಷ್ಟು ಜನ ಹರಿಜನರು ಮಾಲು ತೆಗೆದುಕೊಂಡು ಹೋಗಿದ್ದಾರೆ? ಮೈಸೂರು ಮಂಡ್ಯ ಜಿಲ್ಲೆಯ ಎಷ್ಟು ಜನ ಹರಿಜನರಿಗೆ ಕೊಟ್ಟಿದ್ದೀರಿ? ಒಂದು ಪಟ್ಟಿ ಇಟ್ಟುಕೊಂಡು ಇದನ್ನು ಪರಿಶೀಲನೆ ಮಾಡಿ ನೋಡಿದರೆ 100ಕ್ಕೆ 10 ಜನರು ಮನೆ ಕಟ್ಟಿಲ್ಲ, ಇಂಥ ಯೋಜನೆ ಮಾಡುವುದು ಇದರ ಲಾಭ ವೆಸ್ಟೆಡ್ ಇಂಟರೆಸ್ಟ್ ಇದ್ದವರಿಗೆ ಲಾಭವಾಗುವ ಹಾಗೆ ಕಾರ್ಯರೂಪದಲ್ಲಿ ತರುತ್ತಾರೆ. ಇದಲ್ಲದೆ ಅವರ ಹೆಸರಿನಲ್ಲಿ ಬೇರೆಯವರು ರುಜುಹಾಕಿ ಹಣ ತೆಗೆದುಕೊಂಡು ಹೋಗಿದ್ದಾರೆ. ಇಂಥ ಉದಾಹರಣೆಗಳು ಬೇಕಾದಷ್ಟು ಇವೆ.

ಇನ್ನು ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಕಳೆದ ಐದು ವರ್ಷಗಳಲ್ಲಿ ಮಾನ್ಯ ಮಂತ್ರಿಗಳು ಒಕ್ಕಲತನ ಇಲಾಖೆ ವಹಿಸಿಕೊಂಡು ಬಹಳ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಈಗ ಒಕ್ಕಲತನ ಇಲಾಖೆ ಬದಲು ಈ ಸಮಾಜ ಕಲ್ಯಾಣ ಇಲಾಖೆಯು ಅವರ ಕೈಯಲ್ಲಿ ಇತ್ತೀಚೆಗೆ ಬಂದಿದೆ. ಕಳೆದ ಐದು ವರ್ಷಗಳಲ್ಲಿ ದಕ್ಷತೆಯಿಂದ ಕೆಲಸ ಮಾಡಿರುವ ಹಾಗೆ ಹೊಸದಾಗಿ ತೆಗೆದುಕೊಂಡಿರುವ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಸಹ ಅದೇ ರೀತಿ ಧೋರಣೆ ವಹಿಸಿಕೊಂಡು ಬಡವರಿಗೆ ಅನುಕೂಲತೆ ಮಾಡಿಕೊಡುವುದಕ್ಕೆ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಮತ್ತು ಈ ಮೂಲಕ ಹರಿಜನ ಬಾಂಧವರ ಮತ್ತು ಲೋಯೆಸ್ಟ್ ಸೆಕ್ಷನ್ ಆಫ್ ದಿ ಪೀಪಲ್ ಇವರ ಉದ್ಧಾರ ಮಾಡುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಪ್ರಿಫರೆನ್ಸ್ ಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಕೂಡ ನಾವು ಈ ದಿವಸ ಒಂದು ಪವಿತ್ರ ಕಾರ್ಯ ಮಾಡುತ್ತಿದ್ದೇವೆ. ಮಾನ್ಯ ಸ್ಪೀಕರ್ ಅವರು ಸಹ ಈ ವಿಚಾರದಲ್ಲಿ ಎಷ್ಟೋ ವಿಧವಾದ ರಿಯಾಯಿತಿ ಕೊಡತಕ್ಕ ದೃಷ್ಟಿಯಿಂದ ನೋಡತಕ್ಕಂಥ ಕಾನೂನು ಬದ್ಧವಾದ ಮಾರ್ಗತೋರಿಸಿದ್ದಾರೆ. ಇದು ಕಾಂಟ್ರವರ್ಸಿಯಲ್ ಸಬ್ಜೆಕ್ಟ್ ಆಗಿದೆಯೆಂದು ಹೇಳಿದರೆ ಅದು ತಪ್ಪಾಗಲಾರದು. ಹರಿಜನರ ಉದ್ಧಾರ ಗಿರಿಜನರ ಉದ್ಧಾರ ಮಾಡತಕ್ಕಂಥವರು ಸಮಾಜದಲ್ಲಿ ಇದ್ದಾರೆ. ಈ ಜನ ಶೋಷಿತರಾದ ಜನ ಆಗಿರುವುದರಿಂದ ಇವರೂ ಕೂಡ ಮಾನವರಂತೆ ಬಾಳಲಿ ಎಂದು ಹೇಳತಕ್ಕವರು ಇದ್ದಾರೆ. ಸರಕಾರ ಇದನ್ನು ತಿಳಿದುಕೊಂಡು ನಾನಾ ಯೋಜನೆಗಳನ್ನು ಹಾಕಿದೆ. ಇವರ ಅಭಿವೃದ್ಧಿ ಹೇಗೆ ಆಗಬೇಕು? ಇವರು ಎಷ್ಟು ಕೊಟ್ಟರೂ ಬೇಡ ಎನ್ನುವುದಿಲ್ಲ. ಈ ರೀತಿ ಹಲವರು ಹೇಳುತ್ತಾರೆ. ಇವರಿಗೆ ಕೊಡತಕ್ಕಂಥ ದುಡ್ಡು ಸದ್ವಿನಿಯೋಗವಾಗುವುದಿಲ್ಲ, ಇದೊಂದು ದೊಡ್ಡ ಪ್ರಾಬ್ಲಂ ಅಗಾಧ ಪ್ರಶ್ನೆ ಆಗಿದೆ, ಇದಕ್ಕೆ ಹೆಚ್ಚು ಕಾಲ ಬೇಕು, ಇದಕ್ಕೆ ಒದಗಿಸಿರತಕ್ಕಂಥ ದುಡ್ಡು ಬಹಳ ಕಡಿಮೆ ಎಂದು ಹೇಳುತ್ತಾರೆ. ಹಣವನ್ನು ಸಮರ್ಪಕವಾಗಿ ಉಪಯೋಗ ಮಾಡಬೇಕೆಂದು ಹೇಳಿದರೂ ಕೂಡ ಇದೊಂದು ಬೃಹದಾಕಾರವಾದ ಪ್ರಶ್ನೆಯಾಗಿದೆ. ಇಲ್ಲದಿದ್ದರೆ ಹರಿಜನರ ಉದ್ಧಾರ ಏತಕ್ಕೆ ಆಗಬೇಕು ಎಂಬ ಸಂಶಯ ಬರುತ್ತದೆ. ಈ ದೃಷ್ಟಿಯಿಂದ ಆಲೋಚಿಸಿ ನೋಡುವುದಾದರೆ ಇದು ಒಂದು ರಾಷ್ಟ್ರದ ಪ್ರಶ್ನೆ ಎಂದು ಹೇಳಬೇಕಾಗುತ್ತದೆ. ಯಾರಾದರೂ ನಾಲ್ಕು ಜನರು ಭೂಮಿ ತೆಗೆದುಕೊಳ್ಳಲಿ ಎಂದು ಹೇಳತಕ್ಕಂಥ ಪ್ರಶ್ನೆ ಇದು ಅಲ್ಲ. ಇದರ ಸಂಬಂಧ ಇದರ ಹಿಂದಿನ ಕಾಂಟೆಕ್ಸ್ಟ್ ತಿಳಿದುಕೊಂಡು ಈ ಪ್ರಶ್ನೆ ಬಿಡಿಸಬೇಕಾಗುತ್ತದೆ. ಇದು ಯಾವುದೇ ಒಂದು ಪ್ರದೇಶದ ರಾಜಕೀಯವಲ್ಲ. ಇದು ಯಾವ ಮಟ್ಟದಲ್ಲಿ ಇಂದು ಇದೆ, ಈ ಹಿಂದುಳಿದ ಜನ ಯಾವ ರೀತಿ ಇದ್ದಾರೆ, ಅವರು ಸಮಾಜದಲ್ಲಿ ಹೇಗೆ ಬಾಳುತ್ತಾರೆ, ಅವರು ಸಮಾಜದಲ್ಲಿ ಕೂಡಿಕೊಂಡು ತೃಪ್ತಿಯಲ್ಲಿ ಇದ್ದವರು ಅದರ ಸಮಾಜ ರಥದ ಚಕ್ರ ಕುಸಿದು ಬೀಳದಂತೆ ನೋಡಿಕೊಳ್ಳಬೇಕಾಗುತ್ತದೆ.

ಹಿಂದಿನ ಕಾಲದಲ್ಲಿ ಧರ್ಮ ಎನ್ನುವ ಹೆಸರಿನಲ್ಲಿ ಬಹಳವಾಗಿ ಈ ಪ್ರಶ್ನೆಯನ್ನು ಬಿಡಿಸುವುದಕ್ಕೆ ಪ್ರಯತ್ನಪಟ್ಟರೂ ಅದು ಅಲ್ಲಲ್ಲೇ ನಿಂತುಹೋಯಿತು. ಮಹಾತ್ಮ ಗಾಂಧಿಯವರು ಹೆಚ್ಚು ರಾಜಕೀಯ ದೃಷ್ಟಿಯಿಂದ ನೋಡಿ ಬಿಡಿಸುವುದಕ್ಕೆ ಪ್ರಯತ್ನ ಪಟ್ಟುದರಿಂದ ಕೊಂಚಮಟ್ಟಿಗೆ ಆಯಿತು. ಮೊನ್ನೆ ಮಾತನಾಡಿದ ನಮ್ಮ ಮಿತ್ರರು ಗಾಂಧೀಜಿ ಸತ್ತಮೇಲೆ ಅವರ ತತ್ವಗಳೆಲ್ಲಾ ಕೊಲೆಯಾಯಿತು ಎಂದು ಮಾತನಾಡಿದರು. ಅದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶವಿದೆ ಎಂದರೆ ರಚನಾತ್ಮಕ ಕಾರ್ಯಗಳಲ್ಲಿ ಹರಿಜನೋದ್ಧಾರ ಕಾರ್ಯವೂ ಕೂಡ ಒಂದು ಎಂದು ಬಾಪೂಜಿಯವರು ಕನಸು ಕಂಡಿದ್ದರು. ಹರಿಜನೋದ್ಧಾರ ಎನ್ನುವುದರಲ್ಲಿ ನಮ್ಮಂತೆಯೇ ಅವರೂ ಬಾಳಲಿ ಎನ್ನುವಂಥ ಭಾವನೆ ಇತ್ತು. ಈಗ ಹೇಳುವವರು ಕೇಳುವವರು ಯಾರೂ ಇಲ್ಲ. ಎನ್ನುವಂತಾಗಿದೆ. ಈ ಜನಗಳಿಗೆ ಇರುವ ಕೋಟಲೆಯಿಂದ ಅವರು ಮತಾಂತರರಾಗಿ ಹೋದರು ಎಂದು ಒಬ್ಬರು ಹೇಳಿದರು. ಮತಾಂತರ ಹೊಂದಿದರು, ನಿಜ. ಒಬ್ಬ ಮತಾಂತರ ಹೊಂದಿದರೂ ನಮಗೆಲ್ಲಾ ಎಷ್ಟೋ ನೋವಾಗುತ್ತದೆ. ಅಂಥ ಸಂದರ್ಭಗಳು ಆಗಿವೆ. ಕಣ್ಣು ಮುಚ್ಚಿ ಕುಳಿತುಕೊಂಡರೆ ಬಹಳ ಶೋಚನೀಯವಾದ ಪರಿಸ್ಥಿತಿ ಬರುತ್ತದೆ. ಕಳೆದ ಐದು, ಹತ್ತು ವರ್ಷಗಳಿಂದಲೂ ಆಗಿರುವುದನ್ನು ತುಲನೆ ಮಾಡಿ ನೋಡಿದರೆ ಅನೇಕ ಒಳ್ಳೆಯ ಕೆಲಸಗಳನ್ನು ಸರ್ಕಾರದವರು ಮಾಡಿದ್ದಾರೆ. ನಮ್ಮ ಈಗಿನ ಮಂತ್ರಿಮಂಡಲದವರು ಹಾಸ್ಟಲ್ ಹುಡುಗರಿಗೆ ಕೊಡತಕ್ಕ ಹಣವನ್ನು 25 ರೂಪಾಯಿಗಳಿಗೆ ಏರಿಸಿದ್ದಾರೆ. ಇವರು ಕಮ್ಯೂನಲ್ ಹಾಸ್ಟಲಗಳು ಬೇಡ, ನಾನ್ ಕಮ್ಯೂನಲ್ ಹಾಸ್ಟಲುಗಳಿರಬೇಕು ಎಂದು ಮಾಡಿದರು. ಅವರಂತೆ ಸೇಕಡ 25ರಷ್ಟು ಸೀಟು ಗಳನ್ನು ಹರಿಜನರ ಹಾಸ್ಟಲಿನಲ್ಲಿ ಬೇರೆಯವರಿಗೆ ಕೊಡಬೇಕು ಎಂದು ಮಾಡಿದರು. ಆದರೆ ಅದೇ ರೀತಿ ಜನರಲ್ ಹಾಸ್ಟಲುಗಳಲ್ಲಿ ಹರಿಜನರಿಗೆ ಸೀಟುಗಳನ್ನು ಮೀಸಲಿಡಬೇಕೆಂದು ಹೇಳಲಿಲ್ಲ. ಇದರಿಂದ 12-15 ಸಾವಿರ ಮಕ್ಕಳಲ್ಲಿ ಮೂರು ಸಾವಿರ ಮಕ್ಕಳಿಗೆ ಹಾಸ್ಟಲುಗಳಲ್ಲಿ ಸೀಟು ಇಲ್ಲದ ಹಾಗೆ ಆಗಿದೆ. ಸರ್ಕಾರದವರು ಒಂದು ಕಡೆ ಉಪಕಾರ ಮಾಡುವುದಕ್ಕೆ ಹೋಗಿ ಅವರಿಂದ ಹರಿಜನರಿಗೆ ತೊಂದರೆಯೇ ಆಗಿದೆ.

ಶ್ರೀ ಕೆ. ಭೀಮಯ್ಯನವರನ್ನು ಹೈಕೋರ್ಟ್ ಜಡ್ಜ್ ಆಗಿ ಮಾಡಿದಾಗ, ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್ ಆಗಿ ಶ್ರೀ ಚೆನ್ನಿಗರಾಮಯ್ಯನವರನ್ನು ನೇಮಕ ಮಾಡಿದಾಗ ಬಹಳ ಉಪಕಾರ ಮಾಡಿದರು ಎಂದು ಹೇಳಿದರು. ನಾವೂ ಕೂಡ ಒಳ್ಳೆಯ ಕೆಲಸ ನಡೆದಿದೆ ಎಂದು ಹೇಳಿವೆವು. ಆದರೆ ಇತರ ಕಡೆ ಏನು ನಡೆದಿದೆ ಎನ್ನುವುದನ್ನು ಕೂಡ ನಾವು ನೋಡಬೇಕು. 1-1-1965ಕ್ಕೆ ಹಿಂದೆ ಕೆಲಸ ಮಾಡಿದಂಥ ಜನರನ್ನು ರೆಗ್ಯುಲರೈಸ್ ಮಾಡಬೇಕೆಂದು ಯಾವುದೋ ಒಂದು ನೆಪದಲ್ಲಿ 17 ಜನರನ್ನು ತೆಗೆದುಹಾಕಿದರು. ಸಬ್ ಡಿವಿಜನ್ ಆಫೀಸರ್, ಡೆಪ್ಯುಟಿ ಕಮಿಷನರ್ ಆಗತಕ್ಕ ಸಂದರ್ಭವಿತ್ತು. ಒಂದು ರೀತಿಯಲ್ಲಿ ಅವರ ಕೊಲೆಯಾಯಿತು, ಎಂದು ಹೇಳಬಹುದು. ರೀಪ್ಯಾಟ್ರಿಯೇಷನ್ ಆಫ್ 17 ಆಫಿಷಿಯಲ್ಸ್, ಹಾಸ್ಟಲುಗಳನ್ನು ನಾನ್‌ಕಮ್ಯೂನಲ್ ಮಾಡಿ ಅದಕ್ಕೆ ಕರೆಸ್ಪಾಂಡಿಂಗ್ ಎಫ್‌ಕ್ಟನ್ನು ಕೊಡದೆ ಇರುವುದು, ಆಫಿಷಿಯಲ್ಸ್ ಸಂಖ್ಯೆಯನ್ನು ಕಡಮೆ ಮಾಡಿರುವುದು, ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನವರು ನಡೆಸತಕ್ಕ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಹರಿಜನರಿಗೆ ಸರಿಯಾದ ಪ್ರಮಾಣದಲ್ಲಿ ಸ್ಥಾನಗಳನ್ನು ಕೊಡದೆ ಇರುವುದು ಇದರಿಂದ ಬಹಳ ಅನ್ಯಾಯವಾಗಿದೆ. ಇದನ್ನೆಲ್ಲಾ ಸರಿಪಡಿಸಬೇಕು. ಎಲ್ಲ ಇಲಾಖೆಗಳನ್ನೂ ಸೇರಿಸಿ ಅದರ ಜೊತೆಗೆ ಸೋಷಿಯಲ್ ವೆಲ್‌ಫೇರ್ ಬೋರ್ಡನ್ನೂ ಸೇರಿಸಿ ಮಿನಿಸ್ಟ್ರೀಯಲ್‌ನಲ್ಲಿ ಸೇರಿಸಿದ್ದಾರೆ. ಇದನ್ನು ಪಕ್ಕಾ ಡಿಪಾರ್ಟ್‌ಮೆಂಟ್ ಮಾಡಿ, ರೆಗ್ಯುಲರ್ ಆಗಿ ಕ್ಲಾಸಿಫೈ ಮಾಡಬೇಕು ಎಂದು ಹೇಳುತ್ತೇನೆ.

Review of Progress ಮಾಡಬೇಕು, ಡಿಪಾರ್ಟ್‌ಮೆಂಟ್ ಆಫಿಷಿಯಲ್ಸ್‌ಗೆ ಟ್ರೇನಿಂಗ್ ಕೊಡಬೇಕು, ಫ್ರೀ ಎಜುಕೇಷನ್ ಕೊಡಬೇಕು ಎಂದು ಹೇಳುತ್ತಾರೆ. ಎಜುಕೇಷನ್ ಫ್ರೀ ಎಂದು ಹೇಳುವಾಗ ಸುಮ್ಮನೆ ನೋಟಕ್ಕೆ ಒಂದು ಆರ್ಡರ್ ಇದೆ. ಬೋರ್ಡಿಂಗ್, ಲಾಡ್ಜಿಂಗ್ ಕೊಟ್ಟು, ಪುಸ್ತಕ, ಬಟ್ಟೆ, ಚಾಪೆ ಎಲ್ಲವನ್ನೂ ಕೊಡಬೇಕೆಂದು ಇದೆ. ಆದರೆ ಎಲ್ಲ ಕೊಡುತ್ತಿಲ್ಲ. ಗವರ್ನ್‌ಮೆಂಟ್ ಆರ್ಡರ್‌ನಲ್ಲಿ ಎಲ್ಲ ಫ್ರೀ ಎಂದು ಇದೆ ಎಂದು ತಿಳಿದುಕೊಂಡಿರುವುದು ಬರೀ ಕಲ್ಪನೆ. ಎಲ್ಲಕ್ಕಿಂತಲೂ ಬಹಳ ಮುಖ್ಯವಾಗಿ ಇರಬೇಕಾದ್ದು ವಿದ್ಯಾಭ್ಯಾಸ. ವಿದ್ಯಾಭ್ಯಾಸ ಕೊಡುವ ವಿಷಯದಲ್ಲಾದರೂ ಕೂಡ ಸೂಪರಿಂಟೆಂಡೆಂಟ್-ಕಂ-ಟೀಚರ್ ಎಂದು ಮಾಡಿ, ಒಳ್ಳೆಯ ರಿಸಲ್ಟ್ ಬರುವ ಹಾಗೆ ಮಾಡಬೇಕು, ಎಜುಕೇಷನ್ ಫ್ರೀ ಮಾಡಬೇಕು ಮತ್ತು ಎಲ್ಲರಿಗೂ ವಿದ್ಯಾಭ್ಯಾಸ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ಬಹು ದಿವಸಗಳಿಂದ ಸ್ಟೇಟ್ ಓನ್ಡ್ ಪ್ರಾಪಗಾಂಡ ಇರಬೇಕು ಎಂದು ಕೇಳುತ್ತಿದ್ದೇವೆ. ಅದರ ಗಂಧವೇ ಇಲ್ಲ. ಹರಿಜನರಿಗೆ ಪ್ರೈಜ ಕೊಡಬೇಕಾದ ಮಟ್ಟದಲ್ಲಿ, ಹರಿಜನರ ಸಹಕಾರ ಬೇಕಾಗಿರುವಾಗ ಹರಿಜನರೇ ಇಲ್ಲದ ಒಂದು ಕಮಿಟಿಯನ್ನು ಮಾಡಿದ್ದಾರೆ. ಸ್ಟೇಟ್ ಓನ್ಡ್

(ಶ್ರೀ ಕೆ. ಪ್ರಭಾಕರ್)

ಪ್ರಾಪಗ್ಯಾಂಡ ಮಾಡಬೇಕೆಂಬ ಪ್ರಯತ್ನವಿತ್ತು. ಆದರೆ ಇತ್ತೀಚೆಗೆ ಅದನ್ನು ಕೈಬಿಟ್ಟಿದ್ದಾರೆ. ಇಂಥ ಕೆಲಸಗಳಿಂದ ಹರಿಜನರಲ್ಲಿ ಅತೃಪ್ತಿಯುಂಟಾಗುತ್ತಿದೆ. ಈ ರೀತಿ ಅತೃಪ್ತಿ ಹೆಚ್ಚುವುದಕ್ಕೆ ಅವಕಾಶ ಕೊಡದೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಿ, ಆ ಜನಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಹರಿಜನರಿಗೆ ಪ್ರಿಫರೆನ್ಸ್ ಕೊಡುತ್ತೇವೆಂದು ಹೇಳಿದ್ದರೂ ಕೊಡುತ್ತಿಲ್ಲ. ವಿಧಾನ ಸಭೆಯಲ್ಲಿ ಹರಿಜನರಿಗೆ 31 ಸ್ಥಾನಗಳನ್ನು ಕೊಟ್ಟಿದ್ದಾರೆ. ಆದರೆ ಅದೇ ರೀತಿಯಲ್ಲಿ ಕೌನ್ಸಿಲ್‌ನಲ್ಲಿ ಕೊಟ್ಟಿಲ್ಲ. ಕೌನ್ಸಿಲ್‌ನಲ್ಲಿ 12 ಸ್ಥಾನಗಳನ್ನು ಹರಿಜನರಿಗೆ ಕೊಡಬೇಕಾಗಿತ್ತು. ಆದರೆ ಮೂಗಿಗೆ ತುಪ್ಪ ಸವರಿದ ಹಾಗೆ ಮೂರು ಸ್ಥಾನಗಳನ್ನು ಮಾತ್ರ ಕೊಟ್ಟಿದ್ದಾರೆ. ಕಾನ್‌ಸ್ಟಿಟ್ಯೂಷನಲ್ ಸೇಫ್‌ಗಾರ್ಡ್ ಎಲ್ಲಿ ಇಲ್ಲವೋ ಅಲ್ಲಿ ಹರಿಜನರನ್ನು ಸಂಪೂರ್ಣವಾಗಿ ಕೈಬಿಡುತ್ತಾರೆಂದು ಕಾಣುತ್ತದೆ. ಸರ್ಕಾರದ ಮಟ್ಟದಲ್ಲಿಯೇ ಈ ರೀತಿ ಆದರೆ ಇನ್ನು ಇತರ ಕಡೆ ಎಷ್ಟು ಮಾತ್ರ ನಮಗೆ ಪ್ರಾತಿನಿಧ್ಯ ಸಿಕ್ಕುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಸರ್ಕಾರದ ಮಟ್ಟದಲ್ಲಿ ಮಾತ್ರವಲ್ಲ ಮಂತ್ರಿ ಮಂಡಲದಲ್ಲಿ ಸಹಿತ ಹೆಚ್ಚಿನ ಸ್ಥಾನಗಳನ್ನು ಹರಿಜನರಿಗೆ ಕೊಟ್ಟಿಲ್ಲ. ಈ ಕೊರತೆಯನ್ನು ಸರ್ಕಾರ ನಿವಾರಣೆ ಮಾಡಬೇಕು, ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುವ ಹಾಗೆ ನೋಡಿಕೊಳ್ಳಬೇಕು ಎಂದು ಸೂಚನೆ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ನಾರಾಯಣ ಗೌಡ (ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ಬೇಡಿಕೆಯ ವಿಷಯದೊಳಗೆ ಸಾಧಾರಣವಾಗಿ ನಾಲ್ಕು ಘಂಟೆಯಿಂದ ಈ ಘನಸಭೆಯ ಮಾನ್ಯ ಸದಸ್ಯರುಗಳನೇಕರು ಮಾತನಾಡಿ ನನ್ನ ಕೆಲಸವನ್ನು ಸ್ವಲ್ಪ ಹಗುರ ಮಾಡಿದ್ದಾರೆ. ಈ ಸಮಾಜ ಕಲ್ಯಾಣ ಅಭಿವೃದ್ಧಿಯಾಗುತ್ತಿರುವ ದೇಶಗಳಲ್ಲಿ ಒಂದೇ ಪಂಚವಾರ್ಷಿಕ ಯೋಜನೆಯೊಳಗೆ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಬೇಕು ಎಂದರೆ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತು ಅದು ಸಾಧ್ಯವಿಲ್ಲ ಎಂದು. ಸಾಧಾರಣವಾಗಿ ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳನ್ನು ನೋಡಿದಾಗ್ಯೂ ತಮ್ಮ ಸಮಾಜ ಸುಧಾರಣೆ ಆಗುವುದಕ್ಕೆ ಅನೇಕ ವರ್ಷಗಳನ್ನು ತೆಗೆದುಕೊಂಡಿದ್ದಾರೆ. ಹಾಗೂ ನಾವು ಸತತವಾಗಿ ಎರಡು ಶತಮಾನಗಳಿಂದ ದಾಸ್ಯದಲ್ಲಿದ್ದು ಸ್ವಾತಂತ್ರ್ಯ ಬಂದಮೇಲೆ ಸ್ವಾತಂತ್ರ್ಯವನ್ನು ನಾವು ಅನೇಕರು ಸ್ವೇಚ್ಛೆ ಎಂದು ತಿಳಿದುಕೊಂಡಿರುವುದರಿಂದ ನಮ್ಮ ಈ ಪ್ರಜಾಪ್ರಭುತ್ವದ ಒಂದು ಅಂಗದಲ್ಲಿ ನಮ್ಮ ಕೆಲಸಗಳನ್ನು ಬಹಳ ಸುಸೂತ್ರವಾಗಿ ನಡೆಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಸಹಿತ ನಮ್ಮ ಮಾನ್ಯ ಸದಸ್ಯರುಗಳು ತಿಳಿದುಕೊಂಡಿದ್ದಾರೆ. ಈ ಒಂದು ಪರಿಸ್ಥಿತಿಗೆ ಒಳಗಾಗಿ ಸರ್ಕಾರ ತನ್ನ ಕೈಯ್ಯಲ್ಲಾದಮಟ್ಟಿಗೆ ಈ ಸಮಾಜ ಸುಧಾರಣೆ ಮಾಡಲು ಹೊರಟಿದೆ. ಹಾಗೂ 3 ಪಂಚವಾರ್ಷಿಕ ಯೋಜನೆಗಳು ನಡೆದು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದ್ದೇವೆ. ಬಹುಶಃ ನಾವು ಈ ಸಮಾಜ ಸುಧಾರಣೆಯನ್ನು ಬರೀ ಸರ್ಕಾರದ ಹೊಣೆ ಎಂದು ತಿಳಿದುಕೊಳ್ಳುವುದಾದರೆ ನನಗಂತೂ ಅನಿಸುತ್ತದೆ ಇದನ್ನು ಪ್ರಜಾಪ್ರಭುತ್ವದಲ್ಲಿ ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಎಂದು. ಈ ಸಮಾಜ ಸುಧಾರಣೆಗೆ ಸರ್ಕಾರದ ಹೊಣೆ ಎಷ್ಟು ಇದೆಯೋ ಅಷ್ಟೇ ಜನತೆ ಹೊಣೆ ಇದೆಯೆಂದು ನಾವು ತಿಳಿದುಕೊಳ್ಳಬೇಕು. ಅನೇಕ ಸಂದರ್ಭಗಳಲ್ಲಿ ನಮ್ಮ ನಮ್ಮ ಜವಾಬ್ದಾರಿ ಹೊಣೆಗಾರಿಕೆ ಏನು ಇದೆ ಅನ್ನುವುದನ್ನು ಸಹ ಮರೆತು ನಾವು ಅನೇಕ ಕೆಲಸಕಾರ್ಯಗಳನ್ನು ಮಾಡಿರುವುದು ಸಹಿತ ನಮಗೆ ಮನವರಿಕೆಯಾಗುತ್ತಾ ಇದೆ. ಅದಕ್ಕೋಸ್ಕರವಾಗಿಯೇ ಈ ಸುಧಾರಣೆಯ ಕೆಲಸ ಬಹಳ ಕಷ್ಟವಾದುದು. ಪ್ರತಿಯೊಬ್ಬರಿಗೂ ಅವರ ಹೃದಯ ಪರಿವರ್ತನೆ ಆಗದೇಹೋದರೆ ಇದು ಸಾಧ್ಯವಾಗುವುದಿಲ್ಲ ಎಂದು ನಾವು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ. ಚರ್ಚೆ ಆಗುವಾಗ ಅನೇಕ ಮಾನ್ಯ ಸದಸ್ಯರು ಕೆಲವು ಸಮಸ್ಯೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕೆ ಸರಿಯಾದ ಉತ್ತರಗಳನ್ನು ಕೆಲವು ಮಾನ್ಯ ಸದಸ್ಯರುಗಳೇ ಹೇಳಿದ್ದಾರೆ. ಈ ಸಮಾಜ ಕಲ್ಯಾಣದಲ್ಲಿ ನಮ್ಮ ರಾಜ್ಯಾಂಗದ ಒಂದು ಉದ್ದೇಶ ಏನೆಂದರೆ ಬಲಹೀನ ಜನರಿಗೆ ರಕ್ಷಣೆ ಕೊಡುವುದು. ಆದುದರಿಂದಲೇ ಷೆಡ್ಯೂಲ್ ಕ್ಯಾಸ್ಟ್ಸ್, ಷೆಡ್ಯೂಲ್ ಟ್ರೈಬ್ಸ್, ಡೀನೋಟಿಫೈಡ್ ಟ್ರೈಬ್ಸ್ ಮುಂತಾದವರು ಒಳ್ಳೆಯ ಅಭಿವೃದ್ಧಿ ಪಡೆಯಲು, ಆರ್ಥಿಕವಾಗಿಯೂ ಇನ್ನೂ ಅನೇಕರು ವಸತಿಗಳು ಇಲ್ಲದೇ ತೊಂದರೆ ಪಡುತ್ತಾ ಇರುವುದರಿಂದಲೂ ಅದನ್ನೆಲ್ಲಾ ಕಲ್ಪನೆ ಮಾಡುವ ಯೋಜನೆಯ ಉದ್ದೇಶದಿಂದ ಈ ಸಮಾಜ ಕಲ್ಯಾಣ ಇಲಾಖೆ ಪ್ರಾರಂಭವಾಯಿತು. ಇದಕ್ಕೆ ನಾನು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರನೇಕರು ಅಂಕಿ ಅಂಶಗಳನ್ನು ಇಟ್ಟಿದ್ದಾರೆ. ನಾವು ನೂರಾರು ಲಕ್ಷ ರೂಪಾಯಿಗಳನ್ನೂ ಸಹಿತ ಖರ್ಚು ಮಾಡಿದ್ದೇವೆ. ನಾವು

ಇದನ್ನು ಖರ್ಚು ಮಾಡುವಾಗ ಯಾರೇ ಆಗಲಿ ಸಾರ್ವಜನಿಕ ಸೇವಕರಾಗಲಿ, ಸಮಾಜ
ಸೇವಕರಾಗಲಿ ಅದಕ್ಕೆ ಯಾವ ವರ್ಗದವರೇ ಆಗಲಿ ಇದನ್ನು ತಮ್ಮ ಸಹೋದರರಿಗೆ ಮತ್ತು ಸಹೋ
ದರಿಯರಿಗೆ ಅವರ ಅಭಿವೃದ್ಧಿಗೆ ಮಾಡುವ ಕೆಲಸದೊಳಗೆ ತಾವು ಒಂದು ನಿಷ್ಠೆಯಿಂದ ಕೆಲಸಕಾರ್ಯ
ಗಳನ್ನು ಮಾಡುವುದಾದರೆ ಖಂಡಿತವಾಗಿಯೂ ಪ್ರತಿಯೊಂದುಕಾಸು ಏನು ಖರ್ಚು ಮಾಡುತ್ತೇವೆಯೋ
ಅದು ಅವರಿಗೆ ಸಲ್ಲುವಂತಾಗುತ್ತದೆ. ಅದರಲ್ಲಿ ಕೆಲವು ಲೋಪದೋಷಗಳು ನಡೆದಿವೆ. ನನ
ಗಂತೂ ಲೋಪದೋಷಗಳು ನಡೆದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಲೋಪದೋಷಗಳು
ನಡೆದಿರಬಹುದು. ಏಕೆಂದರೆ ನಾವು ಮನುಷ್ಯಮಾತ್ರದವರು. ಅದಕ್ಕೋಸ್ಕರವಾಗಿ ನಾನು ಹೇಳು
ವುದು, ನಮ್ಮ ನಿಷ್ಠೆ ಮತ್ತು ಹೃದಯಪರಿವರ್ತನೆ ಆಗದೇಹೋದರೆ ಈ ಕೆಲಸ ಮಾಡುವುದು
ಸಾಧ್ಯವಿಲ್ಲ. ಅನೇಕರು ಹೇಳಿದರು ಈ ಸಮಾಜ ಕಲ್ಯಾಣದ ಆಡಳಿತ ವರ್ಗದೊಳಗೆ ಅನೇಕ ಅಧಿ
ಕಾರಿಗಳು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು. ನಾನು ಬಹಳ ವ್ಯಸನದಿಂದ ಕೇಳಿ ನಾನು ತಮ್ಮಲ್ಲಿ
ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಅನೇಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಂತಹ ಕೆಲಸಗಳನ್ನು
ಕಣ್ಣಾರೆ ನೋಡುತ್ತಿರುತ್ತಾರೆ. ಅಂತಹ ಸಂದರ್ಭದಲ್ಲಿ ಎಲ್ಲಿ ಏನು ಲೋಪಗಳು ಇರುತ್ತವೆ ಎನ್ನು
ವುದನ್ನು ಇಲ್ಲಿ ಬಂದು ಹೇಳುವುದೇ ಅಲ್ಲದೆ ಆಗಾಗ್ಗೆ ನನ್ನಲ್ಲಿ ಬಂದು ತಿಳಿಸಿದರೆ ಆ ಲೋಪಗಳನ್ನು
ಸರಿಮಾಡುವ ವ್ಯವಸ್ಥೆ ಮಾಡುತ್ತೇನೆ. ನಾನು ಮಂತ್ರಿಯಾಗಿ ಪ್ರತಿಯೊಂದು ಹಳ್ಳಿಗೂ ಹೋಗುವುದ
ಕ್ಕಾಗುವುದಿಲ್ಲ. ಅದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ತಾಲ್ಲೂಕು ಅಧಿಕಾರಿಗಳು ಬಟ್ಟು
ಡಿವಿಷನಲ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಎಲ್ಲಾಹಳ್ಳಿಗಳಿಗೂ ಹೋಗುವುದಕ್ಕಾಗುವುದಿಲ್ಲ.
ಈ ಒಂದು ದೃಷ್ಟಿಯಿಂದ ನಾನು ಮತ್ತೊಮ್ಮೆ ಮನವಿಮಾಡಿಕೊಳ್ಳುತ್ತೇನೆ. ಏನಾದರೂ ಲೋಪ
ದೋಷಗಳು ಇದ್ದರೆ ಅವುಗಳನ್ನು ನೇರವಾಗಿ ಬಂದು ನನಗೆ ತಿಳಿಸಬೇಕೆಂದು. ಸ್ವಾಮಿ, ಹಿಂದು
ಳಿದ ಪಂಗಡಗಳ ಉದ್ಧಾರಕ್ಕೋಸ್ಕರವಾಗಿ ನಾವು ಅವರ ಮಕ್ಕಳ ವಿದ್ಯಾಭ್ಯಾಸ, ಅವರ ಒಂದು
ಆರ್ಥಿಕಾಭಿವೃದ್ಧಿಗೋಸ್ಕರ ಕೆಲವು ಯೋಜನೆಗಳು ಮತ್ತು ಅವರ ವಸತಿ ಪಡೆಯಲು ಹೆಚ್ಚಾಗಿ ಈ
ಹಣವನ್ನು ನಾವು ಖರ್ಚುಮಾಡುತ್ತಿದ್ದೇವೆ. ಈ ವಿದ್ಯಾಭ್ಯಾಸದ ವಿಚಾರದಲ್ಲಿ ನನ್ನ ಮಾನ್ಯ ಮಿತ್ರರು
ಅನೇಕರು ಹೇಳಿದ್ದಾರೆ. ಅದರೊಳಗೆ ವಿದ್ಯಾಭ್ಯಾಸ ಮತ್ತು ವಿದ್ಯಾರ್ಥಿನಿಲಯಗಳಿಗೆ ನೀವು ಹಣ
ವನ್ನು ಹೆಚ್ಚು ಮಾಡಬೇಕು ಎಂದು. ಹೆಚ್ಚು ಮಾಡುತ್ತೇವೆ. ಅದರೊಳಗೆ ಏನೂ ಅನುಮಾನ ಇಲ್ಲ.
ಆದರೆ ನಾನು ಮೊದಲೇ ಹೇಳಿದ ಹಾಗೆ ನಾವು ಅಭಿವೃದ್ಧಿ ಆಗುವ ರಾಷ್ಟ್ರ. ಒಂದೇ ದಿವಸದೊಳಗೆ
ಕೋಟ್ಯಾಂತರ ರೂಪಾಯಿ ಖರ್ಚುಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮಲ್ಲಿ ಎಷ್ಟು ಸಾಧ್ಯವೋ
ಅದನ್ನು ಒಂದು ಯೋಜಿತ ರೀತಿಯೊಳಗೆ ಖರ್ಚುಮಾಡುತ್ತೇವೆ. ಕೆಲವು ಮಾನ್ಯ ಸದಸ್ಯರು ಹೇಳಿ
ದರು, ಹರಿಜನ ಗಿರಿಜನರಿಗೆ ಮೀಸಲಾದ ಈ ವಿದ್ಯಾರ್ಥಿನಿಲಯಗಳಲ್ಲಿ ಬೇರೆಯವರಿಗೂ ಒಂದು
ಸ್ಥಳಾವಕಾಶವನ್ನು ಮಾಡಿಕೊಟ್ಟಿದ್ದಾರೆ ಎಂದು ನಾನು ಬಹಳ ವಿನಯದಿಂದ ಹೇಳುತ್ತೇನೆ. ಈ
ಅಸ್ಪೃಶ್ಯತೆ ಇಲ್ಲ ಎಂದು ನಾವೂ ಸಹಿತ ಹೇಳುವುದಕ್ಕಾಗುವುದಿಲ್ಲ. ವಾಸ್ತವಾಂಶವನ್ನು ಮುಚ್ಚಿಡು
ವುದಕ್ಕೆ ಯಾರೂ ಪ್ರಯತ್ನ ಮಾಡಬಾರದು. ಇಂತಹ ಸಂದರ್ಭದಲ್ಲಿ ಬೇರೆ ಒಂದು ಪಂಗಡವ,
ಒಂದು ಗುಂಪಿನ ವಿದ್ಯಾರ್ಥಿಗಳು ಈ ಪಂಗಡದ ವಿದ್ಯಾರ್ಥಿಗಳ ಜೊತೆಗೆ ಈ ವಿದ್ಯಾರ್ಥಿನಿಲಯದಲ್ಲಿ
ಕಲೆತವ್ದೇ ಆದರೆ ಈ ಅಸ್ಪೃಶ್ಯತೆ ಅಷ್ಟು ನಿವಾರಣೆ ಆಗುವುದಿಲ್ಲವೇ ? ಇದನ್ನು ಮಾನ್ಯ ಸದಸ್ಯರು
ಸ್ವಲ್ಪ ಯೋಚನೆ ಮಾಡಬೇಕು.

6-30 P.M.

ಅನೇಕ ಮಾನ್ಯ ಸದಸ್ಯರು ಮತ್ತು ಈಗತಾನೆ ಪ್ರಭಾಕರ್‌ರವರು ಬೇರೆಯವರಿಗೆ ಸೇಕಡ 25
ಸೀಟುಗಳನ್ನು ಮೀಸಲಾಗಿಡಬೇಕೆಂದು ಹೇಳಿದರು. ಇದು ಸರಿ. ವಿದ್ಯಾಭ್ಯಾಸಕ್ಕೆ, ಅವರ ಅಭಿ
ವೃದ್ಧಿಗೆ ನಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಕೆಲವು ಸಂದರ್ಭಗಳ
ಕೆಲವು ಹೊಸ ಯೋಜನೆಗಳು ಬಂದಾಗ ಅವನ್ನು ಕಾರ್ಯಗತಮಾಡುವಾಗ ಸ್ವಲ್ಪ ತಡವಾಗುತ್ತದೆ.
ಆ ಒಂದು ದೃಷ್ಟಿಯಿಂದ ಸ್ವಲ್ಪ ಲ್ಯಾಪ್ಸ್ ಆಗಿರಬಹುದೇ ಹೊರತು ಜಯಪ್ರಕಾಶ್ ನಾರಾಯಣ್
ರವರು ಹೇಳಿದಂತೆ ಕೋಟ್ಯಾಂತರ ರೂಪಾಯಿ ಲ್ಯಾಪ್ಸ್ ಆಗಿಲ್ಲ. ಆ ದೃಷ್ಟಿಯಿಂದಲೇನೇ ವಿದ್ಯಾರ್ಥಿ
ನಿಲಯಗಳಿಗೆ ಮೊದಲು ಒಬ್ಬ ವಿದ್ಯಾರ್ಥಿಗೆ 12 ರೂಪಾಯಿ ಕೊಡುತ್ತಿದ್ದುದನ್ನು 18 ರೂಪಾಯಿಗೆ
ಹೆಚ್ಚಿಸಿ ನಂತರ ಅದನ್ನು 25 ರೂಪಾಯಿಗೆ ಈಗ ಹೆಚ್ಚಿಸಿದೆ. ಮಾನ್ಯ ಸದಸ್ಯರನೇಕರು ಇದನ್ನು
ಹೆಚ್ಚುಮಾಡಬೇಕೆಂದು ಸಲಹೆಮಾಡಿದ್ದಾರೆ, ಅದನ್ನು ಒಂದುವೇಳೆ ಪರಿಶೀಲಿಸೋಣ. ಏಕೆಂದರೆ
ಇದು ಅವರ ಜೀವನ ನಡೆಸುವ ಪ್ರಶ್ನೆ. ಇದನ್ನು ಮೊದಲು ಗೊತ್ತುಮಾಡೋಣ. ಬೇರೆ ಎಲ್ಲಾ
ಯೋಜನೆಗಳನ್ನು ಬದಿಗಿಟ್ಟು ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚುಮಾಡಬೇಕೆಂದು ಹೇಳಿದ್ದಾರೆ. ಇದನ್ನು
ಗಮನಿಸಿ ಏನೇನು ಸಾಧ್ಯವೋ ಅದನ್ನು ಮಾಡಲು ಮತ್ತು ಬೇರೆ ಬಾಬುಗಳನ್ನು ತೆಗೆದು ವಿದ್ಯಾ

(ಶ್ರೀ ಟಿ. ನಾರಾಯಣ ಗೌಡ)

ಭ್ಯಾಸಕ್ಕೆ ಎಷ್ಟು ಹೇಗೆ ಖರ್ಚುಮಾಡುವುದಕ್ಕೆ ಸಾಧ್ಯ ಅಷ್ಟನ್ನು ಖರ್ಚುಮಾಡಲು ಪ್ರಯತ್ನಿಸುತ್ತೇವೆ. ಆಮೇಲೆ ಕಾಲೇಜು ವಿದ್ಯಾರ್ಥಿಗಳು ಮಂಗಳೂರಿನಲ್ಲಿ ಬಹಳ ಜನರಿದ್ದಾರೆ, ಅವರಿಗೆ ಹಾಸ್ಟಲು ಸೌಕರ್ಯವಿಲ್ಲ ಎಂದು ಶ್ರೀ ರಾಮಚಂದ್ರರವರು ಹೇಳಿದರು. ಅವರು ಈ ಮಾನ್ಯ ಸಭೆಯ ಸದಸ್ಯರು, ಹರಿಜನ ವಿದ್ಯಾರ್ಥಿಗಳು ಜನರಲ್ ಹಾಸ್ಟಲಿಗೆ ಹೋಗಿ ಸೇರುವುದಕ್ಕೆ ಅಡಚಣೆಯಿಲ್ಲ ಅದಕ್ಕೆ ಮುಂಗಡ ಹಣ ಕೊಡಬೇಕು ಎಂಬ ನಿಬಂಧನೆ ಇದೆ, ಅದರಂತೆ ಪ್ರಿನ್ಸಿಪಾಲರಿಗೆ ನಾವು ಮುಂಗಡ ಹಣ ಕೊಟ್ಟಿದ್ದೇವೆ, ಅವರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಸರ್ಟಿಫಿಕೇಟ್ ತಂದಾಗ ಸೇರಿಸಿಕೊಳ್ಳಬಹುದು ಎಂದು ತಿಳಿಸಿದ್ದೇವೆ. ಇದೇ ಸಂಬಂಧದಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಏನಾದರೂ ತೊಂದರೆ ಬಂದರೆ ಖಂಡಿತವಾಗಿಯೂ ನಾವು ಅದನ್ನು ಆದಷ್ಟು ಬೇಗನೆ ಪರಿಹಾರಮಾಡುವುದಕ್ಕೆ ಮನಸ್ಸು ಮಾಡಿರುತ್ತೇವೆ. ಒಂದು ಉದಾಹರಣೆ ಕೊಡಬೇಕಾದರೆ ಈ ಮಾರ್ಚಿ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಕೆಲವು ಕಾಲೇಜು ವಿದ್ಯಾರ್ಥಿಗಳು ಅವರ ವಿದ್ಯಾರ್ಥಿ ನಿಲಯದಲ್ಲಿದ್ದು ಅವರಿಗೆ ತಮ್ಮ ಹಣವನ್ನು ಅಲ್ಲಿ ಕೊಡದಿದ್ದುದರಿಂದ—ಏಕೆಂದರೆ ಅವರಿಗೆ 50 ರೂಪಾಯಿನಿಂದ 75 ರೂಪಾಯಿಗಳವರೆಗೆ ಪಡೆಯಲು ಅವಕಾಶಕೊಟ್ಟಿದೆ, ಅದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಾಗದೆ ಆ ಒಂದು ದೃಷ್ಟಿಯಿಂದ ಅವರಿಗೆ ಪರೀಕ್ಷೆಗೆ ಪ್ರವೇಶ ಪತ್ರ ದೊರೆಯದೆ ನಿರಾಕರಿಸಿದಾಗ ವಿದ್ಯಾರ್ಥಿಗಳು, ತಮ್ಮಂಥ ಮುಖಂಡರುಗಳ ನೇತೃತ್ವದಲ್ಲಿ ಬಂದು ನನಗೆ ತಿಳಿಸಿದರು. ನಾನು ತಿಳಿಸಿದ ತಕ್ಷಣ ಡೈರೆಕ್ಟರಿಗೆ ಒಂದು ಆದೇಶ ನೀಡಿದೆ ತಕ್ಷಣ ಪ್ರಿನ್ಸಿಪಾಲರಿಗೆ ಫೋನುಮಾಡಿ ಕೊಡಬೇಕಾದ ಹಣ ನಾವು ಕೊಡುತ್ತೇವೆ, ಪರೀಕ್ಷೆಗೆ ಹೋಗಲು ಹಾಲ್‌ಟಿಕೇಟ್ ನಿರಾಕರಿಸಬೇಡಿ ಎಂದು. ಇಂಥ ಉದಾಹರಣೆ ಇರುವಾಗ ಹರಿಜನರ ವಿಷಯದಲ್ಲಿ ನಿಮಗೆ ಸ್ವಲ್ಪವೂ ಕನಿಕರವಿಲ್ಲ ಎಂದು ಹೇಳುವುದು ಸರಿಯೇ ? ಯಾರೇ ಆಗಲಿ ಹೇಳಿದ ತಕ್ಷಣ ಹೇಳಿದಂತೆ ಮಾಡದಿದ್ದರೆ ಆಕ್ಷೇಪಿಸುತ್ತಾರೆ. ಅಧಿಕಾರಿಗಳೂ ಮನುಷ್ಯ ಮಟ್ಟದವರು, ತಪ್ಪು ಮಾಡುವ ಸ್ವಭಾವ ಇರುತ್ತದೆ. ಆದರೆ ಹಾಗೆ ಮಾಡಬಾರದು. ಯಾವಾಗಲಾದರೂ ಮಾಡಿದರೆ ಅವನ್ನೇ ದೊಡ್ಡದು ಮಾಡಿದರೆ ಪ್ರಯೋಜನವಿಲ್ಲ. ಇದರಿಂದ ವಿದ್ಯಾಭ್ಯಾಸದ ವಿಷಯದಲ್ಲಿ ನಾವು ಹೆಚ್ಚು ಗಮನಕೊಡುತ್ತಿದ್ದೇವೆಂಬುದು ತಮಗೆಲ್ಲರಿಗೂ ಮನವರಿಕೆಯಾಗಿದೆ. ಹಾಗೆಯೇ ಅವರ ಆರ್ಥಿಕಾಭಿವೃದ್ಧಿಗೆ ಏನೇನು ಮಾಡಲು ಸಾಧ್ಯವೋ ಅದನ್ನು ಮಾಡುತ್ತಿದ್ದೇವೆ. ಕೋಳಿ, ಕುರಿ, ಎತ್ತು ಮುಂತಾದುವನ್ನು ಕೊಡಲಾಗುತ್ತಿದೆ, ಅದಲ್ಲಾ ದುರುಪಯೋಗವಾಗುತ್ತಿದೆ, ಅದನ್ನು ಬಿಟ್ಟು ಜಮೀನನ್ನು ಕೊಡಿ ಎಂದು ಅನೇಕರು ಹೇಳಿದರು. ದುರುಪಯೋಗಪಡಿಸುವುದಕ್ಕೆ ಸ್ವಲ್ಪ ಜನ ಸಾಮಿಲಿರುವಾಗ ಯಾವುದೇ ಕೊಟ್ಟರೂ ದುರುಪಯೋಗವಾಗುತ್ತದೆ, ಜಮೀನು ಕೊಟ್ಟರೂ ದುರುಪಯೋಗವಾಗುತ್ತದೆ, ಜಮೀನು ಕೊಟ್ಟಿರುವುದೂ ದುರುಪಯೋಗವಾಗಿರುವ ಪ್ರಕರಣಗಳಿವೆ, ಬಹುಶಃ ಜನರು ತಮಗೆ ಕೊಡುವ ಸಹಾಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಇಲ್ಲಿ ಕೆಲವರು ಮುಖಂಡರು ಎಂಬುವರು ದುರುಪಯೋಗಪಡಿಸುವುದಕ್ಕೆ ಸ್ವಲ್ಪ ಮನಸ್ಸುಮಾಡಬಹುದು ಅಥವಾ ಮಾಡಿದ್ದಾರೆ ಎಂದು ಸಹ ಹೇಳಬಹುದು. ಕಾಂಗ್ರೆಸ್ ಪುಡಾರಿಗಳು ಹಾಗೆ ಮಾಡುತ್ತಾರೆಂದು ಕೆಲವರು ಹೇಳಿದರು. ಆದರೆ ಕಾಂಗ್ರೆಸ್ಸೇತರ ಪುಡಾರಿಗಳೇ ಹೆಚ್ಚಾಗಿ ಈ ದುರುಪಯೋಗಮಾಡುತ್ತಾರೆ ಎಂದು ನಾನು ಹೇಳುತ್ತೇನೆ. ಇದನ್ನು ನಾವು ಪಕ್ಷದ ದೃಷ್ಟಿಯಿಂದ ನೋಡಬೇಕಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಜಿಲ್ಲೆಯಲ್ಲಿ ಸ್ಯಾಂಪಲ್ ಸರ್ವೆಮಾಡಿಸಿ.

ಶ್ರೀ ಟಿ. ನಾರಾಯಣಗೌಡ.—ನಮ್ಮ ಜಿಲ್ಲೆ ವಿಚಾರ ನನಗೆ ಗೊತ್ತಿದೆ. ಪುಡಾರಿ ಎಂದರೆ ಮುಂದಾಳು ಎಂಬ ಅರ್ಥವಿದೆ. ಆದರೆ ಕೆಲವರು ಆ ಪದಕ್ಕೆ ವ್ಯಂಗ್ಯಾರ್ಥ ಕೊಟ್ಟಿರುವುದು ಸರಿಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಪುಡಾರಿ ಎಂದರೆ ಲಪಟಾಯಿಸುವವರು ಎಂದರ್ಥ.

ಶ್ರೀ ಟಿ. ನಾರಾಯಣಗೌಡ.—ಅದು ನಿಮ್ಮ ವ್ಯಾಖ್ಯಾನ. ಆರ್ಥಿಕ ನೆರವು ಕೊಡುವ ಸಮಯದಲ್ಲಿ ಕೆಲವು ವೃತ್ತಿಗಳಿಗೆ ಸಂಬಂಧಪಟ್ಟ ಉದ್ಯೋಗಕ್ಕೆ ಅವಕಾಶವಾಗುವಂಥ ಶಿಕ್ಷಣ ಕೊಟ್ಟರೆ ಅವರು ಜೀವನನಡೆಸಲು ಸಹಾಯವಾಗುತ್ತದೆಂದು ಕಸುಬಿನ ತರಬೇತಿ ಕೇಂದ್ರಗಳನ್ನು ತೆರೆದಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ.—ಇವತ್ತಿನವರೆಗೆ ಕಳೆದ 20 ವರ್ಷಗಳಲ್ಲಿ ಎಷ್ಟು ಜನ ಹರಿಜನರಿಗೆ ಜಮೀನುಕೊಟ್ಟಿದ್ದೀರಿ ? ಎಷ್ಟು ಜನ ಕಳೆದುಕೊಂಡಿದ್ದಾರೆ ? ಇದನ್ನು ಕಂಡುಹಿಡಿಯಬೇಕಲ್ಲವೆ ಇಲ್ಲವೆ ಇಲ್ಲಿಯದು.

ಶ್ರೀ ಜಿ. ನಾರಾಯಣ ಗೌಡ.—ಸ್ಯಾಂಪಲ್ ಸರ್ವೆ ಒಂದು ಹೋಬಳಿಯಲ್ಲಿ ಮಾಡಬಹುದೇ ಹೊರತು ರಾಜ್ಯದಾದ್ಯಂತ ಮಾಡುವುದಕ್ಕಾಗುವುದಿಲ್ಲ. ಜಮೀನು ಎಲ್ಲಾ ಕಡೆಯೂ ಕೊಡುವುದಕ್ಕೆ ದೊರೆಯುವುದಿಲ್ಲ, ಎಲ್ಲಿ ಕೊಡುವುದಕ್ಕೆ ಸಾಧ್ಯವೋ ಅಲ್ಲಿ ಕೊಟ್ಟಿದ್ದೇವೆ, ಕೊಟ್ಟಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ನೂರಕ್ಕೆ ನೂರರಷ್ಟು ಈ ಜನಾಂಗದವರಿಗೆ ಸಿಕ್ಕದೆ ಇರಬಹುದು. ಈ ಕ್ರಾಫ್ಟ್ಸ್ ತರಬೇತಿಯಿಂದ ಅವರು ಅವರ ಜೀವನೋಪಾಯವನ್ನು ಮಾಡುವುದಕ್ಕೆ ಅನೇಕ ಸಂದರ್ಭಗಳಿವೆ. ಅಂಥದರಲ್ಲಿ ಟೈಲರಿಂಗ್ ಸೆಕ್ಷನ್ ಒಂದು. ಅದಕ್ಕೆ ಯಾರು ಬರುತ್ತಾರೋ ಅವರಿಗೆ 25 ರೂಪಾಯಿ ಸ್ಟೈಪೆಂಡ್ ಕೊಡುತ್ತೇವೆ, ಹಾಗೂ ಬೇರೆ ಕ್ರಾಫ್ಟ್ ತರಪೇತಿಗೆ 50 ರೂಪಾಯಿ ಕೊಡುತ್ತಿದ್ದೇವೆ. ಟೈಲರಿಂಗ್ ತರಪೇತಿ ಹೊಂದಿದಮೇಲೆ ಅವರಿಗೆ ಉಚಿತ ಮೇಷೀನ್ ಕೊಡುತ್ತೇವೆ. ಈ ರೀತಿ ಉಚಿತ ಮೇಷೀನ್ ಕೊಟ್ಟರೆ ಅವರು ಮಾರುತ್ತಾರೆ ಎಂದು ಹೇಳಿದರೆ, ಬೇರೆ ಏನು ದಾರಿ ಎಂದು ತಾವು ಸಲಹೆ ಕೊಡಿ. ಆದ್ದರಿಂದ ಏನೇ ಒಂದು ಅವರ ಅಭಿವೃದ್ಧಿಗೋಸ್ಕರ ಯಾವ ಒಂದು ಯೋಜನೆ ತಂದರೂ ಸಹಿತ, ಕೆಲವು ಸಂದರ್ಭಗಳಲ್ಲಿ ಅವು ದುರುಪಯೋಗವಾಗುತ್ತದೆ. ಅವರಲ್ಲಿ ಹೆಚ್ಚು ದುರುಪಯೋಗ ಆಗುವ ಹಾಗಿದ್ದರೆ, ಅದನ್ನು ಬಿಟ್ಟು ಬಿಡುವುದು ಒಳ್ಳೆಯದು ಶೇಕಡಾ 1—2 ದುರುಪಯೋಗವಾದರೆ ಏಕೆ ಬಿಡಬೇಕು ! ಇದಲ್ಲದೆ ಕೆಲವು ಮಾನ್ಯ ಸದಸ್ಯರು ಹೇಳಿದರು—ಎಲ್ಲಿಯೋ ಈ ಟೈಲರಿಂಗ್‌ಗೆ ಟ್ರೈನಿಂಗ್ ಕೊಟ್ಟರೆ ಸಾಲದು, ಭಾರತ ಎಲೆಕ್ಟ್ರಾನಿಕ್ಸ್, ಎಚ್. ಎ. ಎಲ್, ಮೊದಲಾದ ಬೇರೆ ಬೇರೆ ಫರ್ಮಿನೊಳಗೆ ಟ್ರೈನಿಂಗ್ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡಿದರು. ಆ ವ್ಯವಸ್ಥೆ ಕೂಡ ಮಾಡಿದೆ. ಅದಲ್ಲದೆ ಅಲ್ಲಿ ಅವರಿಗೆ ಸ್ಟೈಪೆಂಡ್ ಕೂಡ ಕೊಡುತ್ತಿದ್ದಾರೆ. ಎಚ್. ಎ. ಎಲ್.ನಲ್ಲಿ ಯಾರು ತರಬೇತು ಹೊಂದಿರುತ್ತಾರೋ, ಅಲ್ಲೇ ಅವರು ಸಾಧಾರಣವಾಗಿ ಕೆಲಸಕ್ಕೆ ಸೇರಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಯಪ್ರಕಾಶ್ ನಾರಾಯಣ್.—ಎಷ್ಟು ಜನರಿಗೆ ಟ್ರೇನಿಂಗ್ ಕೊಟ್ಟಿದ್ದೀರಿ, ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಅದು ಮತ್ತೆ ಹೇಳುತ್ತೇನೆ. ಆಮೇಲೆ ಈ ವಸತಿ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದರೊಳಗೆ, 400 ರೂಪಾಯಿ ಕೊಟ್ಟು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೆವು. ನನ್ನ ಮಟ್ಟಿಗೆ ಹೇಳುವುದಾದರೆ, ಸುಮಾರು 35 ಸಾವಿರ ಮನೆಗಳಾಗಿವೆ. ಆದರೆ ಅದರೊಳಗೆ ಸಹಿತ ನೂರಕ್ಕೆ ನೂರು ಜನ ಉಪಯೋಗ ಮಾಡದೆ ಇರಬಹುದು. ಆದರೆ ಅಲ್ಲಿ ದುರುಪಯೋಗಪಡಿಸಿಕೊಳ್ಳುವವರೂ ಇದ್ದಾರೆ. ಈ ರೀತಿ ಹೆಚ್ಚಿಗೆ ದುರುಪಯೋಗ ಮಾಡಿದರೆ ನಾವು ಯಾವಾಗ ಅಭಿವೃದ್ಧಿಯಾಗುವುದು ? ಮತ್ತು ಇದನ್ನೆಲ್ಲಾ ಒಂದೇ ದಿವಸದಲ್ಲಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಮೈಸೂರು ಸ್ಟೇಟ್ ಶೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಶೆಡ್ಯೂಲ್ಡ್ ಟ್ರೈಬ್ಸ್ ಹೌಸಿಂಗ್ ಕಾರ್ಪೊರೇಷನ್ ಮಾಡಿ, ನಾವು ಮೂರುವರೆ ಕೋಟಿ ರೂಪಾಯಿಯನ್ನು ಸಾಲ ತೆಗೆದು ಮೂರು ಕೋಟಿ ನಲ್ವತ್ತು ಲಕ್ಷ ರೂಪಾಯಿ ಮನೆಗಳನ್ನು ಕಟ್ಟುವುದಕ್ಕೆ ಸಾಲವಾಗಿ ಕೊಡಲು ಹತ್ತು ಲಕ್ಷ ರೂಪಾಯಿಯನ್ನು ಸೊಸೈಟಿಗಳಿಗೆ ಷೇರ್ ಮೊಬಲಗಾಗಿಯೂ ಕೊಟ್ಟಿದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬಹಳ ಬಡವರಿಗಾಗಿ ಮನೆ ಕಟ್ಟಿಕೊಳ್ಳಲು 50,000 ರೂಪಾಯನ್ನು ಗ್ರಾಂಟಾಗಿ ಉಪಯೋಗಿಸಲು ಇಟ್ಟುಕೊಂಡಿದ್ದೇವೆ. ಅದೂ ಸಾಲದು. ನಾವು ಹಿಂದೆ ಯಾವ ದೃಷ್ಟಿಯಿಂದ ಗ್ರಾಂಟ್ ಪ್ರಾರಂಭಿಸಿದೆವೋ, ಮತ್ತೂ ಅದೇ ರೀತಿ ಕೊಟ್ಟರೆ ಸರಿಯಾಗಿ ಉಪಯೋಗಮಾಡಿಕೊಳ್ಳುತ್ತಾರೆಯೇ ಎಂದು ನೋಡಿಕೊಳ್ಳುವುದಕ್ಕೋಸ್ಕರವಾಗಿ, ಈಗ 700 ರೂಪಾಯಿ ನಗದು ಮತ್ತು 200 ರೂಪಾಯಿಯ ಟಿಂಬರ್, ಅದನ್ನು ಕೊಡುತ್ತಿದ್ದಾರೆ. ಟಿಂಬರ್ ಸರಿಯಾಗಿ ಉಪಯೋಗಮಾಡುತ್ತಿಲ್ಲವೆಂದು ಹೇಳಿದರು ಕೆಲವರು. ಇನ್ನು ಕೆಲವರು ಅದು ಸಾಲದು ಎಂದು ಹೇಳಿದರು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಈಗ ಸಾಲ ಕೊಡುವುದಕ್ಕೆ ಏರ್ಪಾಡು ಮಾಡಿದ್ದೀರಲ್ಲ. ಈ ಹಣ ಎಷ್ಟು ಜನರಿಗೆ ನೇರವಾಗಿ ತಲುಪಿವೆ, ಅದರಲ್ಲಿ ಎಷ್ಟು ಮನೆಗಳು ಬಿದ್ದಿವೆ, ಅದರ ಅಂಕಿ ಅಂಶ ಕಲೆಕ್ಟ್ ಮಾಡಿದ್ದೀರಾ ? ಮತ್ತು ಎಲ್ಲ ಸೊಸೈಟಿಗಳಲ್ಲಿ ದುರುಪಯೋಗವಾಗುತ್ತಿದೆ ಎಂದು ತನಿಖೆ ಮಾಡಿಸಿದ್ದೀರಾ !

ಶ್ರೀ ಜಿ. ನಾರಾಯಣ ಗೌಡ.—ನಾವು ಸಾಲ ಈಗಾಗಲೇ 3 ಕೋಟಿ 40 ಲಕ್ಷದೊಳಗೆ, ಒಂದು ಕೋಟಿ 28 ಲಕ್ಷ 90 ಸಾವಿರ ರೂಪಾಯಿ ಜನರಿಗೆ ಸಾಲ ಕೊಟ್ಟಿದ್ದೇವೆ. ಇದನ್ನು ಕೊಡುವಾಗ ಯಾವ ರೀತಿ ಕೊಡುತ್ತೇವೆಂದರೆ—ಮೊದಲನೆ ಕಂತು ಇಪ್ಪತ್ತು ಪರ್ಸೆಂಟ್ ಕೊಡುತ್ತೇವೆ. ಆಮೇಲೆ ಫೌಂಡೇಷನ್ ಬರುತ್ತದೆ. ಆಮೇಲೆ 40 ಪರ್ಸೆಂಟ್ ಇಟ್ಟುಕೊಂಡಿದ್ದೇವೆ. ಮೂರನೆ ಕಂತು 40 ಪರ್ಸೆಂಟ್ ಇಟ್ಟುಕೊಂಡಿದ್ದೇವೆ. ಇನ್ನು ಕೆಲವು ಕಡೆ 20 ಮತ್ತು 20—60 ಪರ್ಸೆಂಟ್ ತಾಲ್ಲೂಕು ಮಟ್ಟದಲ್ಲಿರುವ ಸೊಸೈಟಿಗಳಲ್ಲಿ ಇಟ್ಟುಕೊಂಡಿದ್ದಾರೆ. ಇನ್ನು ಕೆಲವು ಸೊಸೈಟಿಗಳಲ್ಲಿ ಹೆಚ್ಚಾಗಿ ಹಣವನ್ನು ಉಪಯೋಗಿಸಿಕೊಳ್ಳುವ ಮನೋಭಾವನೆ ಬಂದು, ಬೇರೆಯವರು ಅದಕ್ಕೆ

(ಶ್ರೀ ಜಿ. ನಾರಾಯಣ ಗೌಡ)

ತಕರಾರು ಮಾಡಿದರು. ಅದಕ್ಕೋಸ್ಕರ ಕಾರ್ಪೊರೇಶನ್ ತೀರ್ಮಾನ ತೆಗೆದುಕೊಂಡಿದೆ. ಆ ತಾಲೂಕಿನ ಒಳಗೆ ಎಷ್ಟು ಶೆಡ್ಯೂಲ್ಡ್ ಟ್ರೈಬ್ಸ್, ಎಷ್ಟು ಶೆಡ್ಯೂಲ್ಡ್ ಕ್ಯಾಸ್ಟ್ ಇದ್ದಾರೆ, ಅದಕ್ಕೆ ಅನುಗುಣವಾಗಿ ಇದನ್ನು ಹಂಚಬೇಕೆಂಬ ದೃಷ್ಟಿಯನ್ನಿಟ್ಟುಕೊಂಡಿದ್ದಾರೆ. ಆ ಮೇಲೆ ಇನ್ನು ಕೆಲವರು ಹೇಳಿದರು ಸೈಟುಗಳು ಸಿಗುವುದು ಬಹಳ ಕಷ್ಟವಾಗಿದೆಯೆಂದು. ಸರ್ವಸಾಧಾರಣವಾಗಿ ನಮ್ಮಲ್ಲಿ ಅನೇಕ ಎಕರೆಗಳನ್ನು ಅಕ್ವಾಯರ್ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅಕ್ವಿಸಿಷನ್ ಮಾಡುವಾಗ ನಿಧಾನವಾಗುತ್ತದೆ. ಆ ಹರಿಜನ ಗಿರಿಜನರಿಗೆ ಮನೆ ಕಟ್ಟಿಕೊಳ್ಳಲು ಒಂದು ದೃಷ್ಟಿಯಿಂದ ಎಲ್ಲಿಯಾದರೂ ಸೈಟುಗಳು ಸಿಗದಿದ್ದರೆ ಅಗ್ರಿಕಲ್ಚರ್ ಪರ್‌ಪಸ್‌ಗೆ ಮನೆ ಕಟ್ಟಿಕೊಳ್ಳುವವರಿಗೆ ಅಂಥವರಿಗೆ ಒಂದುವರೆ ಗುಂಟೆ ನಾನ್ ಅಗ್ರಿಕಲ್ಚರಲ್ ಉದ್ದೇಶಕ್ಕೋಸ್ಕರ ಮತ್ತು ಮನೆ ಕಟ್ಟುವುದಕ್ಕೋಸ್ಕರ ಒಂದು ಗುಂಟೆ ಸೈಟನ್ನು ವಿಂಗಡಿಸಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಆಮೇಲೆ ಜಯಪ್ರಕಾಶ ನಾರಾಯಣರವರು, ಅಗ್ರಿಕಲ್ಚರಲ್ ಕಾಲೋನಿಗಳನ್ನು ರದ್ದು ಮಾಡಿ M. C. R. P. ಪ್ರೋಗ್ರಾಂ ತಂದದ್ದು ಲ್ಯಾಂಡ್‌ಲೆಸ್ ಲೇಬರರ್ಸ್ ಸರಿಯಲ್ಲವೆಂಬುದನ್ನು ನಾನು ಒಪ್ಪುವುದಿಲ್ಲ. ಅದರಿಂದ ಹೆಚ್ಚಿನ ಪ್ರಯೋಜನವಿದೆ. ಇನ್ನು ಕೆಲವರು, ಕಾರ್ಕಳದ ಕಾಲನಿಯಲ್ಲಿ ಮನೆಗಳು ಕೆಲವು ದಿವಸ ಇದ್ದು ಈಗ ಮನೆಗಳು ಸಹಿತ ಇಲ್ಲವೆಂದು ಹೇಳಿದರು.

ಈ ರೀತಿ ಅನೇಕ ಕೃಷಿ ಕಾಲೋನಿಗಳು ಆಗಿವೆ. ಕೆಲವು ಕಡೆ ದುರುಪಯೋಗ ಕೂಡ ಆಗಿವೆ. ಈ ದುರುಪಯೋಗವಾದ ಮೇಲೆ ಇವರಿಗೆ ಮಲ್ಟಿಪರ್‌ಪಸ್ ಕೋ ಆಪರೇಟಿವ್ ರಿಹ್ಯಾಬಿಲಿಟೇಷನ್ ಸ್ಕೀಮನ್ನು ಜಾರಿಗೆ ತರಬೇಕೆಂದು ತೀರ್ಮಾನಿಸಿ, ಅಲ್ಲಿ ಕೇವಲ 40—50 ಸಂಸಾರಗಳನ್ನು ಇಟ್ಟು, ಸರಿಯಾಗಿ ಅವರನ್ನು ನೋಡಿಕೊಳ್ಳಲು ಸಿಬ್ಬಂದಿಗಳನ್ನು ಸಹ ಇಡುತ್ತಿದ್ದೇವೆ. ಆ ಕಾಲೋನಿ ಒಂದು ಸರಿಯಾದ ವ್ಯವಸ್ಥೆಯಾಗುವವರೆಗೆ ಈ ಸಿಬ್ಬಂದಿಗಳನ್ನು ಇಟ್ಟಿರುತ್ತೇವೆ. ಹರಿಜನರನ್ನು ಉದ್ಧಾರ ಮಾಡಬೇಕೆನ್ನುವ ದೃಷ್ಟಿಯಿಂದ ಈ ರೀತಿ 50 ಸಂಸಾರಗಳನ್ನು ಒಂದೊಂದು ಕೃಷಿ ಕಾಲೋನಿಯಲ್ಲಿ ಇಟ್ಟು, ಅವರಿಗೆ ಮನೆಯನ್ನು ಸಹ ಕಟ್ಟಿಸಿಕೊಟ್ಟು ಅನುಕೂಲಗಳನ್ನು ಮಾಡಿಕೊಡುತ್ತಿದ್ದೇವೆ. ಈ ರೀತಿಯ ಒಂದು ಸ್ಕೀಮು ಒಳ್ಳೆಯದೆಂದು ಕಾಣುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಲಕ್ಷಗಟ್ಟಲೆ ಹಣವನ್ನು ಸರ್ಕಾರದವರು ಇವರಿಗಾಗಿ ಖರ್ಚು ಮಾಡುತ್ತಿದ್ದರೂ ಸಹ, ಆ ಹಣವನ್ನು ಕೋಆಪರೇಟಿವ್ ಸಂಸ್ಥೆಗಳೇ ತಿಂದು ಸರಿಯಾಗಿ ಸಾಲಗಳನ್ನು ಕೊಡದೆ ಇವರನ್ನು ರಾಷ್ಟ್ರದಲ್ಲಿ ದಿವಾಳಿ ಪ್ರಜೆಗಳನ್ನಾಗಿ ಮಾಡುವ ನೀತಿಯಾಗಿದೆ.

ಶ್ರೀ ಜಿ. ನಾರಾಯಣಗೌಡ.—ಇವರಿಗೆ ಸಾಲ ಕೊಡಬೇಕಾದರೆ ಇವರ ಮನೆಯ ಆಧಾರದ ಮೇಲೆ ಕೊಡುತ್ತೇವೆ. ಇವರನ್ನು ದಿವಾಳಿ ಮಾಡಬೇಕೆನ್ನುವುದು ಸರ್ಕಾರದ ದೃಷ್ಟಿಯಲ್ಲಿ ಇಲ್ಲ. ಬೇಕಾದರೆ ತಾವು ನನ್ನ ಜೊತೆಯಲ್ಲಿ ಬನ್ನಿ, ಎಂತೆಂಥ ಮನೆಗಳನ್ನು ಇವರಿಗಾಗಿ ಕಟ್ಟಿಸಿಕೊಟ್ಟಿದ್ದೇವೆ ಎನ್ನುವುದನ್ನು ತೋರಿಸಿಕೊಡುತ್ತೇನೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಇನ್ನೂ ಮಲ್ಟಿಪರ್‌ಪಸ್ ಕೋ ಆಪರೇಟೀವ್ ರೀಹ್ಯಾಬಿಲಿಟೇಷನ್ ಸ್ಕೀಮ್ ಜಾರಿಗೆ ಬಂದಿಲ್ಲ. ಮಂತ್ರಿಗಳು ಸಹ ಅಲ್ಲಿಗೆ ಹೋಗಿ ನೋಡಿಲ್ಲವೆಂದು ಶ್ರೀ ಜಯಪ್ರಕಾಶ್ ಹೇಳಿದರು. ನಾನು ಅಲ್ಲಿಗೆ ಹೋಗಿದ್ದೇನೆ. ಅಲ್ಲಿ ಹರಿಜನರಿಗಾಗಿ ಏರ್ಪಡಿಸಿರುವ ಕೃಷಿ ಕಾಲೋನಿಯ ಸ್ಥಳ ಅರಣ್ಯ ಇಲಾಖೆಗೆ ಸೇರಿದ್ದು. ಅಲ್ಲಿರುವ ಮರ ಗಿಡಗಳನ್ನು ತೆಗೆದು ಜಮೀನನ್ನು ಕೃಷಿಗೆ ಯೋಗ್ಯವನ್ನಾಗಿ ಮಾಡಲು ಅರಣ್ಯ ಇಲಾಖೆಯವರೇ ಟೆಂಡರ್ ಕರೆದರು. ಆದರೆ ಆ ಕೆಲಸವನ್ನು ತೆಗೆದುಕೊಂಡು ಕಂಟ್ರಾಕ್ಟದಾರ ಕೆಲಸವನ್ನು ಮಾಡಿಕೊಡಲಿಲ್ಲ. ನಂತರ ನಮ್ಮ ಅರಣ್ಯ ಇಲಾಖೆಯ ಮಂತ್ರಿಗಳು ತಮ್ಮ ಅಧಿಕಾರಿಗಳಿಂದ ಮಾಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ನಾನು ಸಹ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅದು ಕೃಷಿಗೆ ಯೋಗ್ಯವಾದ ಭೂಮಿಯಾಗಿದೆ. ಮುಂದೆ ಅದು ಉತ್ತಮವಾದ ಕಾಲೋನಿಯಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಲ್ಲಿ ಇನ್ನೂ ಉಳುಮೆ ಕೂಡ ಪ್ರಾರಂಭವಾಗಿಲ್ಲ.

ಶ್ರೀ ಜಿ. ನಾರಾಯಣಗೌಡ.—ನಿಜ. ಅಲ್ಲಿ ಇನ್ನೂ ಮರಗಿಡಗಳನ್ನೇ ತೆಗೆದಿಲ್ಲ. ಜಾಗ್ರತೆ ಅನುಕೂಲ ಮಾಡಿಕೊಡುತ್ತೇವೆ. ಜಯಪ್ರಕಾಶ್ ನಾರಾಯಣ್ ಅವರು ವಿಷಯ ತಿಳಿಯದೆ ಸುಮ್ಮನೆ ಮಾತನಾಡುವುದಿಲ್ಲವೆಂದು ತಿಳಿದಿದ್ದೇನೆ. ಈ ವಿಚಾರದಲ್ಲಿ ಇವಾಲ್ಯುಯೇಷನ್ ಮಾಡುವ ಅಧಿಕಾರಿಗಳು ಇಲ್ಲವೆಂದು ಹೇಳಿದರು. ಅದು ಸರಿಯಲ್ಲ. ಒಬ್ಬ ಕ್ಲಾಸ್—2 ಆಫೀಸರು ಇದಕ್ಕಾಗಿ ಇದ್ದಾರೆ. ಅವರು ತನಿಖೆ ಮಾಡುತ್ತಿದ್ದಾರೆ.

ಇನ್ನು ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಹೇಳಿದರು. ಅದರೊಳಗೆ ಬಹಳ ಮುಖ್ಯವಾದುದು ಎಂದರೆ, ಅಸ್ಪೃಶ್ಯತೆ ಮತ್ತು ಪಾನನಿರೋಧ. ಅಸ್ಪೃಶ್ಯತೆ ಇನ್ನೂ ಇದೆಯೆಂದು ಹೇಳಿದರು. ನಾವು ಅನೇಕ ವರ್ಷಗಳು ದಾಸ್ಯದಲ್ಲಿ ಇದ್ದೆವು. ನಾವಿನ್ನೂ ನೂರಕ್ಕೆ ನೂರರಷ್ಟು ಕಂದಾಚಾರರು. ಇನ್ನೂ ಕಂದಾಚಾರವನ್ನು ನಾವು ಬಿಟ್ಟಿಲ್ಲ. ಬೇರೆ ಪಂಗಡದವರು ಸವರ್ಣೀಯರು ಅಸ್ಪೃಶ್ಯರಿಗೆ ಕೆಲವೊಂದು ಅವಕಾಶ ಕೊಡದಿರಬಹುದು. ಕೊಟ್ಟ ಸಮಯದಲ್ಲಿ ಅವರು ಉಪಯೋಗಿಸಿಕೊಳ್ಳುವುಕ್ಕೆ ಮುಂದೆ ಬರುತ್ತಾ ಇಲ್ಲ, ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ತಾವು ಸ್ವಪ್ರತಿಷ್ಠೆ ಅಥವಾ ಆತ್ಮ ಪ್ರಶಂಸೆ ಮಾಡಿಕೊಳ್ಳುತ್ತಿದ್ದಾರೆಂದು ಭಾವಿಸಬಾರದು. 1947 ನೇ ಆಗಸ್ಟ್ 15 ರಂದು ನಮಗೆ ಸ್ವಾತಂತ್ರ್ಯ ಬಂತು. ಆಗ ನಮ್ಮ ಊರಿನಲ್ಲಿರುವ ಬಾವಿಯಲ್ಲಿ ಹರಿಜನರು ನೀರೆತ್ತುವಂತೆ ಮಾಡಲು ಮೂರು ನಾಲ್ಕು ದಿವಸ ಪ್ರಯತ್ನ ಪಟ್ಟೆ. ಎಷ್ಟು ಪ್ರಯತ್ನ ಪಟ್ಟರೂ ಸಹ ಯಾರೂ ನೀರೆತ್ತುವುದಕ್ಕೆ ಬರುವುದಿಲ್ಲವೆಂದರು. ನೀರೆತ್ತಿದರೆ ನಮಗೆ ಕೆಡುಕಾಗುತ್ತದೆಂದು ಹೇಳಿದರು. ಏನೂ ಆಗುವುದಿಲ್ಲವೆಂದು ಎಷ್ಟೆಷ್ಟು ಹೇಳಿದರೂ ಸಹ ಒಬ್ಬರೂ ಮುಂದೆ ಬರಲಿಲ್ಲ. ಕೊನೆಗೆ ಒಬ್ಬ ಹರಿಜನರ ಯುವಕನನ್ನು ಮುಂದೆ ತಂದು ಸಾರ್ವಜನಿಕ ಬಾವಿಯಿಂದ ನೀರೆತ್ತಿಸಿದೆ. ಇವತ್ತಿನದಿವಸ ಎಲ್ಲರೂ ಸಹ ಆ ಬಾವಿಯಲ್ಲಿ ನೀರೆತ್ತುತ್ತಿದ್ದಾರೆ ಆದ್ದರಿಂದ ತಾವೆಲ್ಲರೂ ಸಹ ಮುಂದೆ ಬಂದು ಇಂತಹ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಪಡಬೇಕೆಂದು ನನ್ನ ಕೋರಿಕೆ. ಬರಿಯ ಕಾನೂನಿನಿಂದ ಎಲ್ಲವನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಅಸ್ಪೃಶ್ಯತೆ ಕಾನೂನಿನಿಂದ ಹೋಗುವುದಿಲ್ಲ. ಈ ವಿಚಾರದಲ್ಲಿ ಎಷ್ಟು ಕೇಸ್‌ಗಳು ಆಗಿವೆ. ಎಷ್ಟು ಕನ್‌ವಿಕ್‌ಷನ್ ಆಯಿತು ಎಂದು ಕೇಳಿದರು. ಆ ಎಲ್ಲಾ ವಿವರಗಳೂ ನನ್ನಲ್ಲಿ ಇವೆ. ಅದರ ವಿವರಗಳು ಈ ರೀತಿ ಇವೆ.

Year	Total No. of cases	Convicted	Acquitted	Compounded	alse case	Pending	Withdrawn
1964—65	28	5	16	4	1		2
1965—66	32	10	14	5		1	1
(In 1965—66 there is one case under investigation)							
1966—67	29	10	6	6		6	1

ಆದ್ದರಿಂದ ನಾವು ಕಾನೂನು ರೀತ್ಯ ಏನೂ ಕ್ರಮ ಕೈಗೊಂಡಿಲ್ಲವೆಂದು ಹೇಳಲಾಗದು. ಕ್ರಮ ಕೈಗೊಂಡಿದ್ದೇವೆ. ಅಸ್ಪೃಶ್ಯತೆಯ ನಿವಾರಣೆಯ ಬಗ್ಗೆ ನಾನು ಒಂದು ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಸ್ಪೃಶ್ಯತೆ ನಿವಾರಣೆ ಹೋಗುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು. ನಮ್ಮಗಳ ಒಂದು ಪ್ರಯತ್ನದಿಂದ ಈ ಕೆಲಸವಾಗಬೇಕೇ ವಿನಾ ಕಾನೂನಿನ ಒಂದು ಚೌಕಟ್ಟಿನೊಳಗೆ ಈ ಅಸ್ಪೃಶ್ಯತೆ ನಿವಾರಣೆಯಾಗುತ್ತದೆಂದು ನನಗೆ ನಂಬಿಕೆಯಿಲ್ಲ. ತಮಗೆ ಇದ್ದರೆ ಇಟ್ಟುಕೊಳ್ಳಬಹುದು. ಇಷ್ಟು ಏತಕ್ಕೆ ತಮ್ಮ ಮುಂದೆ ಹೇಳುತ್ತೇನೆ ಎಂದರೆ, ನಮ್ಮ ಸ್ನೇಹಿತರು ಕೆಲವರು ಹೇಳಿದರು, ಈ ಅಸ್ಪೃಶ್ಯರಲ್ಲಿಯೇ ಒಳಪಂಗಡಗಳು ಇದ್ದು, ಅವರವರಲ್ಲಿ ಒಂದಾಣಿಕೆಯಿಲ್ಲದೆ ಒಬ್ಬರ ಬಾವಿಯ ನೀರನ್ನು ಮತ್ತೊಬ್ಬರು ಎತ್ತುವುದಿಲ್ಲವೆಂದು. ಇನ್ನು ಬೇರೆಯವರು ಏತಕ್ಕೆ ಈ ಜನಾಂಗದ ಉದ್ಧಾರದ ಬಗ್ಗೆ ಪ್ರಯತ್ನಪಡುತ್ತಾರೆಂದು ಹೇಳಿದರು. ನಾವು ವಾಸ್ತವಾಂಶಗಳನ್ನು ನೋಡಬೇಕು. ನಾವು ಪ್ರಯತ್ನಪಡದ ಹೊರತು ಯಾವ ಕೆಲಸವೂ ಆಗುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಹೇಳಿದ್ದು, ಅಸ್ಪೃಶ್ಯತೆ ಎನ್ನುವುದು ಹಿಂದೆ ಯಾವ ರೀತಿ ಇತ್ತೋ, ಅದೇ ರೀತಿಯಲ್ಲಿ ಏನೂ ಮಾರ್ಪಾಟಾಗದೆ ಈಗಲೂ ಇದೆ ಎಂದು.

7-00 P.M.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಹೊಸ ಮೈಸೂರಿನಲ್ಲಿ ಸಾರ್ವಜನಿಕ ಬಾವಿಗಳಲ್ಲಿ ಎಲ್ಲರೂ ನೀರನ್ನು ತೆಗೆದುಕೊಳ್ಳುತ್ತಾರೆ, ಆದರೆ ಹೊಸ ಮೈಸೂರಿನಲ್ಲಿ ಸಪರೇಟ್ ವೆಲ್ಸ್ ಸ್ಕೀಂ ಇನ್ನೂ ಇದೆ.

ಶ್ರೀ ಜಿ. ನಾರಾಯಣಗೌಡ.—ಅದರ ನಿವಾರಣೆಯ ಬಗ್ಗೆ ಪ್ರಯತ್ನ ಪಡಬೇಕು ಅದೂ ಅಲ್ಲದೇ ಒಂದು ಪಂಗಡದವರು ಇನ್ನೊಂದು ಪಂಗಡದವರ ದೇವಸ್ಥಾನಕ್ಕೆ ಹೋಗುವುದಿಲ್ಲ, ನಾನು ಒಂದು ಸ್ಥಳಕ್ಕೆ ಹೋಗಿದ್ದಾಗ ಆ ಸ್ಥಳದಲ್ಲಿ ಎರಡು ಪಂಗಡಗಳವರು ಬಂದು ಒಂದು ಪಂಗಡದವರು ನಮಗೆ ಒಂದು ಭಜನೆ ಮಂದಿರ ಕೊಡಬೇಕು ಎಂದು ಹೇಳಿದರು, ಬೇರೆ ಪಂಗಡದವರು ಎಷ್ಟು ಮನೆಗಳವರು ಇದ್ದಾರೆ ಎಂದು ಕೇಳಿದ್ದಕ್ಕೆ ನಾವು 10 ಅವರು 12 ಎಂದು ಹೇಳಿದರು, ಎರಡು ಪಂಗಡದವರು ಒಟ್ಟಿಗೆ ಕೇಳುವುದಾದರೆ ಒಂದು ಭಜನೆಮಂದಿರ ಕೊಡುವುದಾಗಿ ಒತ್ತಾಯಮಾಡಿದಾಗ ಅವರು ಒಪ್ಪಿದರು. ನಮ್ಮ ಪ್ರಯತ್ನದಲ್ಲಿ ಇದೆಲ್ಲಾ ಸಾಧ್ಯ. ಮಾಡಬೇಕಾದ್ದನ್ನು ಮಾಡಬಹುದು.

ಇನ್ನು ಕೆಲವು ಸದಸ್ಯರು ರಿಮ್ಯಾಂಡ್ ಹೋಂಸ್, ರೆಸ್ಕ್ಯೂ ಹೋಂಸ್‌ನ್ನು ಪ್ರೈವೇಟ್ ಅಸೋಸಿಯೇಷನ್ಸ್ ಮೂಲಕ ನಡೆಸುತ್ತಾ ಇದ್ದಾರೆ, ಅವರು ಏಕೆ ನಡೆಸಬೇಕು, ಸರ್ಕಾರದವರೇ ಅವನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಸಮಾಜ ಕಲ್ಯಾಣದಲ್ಲಿ ಸರ್ಕಾರವೇ ಭಾಗವಹಿಸುವುದಿಲ್ಲ, ಜನತೆ ಭಾಗವಹಿಸಬೇಕು ಎನ್ನುವುದೂ ಸರ್ಕಾರದ ಆಶೆ ಆದ್ದರಿಂದ ಜನತೆ ಮುಂದೆ ಬಂದಾಗ ಗ್ರ್ಯಾಂಟ್ ಇನ್ ಏಡ್ ಕೊಟ್ಟು ಅವುಗಳಿಗೆ ಸಹಾಯ ಮಾಡುವುದು ಒಂದು ನೀತಿಯಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಆ ಪ್ರೈವೇಟ್ ರಿಮ್ಯಾಂಡ್ ಹೋಂಸ್‌ನಲ್ಲಿ ರಾಜಕೀಯ ಜಾಸ್ತಿಯಾಗಿದೆ, ಅದನ್ನು ಸರಿಪಡಿಸುವವರು ಯಾರೂ ಇಲ್ಲ, ಆದ್ದರಿಂದ ನೀವೇನೇ ತೆಗೆದುಕೊಳ್ಳಿ ಎಂದು ಹೇಳುತ್ತಾ ಇದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಅಲ್ಲಿ ರಾಜಕೀಯ ಜಾಸ್ತಿಯಾಗಿರುವುದು ಗೊತ್ತಿಲ್ಲ. ಸಾಧ್ಯವಾದಷ್ಟೂ ಜನತೆಯ ಸಂಪರ್ಕ ಇರಲಿ ಎಂಬ ದೃಷ್ಟಿಯಿಂದ ಗ್ರ್ಯಾಂಟ್ಸ್ ಕೊಟ್ಟುಕೊಂಡು ನಡೆಸಿಕೊಂಡು ಬರುತ್ತಾ ಇದ್ದೇವೆ. ಅದಕ್ಕೆ ಅವಕಾಶ ಮಾಡಿದ್ದೇವೆ. ಇನ್ನು ಕೆಲವು ಮಾನ್ಯ ಸದಸ್ಯರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಅವರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾ ಈ ಬೇಡಿಕೆಯನ್ನು ತಾವುಗಳೆಲ್ಲರೂ ಒಪ್ಪಿ ಇದಕ್ಕೆ ಒಮ್ಮತದಿಂದ ತಮ್ಮ ಮತ ಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

Mr. SPEAKER.—After the splendid speech by the Hon'ble Minister there is no scope for clarifications.

The question is:

"That a sum not exceeding Rs. 2,93,65,000 be granted to the Government to defray the charges which will come in course of payment during the financial year for the period ending 31st day of March 1968 in respect of Demand No. 27—'39. Miscellaneous, Social and Developmental Organisations'."

The motion was adopted.

The House will now stand adjourned to re-assemble tomorrow at 8-30 A.M.

The House adjourned at Five Minutes past Seven of the Clock to meet at Thirty Minutes past Eight of the Clock on Saturday, the 15th July 1967.

WD 9055—GPB—500—16-9-1967